ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 15 ಮಂಗಳವಾರ 2023

ಸಂಪುಟ: 44 | ಸಂಚಿಕೆ: 121 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಪಲ್ಸರ್ ಬೈಕ್‌ಗೆ ಮಹಿಂದ್ರ ಥಾರ್ ಎಸ್‌ಯುವಿ ಡಿಕ್ಕಿ ಕೆಎಸ್‌ಆರ್‌ಪಿ ಕಾನ್‌ಸ್ಟೇಬಲ್‌ಗಳು ದುರ್ಮರಣ



ಲಲಿತಮಹಲ್ ರಸ್ತೆಯಲ್ಲಿ ಭಾನುವಾರ ರಾತ್ರಿ ದುರಂತ

ಮೈಸೂರು,ಆ.14(ಆರ್‌ಕೆ)– ಬಜಾಜ್ ಪಲ್ಸರ್ ಬೈಕ್‌ಗೆ ಮಹಿಂದ್ರ ಥಾರ್ ಎಸ್‌ಯುವಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಪಿಯ ಇಬ್ಬರು ಕಾನ್‌ಸ್ಟೇಬಲ್‌ಗಳು ದುರ್ಮರಣಕ್ಕೀಡಾಗಿದ್ದಾರೆ. ಈ ದುರಂತ ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿ ಭಾನುವಾರ ರಾತ್ರಿ ಸಂಭವಿಸಿದೆ.

ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಪಿ.ಮಹೇಶ(26) ಹಾಗೂ ಬಿಜಾಪುರ ಜಿಲ್ಲೆ ಜಮಖಂಡಿ ತಾಲೂಕಿನ ಅಮರನಾಥ್ ತಾಳಿಕೋಟೆ(25) ದುರಂತದಲ್ಲಿ ಸಾವಿಗೀಡಾದವರು. ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ)ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು, ಸಿದ್ಧಾರ್ಥನಗರ ಬಳಿ ಊಟ ಮಾಡಿ ಪಲ್ಸರ್ ಬೈಕ್‌ನಲ್ಲಿ ಮಾಲ್ ಆಫ್ ಮೈಸೂರ್ ಕಡೆಗೆ ಬರುತ್ತಿದ್ದಾಗ ಎದುರಿನಿಂದ ವೇಗವಾಗಿ ಬಂದ ಮಹಿಂದ್ರ ಥಾರ್ ಎಸ್‌ಯುವಿ ವಾಹನ, ಲಲಿತಮಹಲ್ ರಸ್ತೆಯ ಕಮಾನು ಗೇಟ್ ಬಳಿ ಭಾನುವಾರ ರಾತ್ರಿ ಡಿಕ್ಕಿ ಹೊಡೆದಿದೆ. ಥಾರ್ ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸುಮಾರು 10 ಮೀಟರ್ ದೂರ ಹೋಗಿ ಬಿದ್ದಿದೆ. ಈ ವೇಳೆ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ನಂತರ ಪರಾರಿಯಾಗಲೆತ್ನಿಸಿದ ಥಾರ್ ಚಾಲಕ ವಿನಯ್‌ನನ್ನು ಬೆನ್ನಟ್ಟಿದ ಸಾರ್ವಜನಿಕರು ಆಲನಹಳ್ಳಿ ಸಮೀಪ ಹಿಡಿದು ಪೊಲೀಸರಿಗೊಪ್ಪಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇಂದು ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಅಮರನಾಥ್ ಅವರ ದೇಹವನ್ನು ಆಂಬುಲೆನ್ಸ್ ಮೂಲಕ ಕೆಎಸ್‌ಆರ್‌ಪಿ ಇನ್ಸ್‌ಪೆಕ್ಟರ್ ಹಾಗೂ ಇಬ್ಬರು ಕಾನ್‌ಸ್ಟೇಬಲ್‌ಗಳೊಂದಿಗೆ ಜಮಖಂಡಿಗೆ ಕಳುಹಿಸಲಾಯಿತು. 2017ರಲ್ಲಿ ಪೊಲೀಸ್ ಇಲಾಖೆಗೆ ಸೇರಿದ ಅವರು, ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಕೆಎಸ್‌ಆರ್‌ಪಿ 5ನೇ ಬೆಟಾಲಿಯನ್‌ನಲ್ಲಿ ಕಾನ್‌ಸ್ಟೇಬಲ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಪರಿಶಿಷ್ಟರ ಅನುದಾನ ಗ್ಯಾರಂಟಿಗೆ ಬಳಸದಂತೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಆ.14(ಪಿಎಂ)–ರಾಜ್ಯ ಸರ್ಕಾರ ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನದಲ್ಲಿ 11 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುವ ನಿರ್ಧಾರ ಕೈಬಿಡಬೇಕೆಂದು ಒತ್ತಾಯಿಸಿ ಅಖಿಲ ಭಾರತ ದಲಿತರ ಹಕ್ಕುಗಳ ಆಂದೋಲನ ಸಂಘಟನೆಯ ಮೈಸೂರು ಜಿಲ್ಲಾ ಮಂಡಳಿ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದ ನೂತನ ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಉಪಯೋಜನೆಗಾಗಿ ಮೀಸಲಿಟ್ಟಿರುವ ಅನುದಾನದಲ್ಲಿ 11 ಸಾವಿರ ಕೋಟಿ ರೂ.ಗಳನ್ನು 5 ಗ್ಯಾರಂಟಿ ಯೋಜನೆಗಳಡಿ ಇದೇ ವರ್ಗದ ಫಲಾನುಭವಿಗಳಿಗೆ ವೆಚ್ಚ ಮಾಡುವ ನಿರ್ಧಾರವನ್ನು ಸರ್ಕಾರ ಕೈಬಿಡಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ಪದಾಧಿಕಾರಿಗಳಾದ ರಾಜು, ಜೆ.ಶಿವಣ್ಣ, ನಂಜನಾಯಕ, ಮಹದೇವ ಎಸ್.ಕಲ್ಲಹಳ್ಳಿ, ಹರೀಶ್, ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಹ ಕಾರ್ಯದರ್ಶಿ ಸೋಮರಾಜೇ ಅರಸ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆ.16, 17ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು,ಆ.14–ಕಬಿನಿ ಮೂಲ ಸ್ಥಾವರದಲ್ಲಿ ಮುಖ್ಯ ನೀರು ಸರಬರಾಜು ಕೊಳವೆ ಮಾರ್ಗದ ತುರ್ತು ದುರಸ್ತಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.16, ಆ.17ರಂದು ವಾರ್ಡ್ ನಂ.45ರಿಂದ 51 (ಶಾರದಾದೇವಿನಗರ, ದಟ್ಟಗಳ್ಳಿ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ 54ರಿಂದ 65 (ಗುಂಡೂರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ ಸಿಐಟಿಬಿ, ರಾಮಕೃಷ್ಣನಗರ, ಕುವೆಂಪು ನಗರ ಎಂ–ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯ ಪುರಂ ಭಾಗಶಃ ಪ್ರದೇಶ, ವಿಶ್ವೇ ಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ) ಪ್ರದೇಶಗಳಲ್ಲಿ ನೀರು ಸರಬರಾಜಿರುವುದಿಲ್ಲ ಎಂದು ವಿವಿ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.

ನಿಧನ



ಪಿ.ಮುರಳಿ

ಮೈಸೂರಿನ ಗಾಂಧಿನಗರ ಸಿದ್ದಪ್ಪಾಜಿ ದೇವಸ್ಥಾನದ ರಸ್ತೆ ನಿವಾಸಿ ಮತ್ತು ಲೇ. ಪುಟ್ಟರಂಗಯ್ಯ ಅವರ ಪುತ್ರ ಪಿ.ಮುರಳಿ (62) ಅವರು ಹೃದಯಾಘಾತದಿಂದ ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಶ್ರೀಮತಿ ಮಂಜುಳಾ, ಮಕ್ಕಳಾದ ಎಂ.ಗೋವರ್ಧನ್ (ಗಗನ್), ಎಂ.ಹರ್ಷವರ್ಧನ್, ತಾಯಿ ಪುಟ್ಟಮಾದಮ್ಮ, ತಮ್ಮಂದಿರಾದ ಪಿ.ಲಕ್ಷ್ಮೀನಾರಾಯಣ, ಪಿ.ಪ್ರಸನ್ನ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಗಾಂಧಿನಗರದ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿಂದು 77ನೇ ಸ್ವಾತಂತ್ರ್ಯೋತ್ಸವ ಆಚರಣೆ

ಮೈಸೂರು, ಆ.14(ಆರ್‌ಕೆ)–ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಾಳೆ (ಆ.15) 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಂಗಳವಾರ ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ನೆರವೇರಿಸುವರು. ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಹರೀಶ್ ಗೌಡ, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ ಸೇರಿದಂತೆ ಜಿಲ್ಲೆಯ ಶಾಸಕರು, ವಿಧಾನಪರಿಷತ್ ಸದಸ್ಯರು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರಪಾಲಿಕೆ, ಮುಡಾ, ಜಿಲ್ಲಾ ಪಂಚಾಯ್ತಿ ಪೊಲೀಸ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸಿವಿಲ್, ಸಂಚಾರ ಪೊಲೀಸ್, ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಜೈಲು ವಾರ್ಡರ್‌ಗಳು, ಅರಣ್ಯ ಇಲಾಖೆ, ಅಬಕಾರಿ, ಎನ್‌ಸಿಸಿ ಸೇರಿದಂತೆ ವಿವಿಧ ತಂಡಗಳು ಆಕರ್ಷಕ ಪಥಸಂಚಲನ ಪ್ರದರ್ಶಿಸಲಿದ್ದು, ಶಾಲಾ ಮಕ್ಕಳು ನೃತ್ಯ ಪ್ರದರ್ಶನ ನೀಡುವರು. ಸಂಜೆ 5 ಗಂಟೆಗೆ ಕಲಾಮಂದಿರದಲ್ಲಿ ಶಾಲಾ–ಕಾಲೇಜು, ಸರ್ಕಾರಿ ನೌಕರರು ಹಾಗೂ ಸಂಘ–ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಕ್ಕೆ ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಭಾರೀ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ.

ಮೈಸೂರು ಜೈಲಿನಿಂದ 7 ಮಂದಿ ಕೈದಿಗಳ ಬಿಡುಗಡೆ

ಮೈಸೂರು, ಆ.14(ಆರ್‌ಕೆ)– ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ನಾಳೆ (ಆ.15) 77ನೇ ಸ್ವಾತಂತ್ರ್ಯ ದಿನದಂದು ಮೈಸೂರು ಕಾರಾಗೃಹದಿಂದ ಅಲ್ಪಾವಧಿ ಶಿಕ್ಷೆ ಅನುಭವಿಸುತ್ತಿರುವ 7 ಮಂದಿ ಪುರುಷ ಕೈದಿಗಳನ್ನು ಬಿಡುಗಡೆ ಮಾಡಲಾಗುವುದು. ಮಂಗಳವಾರ ಕೇವಲ ಅಲ್ಪಾವಧಿ ಶಿಕ್ಷೆಗೊಳಗಾದ 7 ಮಂದಿ ಬಿಡುಗಡೆಗೆ ಸರ್ಕಾರ ಆದೇಶಿಸಿದೆ. ಜೀವಾವಧಿ ಶಿಕ್ಷೆಗೊಳಗಾದವರನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಆ ಸಂಬಂಧ ಇನ್ನೂ ಆದೇಶ ಬಂದಿಲ್ಲ ಎಂದು ಮೈಸೂರು ಜೈಲಿನ ಚೀಫ್ ಸೂಪರಿಂಟೆಂಡೆಂಟ್ ರಮೇಶ್ ತಿಳಿಸಿದ್ದಾರೆ.

ತ.ನಾಡಿಗೆ ಕಾವೇರಿ ನೀರು ಬಿಡದಂತೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಆ.14(ಪಿಎಂ)–ಖಾಲಿ ಕೊಡಗಳನ್ನು ಪ್ರದರ್ಶಿಸುವ ಮೂಲಕ ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆಯ ಕೊರತೆಯಿಂದ ರಾಜ್ಯದ ಜಲಾಶಯಗಳು ಇನ್ನೂ ಭರ್ತಿಯಾಗಿಲ್ಲ. ಈ ಸಂದರ್ಭದಲ್ಲಿ ಕಾವೇರಿ–ಕಪಿಲ ನದಿಗಳಿಂದ ತಮಿಳುನಾಡಿಗೆ 12 ಸಾವಿರ ಕ್ಯೂಸೆಕ್ಸ್ ನೀರನ್ನು ಪ್ರತಿದಿನ ಬಿಡುವಂತೆ ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ಆದೇಶ ನೀಡಿದ್ದು, ಇದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸದರಿ ಪ್ರಾಧಿಕಾರ ರದ್ದುಗೊಳಿಸಬೇಕು. ಕಾವೇರಿ ನೀರಿನ ಹಕ್ಕನ್ನು ಕಾಪಾಡಲು ರಾಷ್ಟ್ರೀಯ ಜಲನೀತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಹರದನಹಳ್ಳಿ ಬಸವರಾಜು, ದೂರ ಸುರೇಶ್, ಸಂಧ್ಯಾ, ಕುಮಾರ್, ಮಣಿರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಾಡಿಕೆಯಂತೆ ಪೂರ್ಣ ಪ್ರಮಾಣದ ದಸರಾ ನಡೆಯಲಿ

ಮೈಸೂರು,ಆ.14(ಆರ್‌ಕೆ)–ವಾಡಿಕೆಯಂತೆ ಪೂರ್ಣ ಪ್ರಮಾಣದಲ್ಲಿ ದಸರಾ ಮಹೋತ್ಸವ ನಡೆಯಲಿ ಎಂದು ಸಲಹೆ ನೀಡಿರುವುದಾಗಿ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.



ಮೈಸೂರಿನ ಅಶೋಕಪುರಂ ರೈಲು ನಿಲ್ದಾಣ ನವೀಕರಣ ಕಾಮಗಾರಿ ಪರಿಶೀಲಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಕೊರೊನಾದಿಂದಾಗಿ 2020ರಿಂದ 2021ರವರೆಗೆ ಸರಳವಾಗಿ ಆಚರಿಸಲಾಯಿತು. ಕಳೆದ ವರ್ಷವೂ ಪೂರ್ಣ ಪ್ರಮಾಣದಲ್ಲಿ ನಾಡಹಬ್ಬ ಆಚರಿಸಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಾಂದಿ ಹಾಡಲಾಗಿತ್ತು. ಈ ಬಾರಿಯೂ ವಾಡಿಕೆಯಂತೆ ಪೂರ್ಣ ಪ್ರಮಾಣದಲ್ಲಿ ದಸರಾ ಮಾಡೋಣ ಎಂದು ಸಲಹೆ ನೀಡಿದ್ದೇನೆ ಎಂದರು.

ವಿಜಯದಶಮಿ ಮೆರವಣಿಗೆಯಂದು ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಸೀರೆ ತೊಡಿಸುವ ಬಗ್ಗೆ ತೀವ್ರ ಪೈಪೋಟಿ ಇದ್ದ ಕಾರಣ ಕಳೆದ ವರ್ಷವೇ ಸರ್ಕಾರದಿಂದಲೇ ಸೀರೆ ತಂದು ದೇವಿಗೆ ತೊಡಿಸುವುದು ಎಂದು ನಿರ್ಧರಿಸಲಾಗಿದೆ ವಿದ್ಯುದ್ದೀಪಾಲಂಕಾರವನ್ನು ಮೈಸೂರು ನಗರಾದ್ಯಂತ ರಿಂಗ್ ರಸ್ತೆ ಒಳಗಿನ ಎಲ್ಲಾ ರಸ್ತೆ, ಜಂಕ್ಷನ್‌ಗಳಿಗೆ ಮಾಡುವುದು, ವಿಂಟೇಜ್ ಕಾರ್ ರ್‍ಯಾಲಿ ಏರ್ಪಡಿಸಲಾಗುವುದು ಎಂದರು. ಮಹಿಷಾ ದಸರಾ ಮುಗಿದ ಅಧ್ಯಾಯ. ಚಾಮುಂಡೇಶ್ವರಿಗೆ ವಿಶೇಷ ಪೂಜೆ ಮಾಡುವ ಮೂಲಕ ಸಂವೇದನೆಯಿಂದ ಎಲ್ಲರೂ ಸೇರಿ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸೋಣ ಎಂದರು.



ಮೈಸೂರಿನ ಚಾಮರಾಜಪುರಂನಲ್ಲಿರುವ ಹೋಟೆಲ್ ಏರ್‌ಲೈನ್ಸ್‌ನ ಟರ್ಮರಿಕ್ ಕಿಚನ್ ಮಲ್ಟಿಕ್ಯುಸಿನ್ ವೆಜಿಟೇರಿಯನ್ ರೆಸ್ಟೋರೆಂಟ್‌ನ ಪ್ರಥಮ ವಾರ್ಷಿಕೋತ್ಸವದ ಸಮಾರಂಭದಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಅಭಿನಂದಿಸ ಲಾಯಿತು. ಈ ವೇಳೆ ವಕೀಲರೂ ಆದ 'ಲಾ ಗೈಡ್' ಸಂಪಾದಕ ಹೆಚ್.ಎನ್.ವೆಂಕಟೇಶ್, ಉದ್ಯಮಿಗಳಾದ ಎಂ.ಡಿ. ಹರೀಶ್‌ಕುಮಾರ್ ಹೆಗಡೆ, ಪತ್ನಿ ಜಯಪದ್ಮ ಹೆಚ್.ಹೆಗಡೆ, ಪುತ್ರರಾದ ಅಭಿಷೇಕ್ ಹೆಗಡೆ, ಅಭಿಜಿತ್ ಹೆಗಡೆ ಉಪಸ್ಥಿತರಿದ್ದಾರೆ.

ಇಂದು ಯುವ ಕಾಂಗ್ರೆಸ್‌ನಿಂದ ಸ್ವಾತಂತ್ರ್ಯ ದಿನಾಚರಣೆ



ಮೈಸೂರು,ಆ.14(ಪಿಎಂ)– ಯುವ ಕಾಂಗ್ರೆಸ್ ಮೈಸೂರು ನಗರ ಘಟಕದ ವತಿಯಿಂದ ಆ.15ರಂದು ಮೈಸೂರು ನಗರದ ಮೂರು ವಿಧಾನಸಭಾ ಕ್ಷೇತ್ರಗಳ 6 ಬ್ಲಾಕ್‌ಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಹಮ್ಮಿಕೊಂಡಿದ್ದು, ಎಲ್ಲೆಡೆ ಮಹಿಳಾ ಸಾಧಕರು ರಾಷ್ಟ್ರದ ಧ್ವಜಾರೋಹಣ ಮಾಡಲಿದ್ದಾರೆ ಎಂದು ನಗರ ಘಟಕದ ಅಧ್ಯಕ್ಷ ಸೈಯದ್ ಅಬ್ರಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಯುವ ಕಾಂಗ್ರೆಸ್ ವತಿಯಿಂದ ಈ ಕಾರ್ಯಕ್ರಮವನ್ನು ಇಡೀ ದೇಶದಾದ್ಯಂತ ನಾಳೆ ಆಯೋಜಿಸಲಾಗಿದೆ. ಎಲ್ಲೆಡೆ ಮಹಿಳಾ ಸಾಧಕರನ್ನು ಆಹ್ವಾನಿಸಿ ಅವರಿಂದ ಧ್ವಜಾರೋಹಣ ಮಾಡಿಸಲಾಗುತ್ತಿದೆ ಎಂದರು.

ಅಂತೆಯೇ ನಗರ ಘಟಕದ ವತಿಯಿಂದ ಮೈಸೂರಿನ 6 ಬ್ಲಾಕ್‌ಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಪೈಕಿ ಚಾಮರಾಜ ಕ್ಷೇತ್ರ ವ್ಯಾಪ್ತಿಯ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ಬೆಳಗ್ಗೆ 9ಕ್ಕೆ ಹಮ್ಮಿಕೊಂಡಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಮತ್ತು ಶಾಸಕ ಕೆ.ಹರೀಶ್‌ಗೌಡ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಮಹಿಳಾ ಸಾಧಕರೊಬ್ಬರು ಧ್ವಜಾರೋಹಣ ಮಾಡಲಿದ್ದಾರೆ ಎಂದರು. ಯುವ ಕಾಂಗ್ರೆಸ್ ನಗರ ಘಟಕದ ಪ್ರಧಾನ ಕಾರ್ಯದರ್ಶಿ ರಕ್ಷಿತಾ ಬಂಗೇರಾ, ಕಾರ್ಯದರ್ಶಿ ಪ್ರಿಯಾ, ಪದಾಧಿಕಾರಿಗಳಾದ ಪ್ರವೋದ್, ಅಮರಿನ್ ತಾಜಾ ಗೋಷ್ಠಿಯಲ್ಲಿದ್ದರು.

ಸ್ಥಳೀಯ ಸಂಸ್ಥೆಗಳಿಗೆ 35 ಸಾವಿರ ತ್ರಿವರ್ಣ ಧ್ವಜ ಹಂಚಿಕೆ



ಮೈಸೂರು,ಆ.14(ಎಂಟಿವೈ)– ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಗೆ 35 ಸಾವಿರ ತ್ರಿವರ್ಣ ಧ್ವಜ ಹಂಚಿಕೆ ಮಾಡಿದೆ.


ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕೇಂದ್ರ ಸರ್ಕಾರ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ತ್ರಿವರ್ಣ ಧ್ವಜ ಮಾರಾಟಕ್ಕೆ ಮುಂದಾಗಿದ್ದು, ಆ.13ರಂದು ಮೈಸೂರು ಜಿಲ್ಲೆಗೆ 20x30 ಇಂಚು ಅಳತೆಯ 35 ಸಾವಿರ ತ್ರಿವರ್ಣ ಧ್ವಜ ಪೂರೈಸಿದೆ.

ಮೈಸೂರು ಜಿಲ್ಲೆಯ ಪುರಸಭೆ, ಪಟ್ಟಣ ಪಂಚಾಯ್ತಿ, ನಗರಸಭೆ ಹಾಗೂ ವಿವಿಧ ಗ್ರಾ.ಪಂ ಮೂಲಕ ತ್ರಿವರ್ಣ ಧ್ವಜ ಮಾರಾಟಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಸೋಮವಾರ ಮಧ್ಯಾಹ್ನದ ವೇಳೆ ಸ್ಥಳೀಯ ಸಂಸ್ಥೆಗಳ ಕಚೇರಿಗೆ ತ್ರಿವರ್ಣ ಧ್ವಜ ವಿತರಿಸಲಾಗಿದೆ. ಈ ಸಂಬಂಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ಸುದರ್ಶನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರ ಕಳುಹಿಸಿಕೊಟ್ಟಿರುವ 35 ಸಾವಿರ ತ್ರಿವರ್ಣ ಧ್ವಜವನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ರಾಜ್ಯ ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ ಅವರ ಆದೇಶದಂತೆ ಒಂದು ಧ್ವಜಕ್ಕೆ 25 ರೂ. 50 ಪೈಸೆ ದರಕ್ಕೆ ಮಾರಾಟ ಮಾಡಲಾಗುತ್ತಿದೆ. ಮಾರಾಟ ಮಾಡಿ ಸಂಗ್ರಹವಾದ ಮೊತ್ತವನ್ನು ಜಿಲ್ಲಾಧಿಕಾರಿ ಹೆಸರಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಆ ಮೊತ್ತ ಕೇಂದ್ರ ಸರ್ಕಾರಕ್ಕೆ ಜಮೆಯಾಗುತ್ತದೆ ಎಂದರು.



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ತುಮಕೂರಿನ ಅವರ ನಿವಾಸದಲ್ಲಿ ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗದ ವತಿಯಿಂದ ಬಾದಾಮಿ ಹಾರ ಹಾಕಿ, ಅಭಿನಂದಿಸಲಾಯಿತು. ಈ ವೇಳೆ ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗಡೆ, ಬ್ಲಾಕ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಬಳಗದ ಅಧ್ಯಕ್ಷ ಪದ್ಮನಾಭನ್, ಉಮೇಶ್, ಕೆಂಪರಾಜೇ ಅರಸ್, ರಂಗನಾಥ್, ಸಂತೋಷ್, ಸ್ವಾಮಿ, ಲಕ್ಷ್ಮೀಪತಿ ರಾಜ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

16.8.2023 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್‌ಹಾತ್:** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ನಿಶಾತ್ ಮೋಹನ್, ಮಿಸ್ಬಾ ಉಮ್ರೀನ್:** ಪನಾಚೆ ಡಿಸೈನರ್ಸ್ ಪ್ರದರ್ಶನ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಬೆಳಗ್ಗೆ 11 ರಿಂದ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಶ್ರೀನಿವಾಸಾಚಾರ್ಯ ಕೊರ್ಲಹಳ್ಳಿ ಅವರಿಂದ ಯುದ್ಧಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **36ನೇ ಚಾತುರ್ಮಾಸ್ಯ ಸಮಿತಿ :** ಪರಮ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಕಲಾವಿದರಿಂದ ಸಾಂಸ್ಕೃತಿಕ ಹಬ್ಬ, ವಿದುಷಿ ಅಕ್ಷತಾ ರುದ್ರಪಟ್ಟಣ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ಗಂಟೆಗೆ.

■ **ಚಿನ್ಮಯ ಮಿಷನ್, ಮೈಸೂರು:** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ ನಾಲ್ಕನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ ಮೂರನೇ ಹಂತ, ಸಂಜೆ 6.30ರಿಂದ.

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ಶ್ರೀ ನಂಜುಂಡ ಸ್ವಾಮಿಗಳು, ಅಧ್ಯಕ್ಷತೆ: ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಉದ್ಘಾಟನೆ: ಪೊಲೀಸ್ ಅಧೀಕ್ಷಕಿ ಸೀಮಾ ಲಾಟ್ಕರ್, ಸ್ಥಳ: ಸುತ್ತೂರು, ಸಂಜೆ 6.30ಕ್ಕೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಮೈಸೂರು ಅರ್ಬನ್‌ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಹಿರಿಯ ಲೇಖಕ ಟಿ.ಎಸ್.ನಾಗರಾಜರಾವ್ ಸಂಪಾದಿತ ಸದ್ಗುರು ದರ್ಶನ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಲೋಕಾರ್ಪಣೆ: ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ.ನಾಗರಾಜರಾವ್, ಮುಖ್ಯ ಅತಿಥಿಗಳು: ಡಾ.ಕೆ.ರಘುರಾಂ ವಾಜಪೇಯಿ, ಉಪಸ್ಥಿತರು: ಲೇಖಕ ಟಿ.ಎಸ್.ನಾಗರಾಜರಾವ್, ರಂಗನಾಥ್, ಬಿ.ಪಿ. ಅಶ್ವತ್ಥನಾರಾಯಣ, ಸ್ಥಳ: ನಮನ ಕಲಾ ಮಂಟಪ, ಬೆಳಗ್ಗೆ 10.30ಕ್ಕೆ.

■ **ನಾಟ್ಯ ಸಭಾ :** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನೃತ್ಯ ಕಲಾವಿದೆ ಡಾ.ಕೃಪಾ ಫಡ್ಕೆ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ರಮಾ ಗೋವಿಂದ ಕಲಾವೇದಿಕೆ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಶ್ರೀನಿವಾಸಾಚಾರ್ಯ ಕೊರ್ಲಹಳ್ಳಿ ಅವರಿಂದ ಯುದ್ಧ ಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 6ರಿಂದ 7ರವರೆಗೆ.

■ **36ನೇ ಚಾತುರ್ಮಾಸ್ಯ ಸಮಿತಿ:** ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಕಲಾವಿದರಿಂದ ಸಾಂಸ್ಕೃತಿಕ ಹಬ್ಬ, ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರಿಂದ ಬಾನ್ಸುರಿ ವಾದನ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ಗಂಟೆಗೆ.

■ **ಚಿನ್ಮಯ ಮಿಷನ್, ಮೈಸೂರು:** ಸ್ವಾಮಿ ಗಹನಾನಂದ ಅವರಿಂದ ಜ್ಞಾನಯೋಗ (ಭಗವದ್ಗೀತೆಯ 4ನೇ ಅಧ್ಯಾಯ) ಕುರಿತು ಪ್ರವಚನ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, ಸಂಜೆ 6.30ರಿಂದ.



ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಗಳು

■ **ವಿಶ್ವಮಾನವ ವಿದ್ಯಾನಿಕೇತನ :** 77ನೇ ಸ್ವಾತಂತ್ರ್ಯೋತ್ಸವ, ಮುಖ್ಯ ಅತಿಥಿಗಳು: ನಾಗವಾಲ ಪಿಡಿಓ ಡಾ.ಶೋಭಾರಾಣಿ, ಅತಿಥಿಗಳು: ಮಾರ್ಲ್‌ಬ್ಸ್ ಮುಖ್ಯಸ್ಥ ಕೆ.ಸಿ.ಚನ್ನಕೇಶವ, ಸ್ಥಳ: ವಿಶ್ವಮಾನವ ವೇದಿಕೆ, 7.30ಕ್ಕೆ.

■ **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು :** ಸ್ವಾತಂತ್ರ್ಯೋತ್ಸವ, ಧ್ವಜಾರೋಹಣ: ನಿವೃತ್ತ ಸೈನ್ಯಾಧಿಕಾರಿ ಕರ್ನಲ್ ಬಿ.ಎಸ್.ಸತೀಶ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಮುಖ್ಯ ಅತಿಥಿಗಳು: ಶಿವಲಿಂಗಯ್ಯ, ಸ್ಥಳ: ಬಯಲು ರಂಗಮಂದಿರ, ಬೆಳಗ್ಗೆ 7.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** ಸ್ವಾತಂತ್ರ್ಯ ದಿನಾಚರಣೆ, ಸ್ಥಳ: ಕ್ರಾಫರ್ಡ್ ಭವನ ಮುಂಭಾಗ, ಬೆಳಗ್ಗೆ 7.30ಕ್ಕೆ.



ಇಂದಿನ ಪಂಚಾಂಗ

15.8.2023 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 4.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮುಖ್ಯ ಭಾಷಣಕಾರರು: ವಿಶ್ರಾಂತ ಕುಲಪತಿ ಪ್ರೊ. ಕೆ.ಚಿದಾನಂದಗೌಡ, ಉಪಸ್ಥಿತರು: ಕರಾಮುವಿವಿ ಕುಲಸಚಿವ ಪ್ರೊ.ಮೂರ್ತಿ, ಪ್ರಾಸ್ತಾವಿಕ ನುಡಿ: ನೋಡಲ್ ಅಧಿಕಾರಿ ಡಾ.ಚಂದ್ರೇಗೌಡ, ಸ್ಥಳ: ಆಡಳಿತ ಭವನ ಮುಂಭಾಗ, ಕರಾಮುವಿವಿ, ಬೆಳಗ್ಗೆ 8ಕ್ಕೆ.

■ **ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್:** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಮಹಿಳಾ ಪೌರಕಾರ್ಮಿಕರಾದ ಪಲ್ಲಮ್ಮ ಅಧ್ಯಕ್ಷತೆ: ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ, ವಿಶೇಷ ಆಹ್ವಾನಿತರು: ಇಂದಿರಾ ನರ್ಸಿಂಗ್ ಹೋಂನ ಮಾಲೀಕ ಡಾ.ಭುವನೇಂದ್ರ ಬಾಬು, ಸ್ಥಳ: ರಂಗಮಂದಿರ, ಇಂದಿರಾ ನರ್ಸಿಂಗ್ ಹೋಂ ಎದುರು, ವಿಜಯನಗರ ರೈಲ್ವೆ ಲೇಔಟ್, ಬೆಳಗ್ಗೆ 8ಕ್ಕೆ.

■ **ಶ್ರೀರಾಮಕೃಷ್ಣ ವಿದ್ಯಾಕೇಂದ್ರ:** ಸ್ವಾತಂತ್ರ್ಯ ದಿನಾಚರಣೆ, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಪಾಪೇಗೌಡ, ಮುಖ್ಯ ಅತಿಥಿಗಳು: ಕರಾಮುವಿ ವಿಶ್ರಾಂತ ಕುಲಪತಿ ಡಾ.ರಾಮೇಗೌಡ, ಸ್ಥಳ: ಶಾಲೆ ಆವರಣ, ಬೆಳಗ್ಗೆ 8ಕ್ಕೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು:** ಸ್ವಾತಂತ್ರ್ಯೋತ್ಸವ ಆಚರಣೆ, ಅಧ್ಯಕ್ಷತೆ: ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ನರಹರಿಬಾಬು, ಧ್ವಜಾರೋಹಣ: ಕರ್ನಲ್ (ನಿವೃತ್ತ) ಸುರೇಂದ್ರನಾಥ್, ಉಪಸ್ಥಿತರು: ಸಹ ಕಾರ್ಯದರ್ಶಿ ಪ್ರೊ.ಹಿರಿಯಣ್ಣ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣ, ಬೆಳಗ್ಗೆ 8ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ:** ಸ್ವಾತಂತ್ರ್ಯ ದಿನಾಚರಣೆ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಹಿರಿಯ ಗಾಂಧಿ ಮಾರ್ಗಿ ಸೀತಾರಾಂ, ಅಧ್ಯಕ್ಷತೆ: ಪ್ರೊ.ಶಿವರಾಜಪ್ಪ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 8ಕ್ಕೆ

■ **ಮಹಾಬೋಧಿ ಶಾಲೆ :** ಸ್ವಾತಂತ್ರ್ಯ ದಿನಾಚರಣೆ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಲ್.ನಾಗೇಂದ್ರ ಗೌರವ ಅತಿಥಿಗಳು: ಗೋವಿಂದಪ್ಪ, ಸುರೇಂದರ್ ಸಿಂಗ್, ಡಾ.ಗಿರಿಧರ್, ಸ್ಥಳ: ಶಾಲೆ ಆವರಣ, ಬೆಳಗ್ಗೆ 8ಕ್ಕೆ.

■ **ಜೆಎಸ್‌ಎಸ್ ಪ್ರೌಢಶಾಲೆ:** ಸ್ವಾತಂತ್ರ್ಯೋತ್ಸವ ಸಂಭ್ರಮ, ಅಧ್ಯಕ್ಷತೆ: ಮುಖ್ಯೋಪಾಧ್ಯಾಯ ಮಹದೇವಪ್ಪ, ಧ್ವಜಾರೋಹಣ: ಬಿ.ಎಸ್. ಚಂದ್ರ ಕುಮಾರ್, ಅತಿಥಿಗಳು: ಜೆಎಸ್‌ಎಸ್ ಮಹಿಳಾ ಬಿ.ಎಡ್ ಕಾಲೇಜು ಪ್ರಿನ್ಸಿಪಾಲ್ ಎನ್.ಜಿ.ಶಿವಮೂರ್ತಿ, ಚೀಫ್ ವಾರ್ಡನ್ ಮಮತಾ ಸುರೇಶ್, ಮುಖ್ಯೋಪಾಧ್ಯಾಯರಾದ ಗುರುಸ್ವಾಮಿ, ಜಿ. ಸರ್ವಮಂಗಳ, ಸ್ಥಳ: ಶಾಲೆ ಆವರಣ, ಸರಸ್ವತಿಪುರಂ, ಬೆಳಗ್ಗೆ 8ಕ್ಕೆ

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ:** ಸ್ವಾತಂತ್ರ್ಯೋತ್ಸವ, ಅಧ್ಯಕ್ಷತೆ: ಪ್ರೊ.ಜಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿ: ಪ್ರೊ.ಹೆಚ್.ಎಂ.ರಾಜಶೇಖರ್, ಉಪಸ್ಥಿತರು: ಡಾ.ಎಸ್.ಪ್ರತಿಭಾ, ಸ್ಥಳ: ಜೆಎಸ್‌ಎಸ್ ಪಪೂರ್ವ ಕಾಲೇಜು, ಬೆಳಗ್ಗೆ 8.30ಕ್ಕೆ

■ **ಶಾರದಾವಿಲಾಸ ಶಿಕ್ಷಣ ಸಂಸ್ಥೆ:** 77ನೇ ಸ್ವಾತಂತ್ರ್ಯೋತ್ಸವ, ಧ್ವಜಾರೋಹಣ ಮತ್ತು ಅಧ್ಯಕ್ಷತೆ: ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿ: ಕಮಾಂಡರ್ ಎಸ್.ಮಹೇಂದರ್ ಸಿಂಗ್, ಸ್ಥಳ: ಶಾರದಾವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ. ಬೆಳಗ್ಗೆ 8.30ಕ್ಕೆ

■ **ಹಿರಿಯ ನಾಗರಿಕರ ಮಂಡಳಿ:** ಸ್ವಾತಂತ್ರ್ಯೋತ್ಸವ ದಿನಾಚರಣೆ, ಮುಖ್ಯ ಅತಿಥಿಗಳು: ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರೊ.ನೀ.ಗಿರಿಗೌಡ, ಅಧ್ಯಕ್ಷತೆ: ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಅಧ್ಯಕ್ಷ ಎಸ್.ವಿ.ಗೌಡಪ್ಪ, ಉಪಸ್ಥಿತರು: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ. ಹೆಚ್.ಎಂ. ನಾಗರಾಜು, ಸ್ಥಳ: ಮಂಡಳಿ ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 9ಕ್ಕೆ

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್ :** ಸ್ವಾತಂತ್ರ್ಯ ಸಂಭ್ರಮ, ಮುಖ್ಯ ಅತಿಥಿಗಳು: ಜಿ.ಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಂ.ರಾಮಪ್ಪ, ಸ್ಥಳ: ಶಾಲೆ ಆವರಣ, ರೂಪಾನಗರ, ಬೆಳಗ್ಗೆ 9ಕ್ಕೆ

■ **ಮಹಾಜನ ವಿದ್ಯಾಸಂಸ್ಥೆ :** ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ: ಸಾಹಿತಿ ಡಾ.ಎಸ್.ತುಕಾರಾಮ್, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು: ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರೊ.ಪಿ.ಸರೋಜಮ್ಮ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ.

■ **ಮೈಸೂರು ಹಿಮೋಫಿಲಿಯಾ ಸೊಸೈಟಿ :** ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಫ್ಯಾಕ್ಟರ್ IX ವಿತರಣೆ ಕಾರ್ಯಕ್ರಮ, ಅತಿಥಿಗಳು : ಶಾಸಕ ಹರೀಶ್‌ಗೌಡ, ಪಾಲಿಕೆ ಸದಸ್ಯರಾದ ಶ್ರೀನಿವಾಸ್, ಪ್ರೇಮಾ ಶಂಕರೇಗೌಡ, ಸ್ಥಳ: ಶ್ರೀ ಚಾಮುಂಡಿ ಸೆರಾಮಿಕ್ಸ್, ವಿಜಯನಗರ 2ನೇ ಹಂತ, ಬೆಳಗ್ಗೆ 9ಕ್ಕೆ

■ **ಟಿ.ಎನ್.ಎನ್. ಆದರ್ಶ ವಿದ್ಯಾರ್ಥಿ ನಿಲಯ :** 77ನೇ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ವಕೀಲ ಎಂ. ಪ್ರಫುಲ್‌ಕುಮಾರ್, ಸ್ಥಳ: ನಿಲಯದ ಆವರಣ, ಬೆಳಗ್ಗೆ 9.30ಕ್ಕೆ.

■ **ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ :** 77ನೇ ಸ್ವಾತಂತ್ರ್ಯ ದಿನಾಚರಣೆ, ಉಪಸ್ಥಿತರು : ದಯಾನಂದ ರಾಮರಾವ್, ಡಾ. ಬಿ.ಜೆ.ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 9.30ಕ್ಕೆ.

■ **ದಿ ಹೆರಿಟೇಜ್ ಕ್ಲಬ್:** ಸ್ವಾತಂತ್ರ್ಯೋತ್ಸವ ಆಚರಣೆ ಪ್ರಯುಕ್ತ ಗಣ್ಯರಿಗೆ ಸನ್ಮಾನ–ಬಹುಮಾನ ವಿತರಣೆ, ಅಭಿನಂದಿತರು: ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಸಿ.ಎನ್. ಮಂಜೇಗೌಡ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ನಗರ ಯೋಜನಾ ಸದಸ್ಯ ಶೇಷು, ಮರಿತಿಬ್ಬೇಗೌಡ, ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಕ್ಲಬ್ ಅಧ್ಯಕ್ಷ ಡಾ.ಮರೀಗೌಡ, ಸ್ಥಳ: ಕ್ಲಬ್ ಆವರಣ, ಸಂಜೆ 6ಕ್ಕೆ.

■ **ಅಂತರದೃಷ್ಟಿ ಬ್ರೈನ್ ಅಕಾಡೆಮಿ ಪರಮಹಂಸ ಯೋಗ ಮಹಾವಿದ್ಯಾಲಯ :** ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಬರವಣಿಗೆ ಕುರಿತು ಉಚಿತ ಕಾರ್ಯಾಗಾರ, ಸ್ಥಳ: ಮಹಾವಿದ್ಯಾಲಯ ಆವರಣ, ರಾಮಕೃಷ್ಣನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ರಾಷ್ಟ್ರ ವಂದನಾ, 6.30 ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸ್ವಾತಂತ್ರ್ಯ ದಿನದ ಸಂದೇಶ, 6.45 ಪ್ರದೇಶ ಸಮಾಚಾರ, 7.05 ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುವ ಧ್ವಜಾರೋಹಣ ಸಮಾರಂಭ ಹಾಗೂ ಮಾನ್ಯ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರವನ್ನುದ್ದೇಶಿಸಿ ಮಾಡುವ ಭಾಷಣದ ನೇರ ಪ್ರಸಾರ, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎಂ.ರಾಘವೇಂದ್ರ–ಹಾಡು ಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಭಾರತದ ಬದುಕಿಗೆ ಅಮೇರಿಕೆಯ ಮಾದರಿಗಳು–ಡಾ.ಬಿ.ಎನ್.ಜಯರಾಂ ಅವರೊಂದಿಗೆ ಸಂದರ್ಶನ. ಸಂದರ್ಶಕರು ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಸ್ವಾನ್ಲೀ ಪಾರ್ಕರ್, ಸಿ.ವಿಶ್ವನಾಥ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕೆ.ಜಿ.ಕನಕಲಕ್ಷ್ಮಿ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ 'ಭಕ್ತ ಸುಧಾಮ' ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 5.40 ಮೈಸೂರು ಜಿಲ್ಲಾಡಳಿತ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆಯ ಬಾನುಲಿ ವರದಿ, ಪ್ರಸ್ತುತಿ–ಬಿ.ದಿಗ್ವಿಜಯ್, 6.50 ಕೃಷಿರಂಗ–ಭಾರತದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಸ್ವಾತಂತ್ರ್ಯೋತ್ಸವದ ಮುನ್ನಾ ದಿನದಂದು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದ ಕನ್ನಡ ಅನುವಾದದ ಮರುಪ್ರಸಾರ, 9.30 ಮಹತಿ ಟಿ. ಭಾರ್ಗವ ಪುರಿ–ವಯೋಲಿನ್, 10.00 ಪ್ರಧಾನಿ ನರೇಂದ್ರ ಮೋದಿ ದೆಹಲಿಯ ಕೆಂಪು ಕೋಟೆಯಲ್ಲಿ ಧ್ವಜಾರೋಹಣ ನೆರವೇರಿಸಿ, ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದ ಕನ್ನಡ ಅನುವಾದ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 15 ಮಂಗಳವಾರ 2023

ಸಂಪುಟ: 44 | ಸಂಚಿಕೆ: 121 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶುಭಾಶಯಗಳು



ನಾಡಿನ ಸಮಸ್ತ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಬಿಡುವು

ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 16.8.2023ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು



ಹೊಸ ಪರಿಕಲ್ಪನೆಯಡಿ ವಿಶಿಷ್ಟವಾಗಿ ದಸರಾ ಆಚರಣೆ

ನವೀನ ರೀತಿಯ ಕಾರ್ಯಕ್ರಮ ಆಯೋಜನೆ; ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ತಾಕೀತು

■ ಅರಮನೆ ಸುತ್ತ ಝೀರೊ ಟ್ರಾಫಿಕ್ ■ ಟೌನ್ ಹಾಲ್, ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಪಾರ್ಕಿಂಗ್ ■ ದಸರೆಗಾಗಿ 16 ಉಪ ಸಮಿತಿ ರಚನೆ ■ ಅನಗತ್ಯ ವೆಚ್ಚಗಳಿಗೆ ಕಡಿವಾಣ ■ ಇಡ್ಲಿ, ದೋಸೆ ತಿನ್ನಲು ದಸರಾ ಸೀಮಿತವಾಗಬಾರದು



ಮೈಸೂರು, ಆ.14(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆ ಹಾಗೂ ಟಾರ್ಚ್ ಲೈಟ್ ಪರೇಡ್‌ನಲ್ಲಿ ರಾಜರ ಕಾಲದ ಗತವೈಭವ, ಪರಂಪರೆ ಬಿಂಬಿಸುವಂತಹ ವಿಶಿಷ್ಟ ಕಾರ್ಯಕ್ರಮ ರೂಪಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಇಂದು ದಸರಾ ಪೂರ್ವ ಸಿದ್ಧತೆ ಕುರಿತಂತೆ ನಡೆದ ಶಾಸಕರು ಹಾಗೂ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ನಾನು ಚಿಕ್ಕ ವಯಸ್ಸಿಂದಲೂ ದಸರಾ ಜಂಬೂ ಸವಾರಿ ಮೆರವಣಿಗೆ ಹಾಗೂ ಟಾರ್ಚ್‌ಲೈಟ್ ಪರೇಡ್ ನೋಡುತ್ತಾ ಬಂದಿದ್ದೇನೆ. ಪ್ರತಿ ವರ್ಷ ಅದೇ ಕಾರ್ಯಕ್ರಮ ಪುನರಾವರ್ತನೆ ಆಗುತ್ತದೆ. ಹೊಸತೇನು ಇರುವುದಿಲ್ಲ. ಪ್ರತಿ ವರ್ಷ ನೋಡುವ ಕಾರ್ಯಕ್ರಮವನ್ನೇ ಮತ್ತೆ ಮತ್ತೆ ವೀಕ್ಷಣೆ ಮಾಡಲು ಜನರಿಗೂ ಬೇಜಾರಾಗುತ್ತಿದೆ ಎಂದರು. ಕಲೆ, ಸಂಸ್ಕೃತಿ, ಆಡಳಿತ, ಸಾಹಿತ್ಯ, ಕ್ರೀಡೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಸೇರಿದಂತೆ ಹಲವು ವಿಶಿಷ್ಟತೆಗಳನ್ನು ಸಂವಿಧಾನ ಬರುವ ಮುನ್ನವೇ ಮೈಸೂರು ಮಹಾರಾಜರು ವಿಶ್ವಕ್ಕೆ ತೋರಿಸಿಕೊಟ್ಟರು. ದಸರಾ ವಿಜಯನಗರ ಪರಂಪರೆಯ ವಿಸ್ತರಣೆ ಹಾಗೂ ಗೆಲುವಿನ ಹಿನ್ನೆಲೆಯಲ್ಲಿ ರಾಜರ ಕಾಲದಿಂದ ವಿಜೃಂಭಣೆಯಿಂದ ದಸರಾ ಆಚರಿಸಲಾಗುತ್ತಿದೆ. ಈ ಕಾರಣದಿಂದ ವಿಜಯನಗರ ಸಾಮ್ರಾಜ್ಯದಿಂದ ಮೈಸೂರು ಅರಸರ ತನಕ ನಡೆದುಕೊಂಡು ಬಂದಿರುವ ಕಲೆ, ಸಂಸ್ಕೃತಿ, ಪರಂಪರೆ, ಗತ ವೈಭವವನ್ನು ದಸರಾದಲ್ಲಿ ಅನಾವರಣಗೊಳಿಸಬೇಕು. ದಸರಾದಲ್ಲಿ ನೈಜ ಉದ್ದೇಶವನ್ನು ಉಳಿಸಿಕೊಂಡು ● 8ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಂಪುಟದ ಹಿರಿಯ ಸದಸ್ಯರು

30 ತಿಂಗಳ ನಂತರ ಅಧಿಕಾರ ತ್ಯಜಿಸಿ; ಹೊಸಬರಿಗೆ ಅವಕಾಶ ನೀಡಿ

ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ 'ಬಾಂಬ್'

● ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕರೆದಿದ್ದ ಕಾಂಗ್ರೆಸ್ ಸರ್ವ ಸದಸ್ಯರ ಸಭೆಯಲ್ಲಿ ನಿಷ್ಠುರ ಮಾತು
● ಮುನಿಯಪ್ಪ ಮಾತಿನಿಂದ ತಬ್ಬಿಬ್ಬಾದ ಸಿಎಂ, ಡಿಸಿಎಂ; ಮೇಜು ಕುಟ್ಟಿ ಸ್ವಾಗತಿಸಿದ ಮುಖಂಡರು

ಬೆಂಗಳೂರು, ಆ. 14 (ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಂಪುಟದ ಹಿರಿಯ ಸದಸ್ಯರು 30 ತಿಂಗಳ ಆಡಳಿತದ ನಂತರ ಅಧಿಕಾರ ತ್ಯಜಿಸಿ, ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಇಂದಿಲ್ಲಿ ಬಾಂಬ್ ಸಿಡಿಸಿದ್ದಾರೆ.

ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಅಧಿಕಾರದಲ್ಲಿರುತ್ತಾರೆಂದು ಅವರ ಬೆಂಬಲಿಗರು ಹೇಳಿಕೆಗಳನ್ನು ನೀಡುತ್ತಿರುವ ಬೆನ್ನಲ್ಲೇ ಮುನಿಯಪ್ಪ ಪಕ್ಷದ ವೇದಿಕೆಯಲ್ಲಿ ತಮ್ಮ ನಿಲುವು ಬಹಿರಂಗಪಡಿಸಿ, ಅಚ್ಚರಿ ಮೂಡಿಸಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಇಂದು ನಡೆದ ಕಾಂಗ್ರೆಸ್ ಸರ್ವ ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಮ್ಮುಖದಲ್ಲಿ ಮುನಿಯಪ್ಪ ಈ ಮಾತು ಹೇಳಿದಾಗ ಇಡೀ ಸಭೆ ಮೇಜು ಕುಟ್ಟಿ ಸ್ವಾಗತಿಸಿದೆ. ಈ ವೇಳೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡು ಏನನ್ನೂ ಹೇಳಲಾಗದಿದ್ದರೂ ನಂತರ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆದ ಶಿವಕುಮಾರ್, ಮುಂದಿನ ದಿನಗಳಲ್ಲಿ ಮಂತ್ರಿಗಳ ಬದಲಾವಣೆ ಮಾಡಬೇಕಾಗುತ್ತದೆ ಎಂದಷ್ಟೇ ಹೇಳಿದ್ದಾರೆ. ಮುಂದುವರೆದು ಮಾತನಾಡಿದ ಮುನಿಯಪ್ಪ, ತಮ್ಮ ಭಾಷಣದುದ್ದಕ್ಕೂ ಬೆಂಕಿಯುಂಡೆ ಉಗುಳಿದರು. ಅಲ್ಲದೆ ಪಕ್ಷದ ಕಾರ್ಯಕರ್ತರ ಪರ ಧ್ವನಿ ಎತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿರುವ ನಾನು ಸೇರಿದಂತೆ ಯಾವುದೇ ಹಿರಿಯ ಸಚಿವರು 30 ತಿಂಗಳ ನಂತರ ಮುಂದುವರೆಯಬಾರದು. ಹೊಸಬರು ಬರಲಿ. ಅಧಿಕಾರ ಸಿಗದೇ ಸಾಕಷ್ಟು ಪ್ರತಿಭೆಗಳು ಹೊರಗುಳಿದಿದ್ದು, ಅಂಥವರಿಗೆ ಅವಕಾಶ ಮಾಡಿಕೊಡೋಣ ಎಂದು ಹೇಳಿದ್ದಾರೆ. ನಾನು ಆರೇಳು ಬಾರಿ ಸಂಸತ್ ಪ್ರವೇಶಿಸಿದ್ದೇನೆ. ಕೇಂದ್ರದಲ್ಲೂ ಮಂತ್ರಿಯಾಗಿದ್ದಲ್ಲದೆ, ಈಗ ಶಾಸಕನಾಗಿ ಮಂತ್ರಿಯಾಗಿದ್ದೇನೆ. ಇದೇ ರೀತಿ ಸಂಪುಟದಲ್ಲಿರುವ ಹಲವರು ಪಕ್ಷ ● 8ನೇ ಪುಟಕ್ಕೆ



ಈ ಬಾರಿಯ ಮೈಸೂರು ದಸರಾದಲ್ಲಿ ಏರ್ ಶೋ ಪ್ರಮುಖ ಆಕರ್ಷಣೆ



● ಏರ್ ಶೋಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮತಿ ● ಅತ್ಯಾಕರ್ಷಕ ದೀಪಲಂಕಾರಕ್ಕೆ 7 ಕೋಟಿ ● ಶೀಘ್ರವೇ ಬಸ್‌ನಲ್ಲಿ ಸಚಿವರ ಸಿಟಿ ರೌಂಡ್ಸ್ ● ಮೈಸೂರಿನ ಹಲವು ಭಾಗಕ್ಕೆ ಕಾಂಕ್ರಿಟ್ ರಸ್ತೆ ಯೋಗ ● ದಸರಾ ಕ್ರೀಡಾಕೂಟದಲ್ಲಿ 32 ವಿವಿಧ ಬಗೆಯ ಕ್ರೀಡೆ

[ಪೂರ್ಣ ವರದಿ ಪುಟ-11]

ನಕ್ಕರೆ ಅದೇ ಸ್ವರ್ಗ

ರೋಗಿ : "ಏನ್ ಡಾಕ್ಟರ್, ಕೇವಲ ಒಂದೇ ಒಂದು ಹಲ್ಲು ಕಿತ್ತದ್ದಕ್ಕೆ 60 ರೂಪಾಯಿ ಕೊಡಬೇಕಾ?"

ಡಾಕ್ಟರ್ : "ಹಲ್ಲು ಕಿತ್ತದ್ದಕ್ಕೆ 15 ರೂ. ಮಾತ್ರ, ಆದರೆ ಹಲ್ಲು ಕೀಳುವಾಗ ನೀವು ಕಿರುಚಿದ್ದನ್ನು ಕೇಳಿ, ಕಾಯ್ತಾ ಇದ್ದ 3 ಜನ ಗಿರಾಕಿಗಳು ಓಡಿ ಹೋದ್ರು, ಅದಕ್ಕಾಗಿ ಉಳಿದ 45 ರೂ.ಗಳು!"

ಮೈಸೂರು ಮಿತ್ರ
ಮಂಗಳವಾರ, 15 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅಧಿಕಾರದ ಮಟ್ಟ ಏರಿದಂತೆಲ್ಲಾ, ಅದರ ದುರುಪಯೋಗಪಡಿಸಿಕೊಳ್ಳುವ ಆಸೆಯು ಮಟ್ಟವೂ ಏರುತ್ತಾ ಹೋಗುತ್ತದೆ. – ಎಡ್ಮಂಡ್ ಬರ್ಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅರಿತರೆ ಮಾತ್ನಾಡು, ಮರೆತರೆ ಕೂತ್ಕೋಡು

ನಿಮ್ಮ ಪತ್ರಗಳು

ಮೈಸೂರು ನಗರ ಬಸ್ ನಿಲ್ದಾಣ ಗುಂಡಿಮಯ!



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ನಗರ ಬಸ್ ನಿಲ್ದಾಣದ ಒಳಗಡೆ ರಸ್ತೆ ಕಿತ್ತು ಬಂದಿದ್ದು, ದೊಡ್ಡ ದೊಡ್ಡ ಹೊಂಡಗಳಾಗಿ ಧೂಳು ಆವರಿಸಿದೆ. ಇದರಿಂದಾಗಿ ಪ್ರಯಾಣಿಕರು ಮತ್ತು ಅಂಗಡಿ ಮುಂಗಟ್ಟುಗಳಿಗೆ ಧೂಳು ಆವರಿಸಿದ ಪರಿಣಾಮ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.

ನಗರ ಬಸ್ ನಿಲ್ದಾಣದಿಂದ ಚಾಮುಂಡಿಬೆಟ್ಟ, ನಂಜನಗೂಡು ಸೇರಿದಂತೆ ಇನ್ನಿತರೆ ಗ್ರಾಮೀಣ ಭಾಗಗಳಿಗೆ ಸಂಚರಿಸುವ ಬಸ್ ನಿಲ್ದಾಣದಲ್ಲಿ ಈ ಅವ್ಯವಸ್ಥೆ ಉಂಟಾಗಿದ್ದು, ಅಧಿಕಾರಿಗಳ ನಡೆಗೆ ಸಾರ್ವಜನಿಕ ವಲಯಗಳಿಂದಲೂ ಆಕ್ರೋಶ ವ್ಯಕ್ತವಾಗುತ್ತಿದೆ.

ಸ್ಟ್ಯಾಂಡ್‌ಗೆ ಬರುವ ಗ್ರಾಹಕರು, ಪ್ರಯಾಣಿಕರು ಹಾಗೂ ಪುಟ್ಟ ಮಕ್ಕಳು ಧೂಳು ಮಿಶ್ರಿತ ಪದಾರ್ಥಗಳನ್ನು ಸೇವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಸಂಬಂಧಪಟ್ಟ ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳು ಇತ್ತ ಗಮನಹರಿಸಿ ಗುಂಡಿಗಳನ್ನು ಮುಚ್ಚಿ, ಡಾಂಬರೀಕರಣ ಮಾಡಬೇಕಾಗಿ ಮನವಿ.

–ಡಿಪಿಕೆ ಪರಮೇಶ್, ಅಧ್ಯಕ್ಷ, ಹೃದಯವಂತ ಕನ್ನಡಿಗರ ಬಳಗ, ಮೈಸೂರು.

ರಾಷ್ಟ್ರಧ್ವಜದ ಜವಾಬ್ದಾರಿ ಹೆಚ್ಚಿನದಾಗಿರಲಿ

ಮಾನ್ಯರೆ,

ನಮ್ಮಲ್ಲಿ ರಾಷ್ಟ್ರೀಯ ಹಬ್ಬವೆಂದರೆ ಎಲ್ಲರಿಗೂ ಏನೋ ಸಂಭ್ರಮ. ಶಾಲಾ–ಕಾಲೇಜು, ಕಚೇರಿ ಹಾಗೂ ಈ ನಡುವೆ ಎಲ್ಲರ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸಿ ಸಂಭ್ರಮಿಸುತ್ತಾರೆ. ಶಾಲಾ–ಮಕ್ಕಳು ಶಾಲೆಗಳಲ್ಲಿ ಧ್ವಜ ಹಿಡಿದು ಕವಾಯಿತು ಮಾಡಿ ಸಂತೋಷದ ನಗೆ ಬೀರುತ್ತಾರೆ. ನಮ್ಮ ರಾಷ್ಟ್ರಧ್ವಜವೆಂದರೆ ಹಾಗೇನೆ ಎಲ್ಲರಿಗೂ ದೇಶಾಭಿಮಾನ ಉಕ್ಕುತ್ತದೆ. ಆದರೆ ಈ ರಾಷ್ಟ್ರ ಧ್ವಜದ ಜವಾಬ್ದಾರಿ ಪ್ರತಿಯೊಬ್ಬರಿಗೂ ಹೆಚ್ಚಿನದಾಗಿರುತ್ತದೆ. ಎಲ್ಲೆಡೆ ಧ್ವಜ ಹಾರಿಸಿದಾಗ ಧ್ವಜಕ್ಕೆ ಧಕ್ಕೆ ಬರದ ಹಾಗೆ ನೋಡಿಕೊಳ್ಳಬೇಕು. ಕವಾಯಿತು ಮುಗಿದ ನಂತರ ಮಕ್ಕಳು ಹಿಡಿದಿರುವ ಧ್ವಜವನ್ನು ನಂತರ ಹೇಗೆ ಜೋಪಾನ ಮಾಡಬೇಕೆಂದು ಗುರುಗಳು ಮಕ್ಕಳಿಗೆ ತಿಳಿಸುವ ಜವಾಬ್ದಾರಿ ಹೆಚ್ಚಿನದಾಗಿರುತ್ತದೆ. ಶಾಲಾ–ಕಾಲೇಜು, ಕಚೇರಿಗಳಲ್ಲಿ ಗೌರವದಿಂದ ಧ್ವಜವನ್ನು ಕೆಳಗಿಳಿಸಿ ಜೋಪಾನ ಮಾಡಬೇಕಾಗುತ್ತದೆ. ಇದರ ಬಗ್ಗೆ ಪ್ರತಿಯೊಬ್ಬರೂ ಕಾಳಜಿ ವಹಿಸಿ ಗೌರವ ತೋರಬೇಕು. ದೇಶಕ್ಕಾಗಿ ದುಡಿದು ಮಡಿದವರನ್ನು ನೆನೆದು ಅವರ ಹಾದಿಯಲ್ಲಿ ಎಲ್ಲರೂ ಸಾಗೋಣ. ನಮ್ಮ ದೇಶದ ಅಭಿಮಾನ ಪ್ರತಿಯೊಬ್ಬರಲ್ಲೂ ಹೆಚ್ಚಿನದಾಗಿರಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಗಝಲ್

ಭ್ರಮೆಯ ಸರಿಸಿ ವಿನಯದಲಿ ಭಾರತಿಗೆ
ಶಿರವ ಬಾಗಿಸಿದೆ ನೋಡು ।
ದೇಶದ ಹೆಮ್ಮೆಯ ಪೂಜಿತಳಾದ ಪೊರೆಯುವ
ತಾಯಿಗೆ ನಮಿಸಿದೆ ನೋಡು॥

ಇಲ್ಲಿಯ ಗಾಳಿಯ ಸೇವಿಸುತ್ತಿರೇ ವಂಚನೆಯ
ನಂಜನ್ನು ಬಿಟ್ಟಾರೆ ಶುಭವೇ।
ಗಡಿಯ ಕಾಯುತ ವೀರತನದಿ ನಿಷ್ಠೆಯಿಂದ
ನೆಲವ ಉಳಿಸಿದೆ ನೋಡು॥

ಶಾಂತಿಯ ತೋಟದಿ ರಂಗುರಂಗಾಗಿ ಅರಳಿದ
ಮನವ ಕುಗ್ಗಿಸದೆ ಬಾಳಿ।
ಹಲವು ನದಿಯ ಜೋಡಣೆ ಮಾಡಿ ಅಮೃತವ
ಕುಡಿಸಿ ಬೆಳೆಸಿದೆ ನೋಡು॥

ಧ್ವಜದಿ ಅಶೋಕ ಚಕ್ರದೊಂದಿಗೆ ಏಕತೆಯ
ಭ್ರಾತೃತ್ವ ಮೆರೆದರೆ ಚೆಂದ।
ಸೊಬಗ ಕಾಂತಿಯ ಮೈವೇರಿಸುತ ವಸುಧೆಯ
ಪಚ್ಚೆಯ ಮೂಡಿಸಿದೆ ನೋಡು॥

ನಾಡಿನ ಭಾವಕ್ಕೆ ಅಡ್ಡಿಯಾದರೆ ಯೋಧನಾಗಿ
ಕಟ್ಟೆಯೇ ರಕ್ಷಣೆಗೆ ಸಿದ್ಧನು।
ಭೇದವ ಕಳಚಿ ಭಾವೈಕ್ಯತೆಯ ರಾಷ್ಟ್ರಗೀತೆ
ಹಿರಿಮೆ ಸಾರಿಸಿದೆ ನೋಡು॥

–ಕಟ್ಟೆ ಎಂ.ಎಸ್.ಕೃಷ್ಣಸ್ವಾಮಿ, ಸಾಹಿತಿ, ಅಂಚೆ ಜೀವ ವಿಮೆ, ಮಂಡ್ಯ

'ಹರ್ ಘರ್ ತಿರಂಗಾ'

ಮಾನ್ಯರೆ,

ಮನೆಮನೆಗಳಲಿ ಏರುತೇರುತಾ ಹಾರುತಿಹುದು ತಿರಂಗವು,
ಅಲೆಅಲೆಯಾಗಿ ತೇಲುತಾ ಬಾನಂಗಳವೇ ಮರೆಯಾಗಿದೆ,
ಎಲ್ಲರ ಮನದೊಳು ಉರಿಯುತಿದೆ ಎಂದೋ ಹೊತ್ತಿದ ಕಿಚ್ಚು,
ಅಭಿಮಾನದ ಹುಚ್ಚಿಗೆ ಹಿಂದೂಸ್ತಾನವೇ ತ್ರಿವರ್ಣಮಯ!,
ಕೇಸರಿ–ಬಿಳಿ–ಹಸಿರು–ನೌಕಾನೀಲಿ ನಾಲ್ಕು ವರ್ಣಗಳ ಮೆರಗು
ತುಂಬಿವೆ ಶೌರ್ಯ–ಶಾಂತಿ–ಸಸ್ಯ–ಶಕ್ತಿ ಭೂಮಿ–ಬಾನಿನಗಲಕೂ,
ನರನಾಡಿಗಳಲ್ಲೂ ನೆತ್ತರು ಹರಿದಿದೆ ಸಮೃದ್ಧ ನಾಡ ಕಟ್ಟಲು,
ಗಡಿಗಡಿಯಲಿ ಅಡಿಗಡಿಗೆ ಹಾರುವ ಸಿಡಿಗುಂಡುಗಳ ಮೆಟ್ಟಿ,
ಮಡದಿ ಮಕ್ಕಳ ಮರೆತು ಎದುರಿಸಿ ಹೊಡೆದುರುಳಿಸುವ
ಯೋಧನಿಗೆ ತಲೆಬಾಗಿ ನಮಿಸುವೆವು ಜೈಜವಾನ್..ಜೈಜವಾನ್..,
ವರುಷಕ್ಕೊಮ್ಮೆ ಬರುವ ಸ್ವಾತಂತ್ರ್ಯ ಹಬ್ಬದ ದಿನಾಚರಣೆಗೆ
ಹಾರುತಾ.. ಹಾರುತಾ..... ಮುಗಿಲೆತ್ತರಕೆ ಏರುವ ಬಾವುಟ!,
ಹೋರಾಟವೇ ಬದುಕಾಗಿ ಬಿಡುಗಡೆಗೆ ಮಡಿದವರೆಷ್ಟೋ..?
ಗಾಂಧಿ, ನೆಹರು, ತಿಲಕ್, ಬೋಸ್, ಭಗತ್, ಪಟೇಲ್,
ಶಾಸ್ತ್ರೀ, ಅಜಾದ್..... ನೆನೆಯುತಾ ತ್ರಿವರ್ಣಕ್ಕೆ ಬಾಗೋಣ!.

–ಮಿರ್ಲೆಚಂದ್ರಶೇಖರ, ಮೈಸೂರು.

ಮೈಸೂರಲ್ಲಿ ಸ್ವಾತಂತ್ರ್ಯ ಹೋರಾಟದ ಧ್ವನಿಯಾಗಿದ್ದ ಅಗರಂ ರಂಗಯ್ಯ



ಮೈಸೂರು ಪ್ರಾಂತ್ಯದ ಸ್ವಾತಂತ್ರ್ಯ ಹೋರಾಟಗಾರರು, ಸುಪ್ರಸಿದ್ಧ ಪತ್ರಿಕೋದ್ಯಮಿಗಳು ಹಾಗೂ ಧರ್ಮ ಕಾರ್ಯದ ಧುರೀಣರೂ ಆದ ಅಗರಂ ರಂಗಯ್ಯನವರ ಹೆಸರನ್ನು ಕೇಳರಿಯದವರಿಲ್ಲ. ಸಮಾಜದ ಪ್ರತಿಯೊಂದು ವರ್ಗದ ವ್ಯಕ್ತಿಗೂ ಅತ್ಯಂತ ಪ್ರಿಯರಾಗಿದ್ದ, ಇವರ ಆ ಕಾರ್ಯ ಶ್ರದ್ಧೆ, ಮಾನವೀಯ ಗುಣ ಕಿರಿಯರಿಗೆ ಆದರ್ಶ ಪ್ರಾಯ. ಶ್ರೀಯುತ ರಂಗಯ್ಯನವರು, 1901ರಲ್ಲಿ ಅಂದಿನ ಮೈಸೂರು ಜಿಲ್ಲೆಯ ಯಳಂದೂರು ತಾಲೂಕಿನ ಅಗರಂ ಗ್ರಾಮದ ರಾಮಯ್ಯ ಹಾಗೂ ಶ್ರೀಮತಿ ನಂಜಮ್ಮನವರ ಪುತ್ರರಾಗಿ ಜನಿಸಿದರು.

ಇವರಿಗೆ ಐದು ಜನ ಸಹೋದರರು ಹಾಗೂ ಮೂವರು ಸಹೋದರಿಯರಿದ್ದರು. ಆಗಿನ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಗ್ರಾಮಗಳಲ್ಲಿ ಹೆಚ್ಚಿನ ಸೌಲಭ್ಯಗಳು ಇರಲಿಲ್ಲವಾದ ಕಾರಣ ಇವರ ತಂದೆಯವರು ತಮ್ಮ ಕುಟುಂಬದವರೊಡನೆ ಮೈಸೂರಿಗೆ ಬಂದು ನೆಲೆಸಿದರು. ಮೈಸೂರಿನಲ್ಲಿ ರಂಗಯ್ಯನವರ ವಿದ್ಯಾಭ್ಯಾಸವು ದಳವಾಯಿ ಶಾಲೆ, ಮರಿಮಲ್ಲಪ್ಪನವರ ಶಾಲೆ ಮತ್ತು ಮಹಾರಾಜ ಕೊಲೀಜಿಯಟ್ ಪ್ರೌಢಶಾಲೆಯಲ್ಲಿ ಮುಂದುವರೆಸಿ ಮುಂದೆ ಮದ್ರಾಸಿಗೆ ತೆರಳಿ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಪದವೀಧರರಾದರು. ಮೈಸೂರಿನ ಮರಿಮಲ್ಲಪ್ಪನವರ ಶಾಲೆಯಲ್ಲಿ ಓದುತ್ತಿರುವಾಗ ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಂ.ವೆಂಕಟಕೃಷ್ಣಯ್ಯರವರು ಬೋಧಿಸುತ್ತಿದ್ದ ಮಹಾತ್ಮರ ಜೀವನ ಚರಿತ್ರೆ, ದೇಶಪ್ರೇಮ, ದೇಶಭಕ್ತರ ಉಪನ್ಯಾಸಗಳು ಬಾಲಕ ರಂಗಯ್ಯನವರ ಮೇಲೆ ಬಹಳ ಪ್ರಭಾವ ಬೀರಿತು. ಹಾಗಾಗಿ ದೇಶಭಕ್ತಿಯ ಕಿಚ್ಚು ಬಾಲ್ಯದಲ್ಲಿಯೇ ಮೂಡಿತು.

ಮದ್ರಾಸಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರಿಗೆ ಹಿಂದಿರುಗಿದ ಮೇಲೆ ಪತ್ರಿಕೋದ್ಯಮದ ಪಿತಾಮಹರಾದ ಮೈಸೂರು ತಾತಯ್ಯ ಎಂದೇ ಪ್ರಖ್ಯಾತರಾಗಿದ್ದ ಎಂ.ವೆಂಕಟಕೃಷ್ಣಯ್ಯರವರ ಸಾಧ್ವಿ ಪತ್ರಿಕಾಲಯಕ್ಕೆ ಸೇರುವಂತೆ ಆಯಿತು. ಸಾರ್ವಜನಿಕ ಜೀವನದಲ್ಲಿ ಹಲವಾರು ಬಗೆಯಲ್ಲಿ ತೊಡಗಿಸಿಕೊಂಡಿದ್ದ ತಾತಯ್ಯನವರನ್ನು ಕಾಣಲು ಸಮಾಜದ ವಿವಿಧ ಕ್ಷೇತ್ರಗಳ ಮುಖಂಡರು ಬರುತ್ತಿದ್ದುದರಿಂದ ರಂಗಯ್ಯನವರಿಗೂ ಅವರೆಲ್ಲರ ಪರಿಚಯವೂ ಆಯಿತು. ಅದರಿಂದಾಗಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ದೇಶಭಕ್ತರ ಸಂಪರ್ಕವು ಲಭಿಸಿತು. 1920ರ ವೇಳೆಗೆ ಕಾಂಗ್ರೆಸ್ ನಾಯಕರುಗಳ ಸಾಂಗತ್ಯದಿಂದಾಗಿ ಪಕ್ಷದಲ್ಲಿನ ಜವಾಬ್ದಾರಿಯೂ ಇವರಿಗೆ ಲಭಿಸಿತು. ಮೈಸೂರು ಜಿಲ್ಲಾ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿ ನೇಮಕಗೊಂಡು ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಮೇಳಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಡುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಈ ಅವಧಿಯಲ್ಲಿ ರಂಗಯ್ಯನವರು ತಮ್ಮ ಜೀವನ ನಿರ್ವಹಣೆಗೆ ಶ್ರೀರಾಮ ಪ್ರೆಸ್ ಮುದ್ರಣಾಲಯವನ್ನು ಆರಂಭಿಸಿದರು.

ಮುಂದೆ 1923–30ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯದ ಚಳವಳಿಗಳು ನೇರವಾಗಿ ನಡೆಯದೆ ಸಹಾನುಭೂತಿ ತೋರಿಸುವ ಕೆಲಸಗಳು ಮಾತ್ರ ಸಾಗುತ್ತಿತ್ತು. ಭಾಷಣಗಳು, ಮೆರವಣಿಗೆಗಳು, ಹರತಾಳ ಇವುಗಳನ್ನು ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ಮುರಿಯದೆ ನಡೆಸಲಾಗುತ್ತಿತ್ತು. ಒಮ್ಮೆ ಮೈಸೂರು ನಗರದ ಹೃದಯ ಭಾಗದಲ್ಲಿರುವ ಸುಬ್ಬರಾಯನ ಕೆರೆಯ ಅಂಗಳದಲ್ಲಿ ಧ್ವಜ ವಂದನೆಯು ಏರ್ಪಾಡಾಗಿತ್ತು. ಇದರಲ್ಲಿ ಮುಖ್ಯ ಪಾತ್ರಧಾರಿಗಳಾಗಿದ್ದ ರಂಗಯ್ಯನವರು ಧ್ವಜ ವಂದನೆ ನಡೆಸಕೂಡದೆಂದು ಪೊಲೀಸರು ಒತ್ತಾಯ ತಂದು ಅವರನ್ನು ದಸ್ತಗಿರಿ ಮಾಡಿ ಧ್ವಜವನ್ನು ಕಿತ್ತುಕೊಂಡುದಲ್ಲದೇ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಯಿತು. ಆಗಿನ ಕಾಲದಲ್ಲಿ ಧ್ವಜಾರೋಹಣವೇ ಒಂದು ರೋಮಾಂಚಕಾರಿ ಸನ್ನಿವೇಶವಾಗಿತ್ತು. ಮೈಸೂರು ಪ್ರಾಂತ್ಯದ ಎಲ್ಲೆಡೆಗಳಲ್ಲಿಯೂ ಕಾಂಗ್ರೆಸ್ ಪ್ರಚಾರ ಭಾಷಣಗಳ ವ್ಯವಸ್ಥೆ ರಂಗಯ್ಯರವರ ಪಾಲಿನದಾಗಿತ್ತು. ರಂಗಯ್ಯನವರು ಹಲವಾರು ರಚನಾತ್ಮಕ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಮನೆ ಮನೆಗೂ ಖಾದಿ ಬಟ್ಟೆಗಳನ್ನು ಹೊತ್ತು ಸಾಗಿ ಮಾರುತ್ತಿದ್ದರು. ಈ ಕಾರ್ಯಗಳಿಗೆಲ್ಲಾ ಸಂತೇಪೇಟೆಯ ವರ್ತಕರಾದ ಧರ್ಮಪ್ರಕಾಶ ಬನುಮಯ್ಯ ಮತ್ತು ಪಿ.ಎನ್.ಸಂಗಪ್ಪನವರು ಸಹಕಾರ ನೀಡುತ್ತಿದ್ದರು. ಸ್ವಾತಂತ್ರ್ಯ ಚಳವಳಿಗೆ ಸತ್ಯಾಗ್ರಹಗಳನ್ನು ಆರಿಸಿ ಕಳುಹಿಸಿ ಕೊಡುವಲ್ಲಿ ರಂಗಯ್ಯನವರ ಪಾತ್ರ ಅಪಾರವಾದುದು. 1931ರಲ್ಲಿ ಗಾಂಧಿ–ಇರ್ವಿನ್ ಒಪ್ಪಂದವು ಮುರಿದುಬಿದ್ದು ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆಗಳು ತೀವ್ರವಾಯಿತು. ಆಗ ತಾತಯ್ಯನವರು ಜನರ ಆಶೋತ್ತರಗಳನ್ನು ಈಡೇರಿಸುವಂತೆ ಕೋರಿ ತಾವು ನಡೆಸುತ್ತಿದ್ದ ಪತ್ರಿಕೆಗಳ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದು, ಕೋಪಗೊಂಡ ಸರ್ಕಾರವು ಆದೇಶ ಹೊರಡಿಸಿ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸಿತು. ಆ ಸಮಯದಲ್ಲಿ ತಾತಯ್ಯನವರು ದೈವಾಧೀನರಾದರು. ನಂತರ ರಂಗಯ್ಯನವರು ತಾತಯ್ಯನವರು ಪ್ರಕಟಿಸುತ್ತಿದ್ದ ಸಾಧ್ವಿ ದಿನಪತ್ರಿಕೆಯನ್ನು 24–02–1936ರಂದು ವಾರಪತ್ರಿಕೆಯನ್ನಾಗಿ ಮರು ಆರಂಭಿಸಿದರು.

ಮೈಸೂರು ಸಂಸ್ಥಾನದಲ್ಲಿ ನಡೆದ ಎಲ್ಲಾ ರಾಜಕೀಯ ಚಳುವಳಿಗಳಲ್ಲಿಯೂ ಭಾಗವಹಿಸಿದ ರಂಗಯ್ಯನವರು 1935ರ ಪೂರ್ವ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಗಡೂರು ರಾಮಚಂದ್ರರಾಯರೊಡನೆ ಹಲವು ಬಾರಿ ಚಳವಳಿಯಲ್ಲಿ ಭಾಗವಹಿಸಿ ದಸ್ತಗಿರಿಯಾಗಿ ನಂತರ ಬಿಡುಗಡೆಯಾಗುತ್ತಿದ್ದರು. ಕೋರ್ಟ್ ಕಟ್ಟಳೆಯಿಂದಾಗಿ ಹಲವು ಬಾರಿ ದಂಡವನ್ನು ಸಹ ತೆತ್ತಿದ್ದು ಉಂಟು. 1939ರಲ್ಲಿ ಅವರು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಾಲಿಡಕೂಡದೆಂದು ಜಿಲ್ಲಾ ನ್ಯಾಯಾಧೀಶರು ಆಜ್ಞೆ ಮಾಡಿದಾಗ ರಂಗಯ್ಯನವರು ಬೆದರಲಿಲ್ಲ. ಸಾರ್ವಜನಿಕ ಭದ್ರತಾ ಕಾಯ್ದೆ ಮೇರೆಗೆ ಮೈಸೂರು ಜಿಲ್ಲೆಯಿಂದ ಹೊರದೂಡಲ್ಪಟ್ಟಿದ್ದು, ತಮ್ಮ ಇತರ ಮಿತ್ರರೊಡನೆ ಹಾಸನ ಜಿಲ್ಲೆಯಲ್ಲೆಲ್ಲಾ ಸಂಚರಿಸಿ ಕಾಂಗ್ರೆಸ್ ಪ್ರಚಾರ ಮಾಡಿದರು. 1942ರ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದುದಕ್ಕಾಗಿ ಹದಿನೈದು ತಿಂಗಳ ಕಾಲ ತುರಂಗವಾಸ ಅನುಭವಿಸ ಬೇಕಾಯಿತು. ಬಿಡುಗಡೆಯ ನಂತರ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡ ಇವರು, ಮೈಸೂರು ಪುರಸಭೆಗೆ ಆಯ್ಕೆಯಾಗಿ ಸುಮಾರು 9 ವರ್ಷಗಳ ಕಾಲ ಜನಾರ್ಧನನ ಸೇವೆ ಮಾಡಿದರು. ಮತ್ತೆ 1947ರ ಅರಮನೆ ಚಳವಳಿಯಲ್ಲಿ ಭಾಗವಹಿಸಿದುದಕ್ಕೆ ಜೈಲು ಶಿಕ್ಷೆಯಾಯಿತು. ರಂಗಯ್ಯನವರ ರಾಜಕೀಯ ಮತ್ತು ಸತ್ಯಾಗ್ರಹ ಚಳುವಳಿಯಲ್ಲಿ ಸಕ್ರಿಯವಾಗಿ ಅವರೊಡನೆ ತೊಡಗಿಸಿಕೊಂಡ ಅನೇಕ ಗಣ್ಯರುಗಳಲ್ಲಿ ಎಂ.ಎನ್. ಜೋಯಿಸ್ ಮತ್ತು ತಗಡೂರು ರಾಮಚಂದ್ರರಾಯರು ಪ್ರಮುಖರು.



ಅಗರಂ ರಂಗಯ್ಯ

ಸರ್ಕಾರವು ಸ್ವಾತ್ರಂತ್ಯ ಹೋರಾಟಗಾರರಿಗೆ ಕೊಡಮಾಡಿದ ಗೌರವ ಧನವನ್ನು ನಿರಾಕರಿಸುವ ಮೂಲಕ ಅಗರಂ ರಂಗಯ್ಯನವರು ಬದುಕಿನ ಮೌಲ್ಯಗಳನ್ನು ಎತ್ತಿ ತೋರಿದರು. ಮೈಸೂರು ಭಾಗದ ಸ್ವಾತಂತ್ರ್ಯದ ಇಂತಹ ಹೋರಾಟಗಾರರ ಸ್ಮರಣಾರ್ಥವಾಗಿ ಕೇಂದ್ರ ಸರ್ಕಾರವು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿ, ಇನ್ನಾದರೂ ಗೌರವ ಸಲ್ಲಿಸಬೇಕಾಗಿದೆ. ಈ ಎಲ್ಲಾ ಚಳವಳಿಗಳು ನಿಂತ ಮೇಲೆ ಸಂಪೂರ್ಣವಾಗಿ ಸಾಧ್ವಿ ಪತ್ರಿಕೆಯ ಪ್ರಕಟಣೆಯ ಕೆಲಸದಲ್ಲಿ ಅಗರಂ ರಂಗಯ್ಯನವರು ಮಗ್ನರಾದರು. 03–08–1962ರಲ್ಲಿ ಸಾಧ್ವಿ ಪತ್ರಿಕೆಯ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಭಾರತದ ಅಂದಿನ ರಾಷ್ಟ್ರಾಧ್ಯಕ್ಷರಾದ ಭಾರತ ರತ್ನ ಡಾ. ಎಸ್.ರಾಧಾಕೃಷ್ಣನ್ ಅವರು, ಯದುವಂಶಸ್ಥರು, ರಾಜ್ಯಪಾಲರೂ ಆದ ಜಯಚಾಮರಾಜ ಒಡೆಯರ್‌ರವರು, ಮುಖ್ಯಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪನವರು, ಸಾಹುಕಾರ್ ಟಿ.ತಿಮ್ಮಪ್ಪರವರುಗಳು ರಜತ ಮಹೋತ್ಸವದಲ್ಲಿ ಭಾಗವಹಿಸಿ ಶುಭ ಕೋರಿದರು ಎಂಬುದೇ ಹೆಮ್ಮೆಯ ವಿಷಯ. ಅಲ್ಲದೆ ಅಗರಂ ರಂಗಯ್ಯನವರು ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಲ್ಲಿಸಿರುವ ಸೇವೆ ಅಪಾರ. ಮೈಸೂರು ನಗರದ ಅನೇಕ ಸಂಘ–ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾತ್ರ ವಹಿಸುತ್ತಿದ್ದರು. ದಯಾಸಾಗರ ವೆಂಕಟಕೃಷ್ಣಯ್ಯ ಅವರಿಂದ ಸ್ಥಾಪಿಸಲ್ಪಟ್ಟ ಅನಾಥಾಲಯದ ಅಧ್ಯಕ್ಷರಾಗಿ, ನಗರದ ಪತ್ರಿಕೋದ್ಯಮಿಗಳ ಸಂಘದ ಅಧ್ಯಕ್ಷರಾಗಿ, ಜಗದಾಂಭ ಶಿಶುವಿಹಾರದ ಅಧ್ಯಕ್ಷರಾಗಿ, ಉಡುಪಿ ಶ್ರೀಕೃಷ್ಣ ಮಂದಿರದ ಅಧ್ಯಕ್ಷರಾಗಿ, ಶಂಕರ ಸೇವಾ ಸಮಿತಿಯ ಅಧ್ಯಕ್ಷರಾಗಿ, ಭೂಮಾಲೀಕರ ಸಂಘದ ಉಪಾಧ್ಯಕ್ಷರಾಗಿ, ಸದ್ವಿದ್ಯಾ ಪಾಠಶಾಲೆಯ ಕಾರ್ಯದರ್ಶಿಯಾಗಿ, ತಮ್ಮ ಕುಲದೇವರಾದ ಶ್ರೀ ಬಿಳಿರಂಗನಾಥಸ್ವಾಮಿ ದೇವಸ್ಥಾನದ ಧರ್ಮದರ್ಶಿಯಾಗಿ, ಸ್ವಗ್ರಾಮವಾದ ಅಗರದ ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಜೀರ್ಣೋದ್ಧಾರ ಮಾಡಿದುದೇ ಅಲ್ಲದೆ ಗ್ರಾಮದ ಜನರಿಗೆ ಕುಡಿಯುವ ನೀರಿನ ಸೌಲಭ್ಯ, ಮಕ್ಕಳಿಗಾಗಿ ಶಾಲೆಯನ್ನು ಕಟ್ಟಿಸಿಕೊಟ್ಟು ಜನಪರ ಕೆಲಸವನ್ನೂ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ಪಡೆಯುವ ವಿದ್ಯಾರ್ಥಿಗೆ ಬಹುಮಾನ ನೀಡುವ ಎರಡು ದತ್ತಿಗಳನ್ನು ಸ್ಥಾಪಿಸಿದ್ದಾರೆ. ಈ ಮಧ್ಯೆ ರಂಗಯ್ಯನವರ ಆರೋಗ್ಯವು ಕ್ಷೀಣಿಸುತ್ತಾ 'ಸಾಧ್ವಿ' ಪತ್ರಿಕೆಯ ಪ್ರಕಟಣೆಯಲ್ಲಿ ಎಡರು–ತೊಡರುಗಳನ್ನು ಎದುರಿಸಬೇಕಾಯಿತು. ಪತ್ರಿಕಾರಂಗದ ಭೀಷ್ಮ ಪಿತಾಮಹ ಎಂದೆನಿಸಿದ ಅಗರಂ ರಂಗಯ್ಯನವರು ಅನಾರೋಗ್ಯದಿಂದ 04–12–1993ರಂದು ಸಂಧ್ಯಾ ಕಾಲದಲ್ಲಿ ತಮ್ಮ ಪ್ರಾಣ ಜ್ಯೋತಿಯನ್ನು ಪರಮಾತ್ಮನಲ್ಲಿ ಲೀನವಾಗಿಸಿದರು. ಪತ್ರಿಕೋದ್ಯಮದ ಭೀಷ್ಮ, ವೃದ್ಧ ಪಿತಾಮಹ, ವೆಂಕಟಕೃಷ್ಣಯ್ಯರವರು ಪ್ರಾರಂಭಿಸಿದ 'ಸಾಧ್ವಿ' ಪತ್ರಿಕೆಯು ಅವರ ನಂತರವೂ ಅಗರಂ ರಂಗಯ್ಯರವರ ಸಂಪಾದಕತ್ವದಲ್ಲಿ ಮುಂದುವರೆದು, ನಂತರ ಇತ್ತೀಚಿನ ದಿನಗಳವರೆಗೂ ಪ್ರಕಟಣೆಯಲ್ಲಿತ್ತು ಎಂಬುದೇ ತೃಪ್ತಿಯ ಸಂಗತಿ.



ನಂ. ಶ್ರೀಕಂಠ ಕುಮಾರ್
ಮೊ: 9481067333

ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ಬಣ್ಣ ಬಯಲು ಮಾಡ್ತೇವೆ...

● ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾರ್ನಿಂಗ್
● ಕಾಂಗ್ರೆಸ್ ಸರ್ವ ಸದಸ್ಯರ ಸಭೆಯಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ● ಬಿಜೆಪಿ ಆಳ್ವಿಕೆ ಅವಧಿಯ ಎಲ್ಲಾ ಹಗರಣಗಳ ತನಿಖೆ ● ಕೋರ್ಟ್ ಆದೇಶ ಹೊರಬಿದ್ದ ಕೂಡಲೇ ತಾಪಂ, ಜಿಪಂ ಚುನಾವಣೆ

ಬೆಂಗಳೂರು,ಆ.14(ಕೆಎಂಶಿ)–ಬಿಜೆಪಿ ಆಡಳಿತದಲ್ಲಿ ನಡೆದಿರುವ ಎಲ್ಲಾ ಹಗರಣಗಳ ಬಗ್ಗೆ ತನಿಖೆ ಆರಂಭಿಸಿದ್ದು, ಲೋಕಸಭಾ ಚುನಾವಣೆಗೂ ಮುನ್ನ ಅವರ ನೈಜ ಬಣ್ಣ ಬಯಲಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಹೆಣದ ಮೇಲೆ ಕಾಸು ಮಾಡಿದವರು ನಮಗೆ ಬುದ್ಧಿವಾದ ಹೇಳುತ್ತಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ ಮುಗಿಯುತ್ತಿದ್ದಂತೆ ರಾಜ್ಯ ಬಿಜೆಪಿ ಮುಖಂಡರ ಬೇಳೆಕಾಳನ್ನು ಜನರ ಮುಂದಿಡುತ್ತೇವೆ ಎಂದು ಹೇಳಿದ್ದಾರೆ. ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಇಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಹೈಕೋರ್ಟ್ ಆದೇಶ ನೀಡುತ್ತಿದ್ದಂತೆ ಜಿಲ್ಲಾ, ತಾಲೂಕು ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದಾಗಿ ಘೋಷಣೆ ಮಾಡಿದರು.

ಲೋಕಸಭಾ ಚುನಾವಣೆಗೂ ಮುನ್ನ ನಡೆದರೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಿಸಲು ಸಿದ್ಧರಾಗಬೇಕು. ನಾವು ಅಧಿಕಾರಕ್ಕೆ ಬಂದು ಮೂರು ತಿಂಗಳು ಕಳೆದಿಲ್ಲ. ಆಗಲೇ ನಮ್ಮ ಮೇಲೆ ಗೂಬೆ ಕೂರಿಸಿ ರಾಜಕೀಯ ಮಾಡಲು ಬಿಜೆಪಿ ಮುಖಂಡರು ಹೊರಟಿದ್ದಾರೆ. ರಾಜ್ಯದ ಮತದಾರರು ಇವರನ್ನು ತಿರಸ್ಕರಿಸಿದ್ದರೂ ಬುದ್ಧಿ ಕಲಿಯದ ಬಿಜೆಪಿ ನಾಯಕರು ನಮ್ಮ ಮೇಲೆ ಸವಾರಿ ಮಾಡಲು ಹೊರಟಿದ್ದಾರೆ. ಅವರ ಬಣ್ಣ ಬಯಲು ಮಾಡುತ್ತೇವೆ. ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲಲೇಬೇಕೆಂಬ ಗುರಿಯನ್ನು ವರಿಷ್ಠರು ನೀಡಿದ್ದು, ಆ ಗುರಿ ತಲುಪಬೇಕು. ಅಧಿಕಾರವನ್ನು ನಾವಿಬ್ಬರೇ ಹಂಚಿಕೊಳ್ಳುವುದಿಲ್ಲ.

ಶೀಘ್ರ ನಿಗಮ ಮಂಡಳಿಗೆ ನೇಮಕ : ಪಕ್ಷಕ್ಕಾಗಿ ದುಡಿದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಅಂದರೆ, ತಾಲೂಕು ಮಟ್ಟದಿಂದ ರಾಜ್ಯಮಟ್ಟದವರೆಗೂ ಒಂದಲ್ಲ ಒಂದು ಅಧಿಕಾರ ಶೀಘ್ರವೇ ಲಭ್ಯವಾಗಲಿ ಎನ್ನುವ ಮೂಲಕ ನಿಗಮ, ಮಂಡಳಿ ನೇಮಕಾತಿ ಮಾಡುವ ಸುಳಿವು ನೀಡಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ನಮಗೆ ಶೇ.42.8ರಷ್ಟು ಮತ ನೀಡಿದ್ದಾರೆ. ಇದು ಐತಿಹಾಸಿಕ ದಾಖಲೆ. ಕರ್ನಾಟಕದ ಜನತೆ ದೇಶವನ್ನು ಕಾಪಾಡುವ ನಿಟ್ಟಿನಲ್ಲಿ ಬಹಳ ದೊಡ್ಡ ಹೆಜ್ಜೆ ಇಟ್ಟಿದ್ದಾರೆ. ನಮ್ಮ ಅನುಭವದಿಂದ ಇದನ್ನು ಹೇಳುತ್ತಿದ್ದೇವೆ. ಯಾವುದೇ ಉತ್ಪ್ರೇಕ್ಷೆ ಇಲ್ಲದೆ, 2024ರಲ್ಲಿ ಕೇಂದ್ರದಲ್ಲಿ ಬಿಜೆಪಿ ಸೋಲುತ್ತದೆ. ಪ್ರಧಾನಿ ನರೇಂದ್ರ ಮೋದಿ ಸಂಸತ್ತಿಗೆ ಸರಿಯಾಗಿ ಹೋಗಲ್ಲ. ಜನರ ಸಮಸ್ಯೆಗಳ ಕಡೆ ಗಮನ ಹರಿಸಲ್ಲ. ಬರೀ ಮನ್ ಕಿ ಬಾತ್, ಆ ಬಾತ್‌ನಲ್ಲೂ ದೇಶದ ಜನ ಇರೋದಿಲ್ಲ ಎಂದು ವ್ಯಂಗ್ಯವಾಡಿದರು.



ವಿಧಾನಸಭಾ ಚುನಾವಣಾ ಬಳಿಕ ನಮ್ಮ ಕಾರ್ಯಕರ್ತರು ಮೈಮರೆಯಬಾರದು. ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆದ್ದೇ ಗೆಲ್ಲುತ್ತೇವೆ. ವರಿಷ್ಠರು ಇಟ್ಟಿರುವ ಭರವಸೆ ಈಡೇರಿಸಬೇಕು ಎಂದರು.

ಒಂದು ಕಡೆ ಆರ್‌ಎಸ್‌ಎಸ್ ಹಿಡನ್ ಅಜೆಂಡಾ ಜಾರಿಗೊಳಿಸುತ್ತಾ ಮತ್ತೊಂದು ಕಡೆ ಬೆಲೆ ಏರಿಕೆ, ಹಣದುಬ್ಬರ, ಭ್ರಷ್ಟಾಚಾರ, ದುರಾಡಳಿತದಿಂದ ನಾಡಿನ, ದೇಶದ ಜನತೆಯನ್ನು ವಿಪರೀತ ಸಂಕಷ್ಟಕ್ಕೆ ಸಿಲುಕಿಸಿದ್ದರು. ನಾಡಿನ ಜನ ಈ ಎಲ್ಲಾ ದುಷ್ಟಾಚಾರವನ್ನು ಸಮರ್ಥವಾಗಿ ಧಿಕ್ಕರಿಸಿ ಸೋಲಿಸಿದ್ದಾರೆ. ಇದೇ ಲೋಕಸಭಾ ಚುನಾವಣೆಯಲ್ಲಿ ಮುಂದುವರೆಯಬೇಕು ಎಂದು ಹೇಳಿದರು.

ರಾಜ್ಯದ ಜನರ ಹಸಿವು ನೀಗಿಸಲು ಅಕ್ಕಿ ಕೊಡಿ ಎಂದರೆ ಕೊಡಲು ಒಪ್ಪದ ಬಿಜೆಪಿಯವರು ಈಗ ಆ ಸಾವಿರಾರು ಟನ್ ಅಕ್ಕಿ ಹಾಳು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಕೈಯ್ಯಲ್ಲಿರುವ ಅಕ್ಕಿಗೆ ಹುಳು ಹಿಡಿಯುತ್ತಿದೆ. ಜನರು ಉಪವಾಸ ಇದ್ದರೂ ಪರ್ವಾಗಿಲ್ಲ, ಅಕ್ಕಿ ಹಾಳಾದರೂ ಪರ್ವಾಗಿಲ್ಲ. ಆದರೆ ಹಸಿದವರಿಗೆ ಅಕ್ಕಿ ಕೊಡಬಾರದು ಎನ್ನುವುದು ಬಿಜೆಪಿಯ ಅತ್ಯಂತ ಅನಾಗರಿಕ ಮತ್ತು ಅಮಾನವೀಯ ಮನಸ್ಥಿತಿ ಎಂದು ವ್ಯಂಗ್ಯವಾಡಿದರು. ಪ್ರತಿ ಪಂಚಾಯ್ತಿ ಹಾಗೂ ತಾಲೂಕು ಮಟ್ಟದಲ್ಲಿ ಸಮಿತಿಗಳನ್ನು ಪಟ್ಟಿ ಮಾಡಿ ಎಲ್ಲಾ ವರ್ಗಕ್ಕೆ ಸಾಮಾಜಿಕವಾಗಿ ಪ್ರತಿ ಕ್ಷೇತ್ರದಲ್ಲಿ 50–100 ಸದಸ್ಯರ ನೇಮಕಾತಿ ಮಾಡಬೇಕು.

ಕಾರ್ಯಕರ್ತರ ನಾಮನಿರ್ದೇಶನ: ರಾಜ್ಯ ಮಟ್ಟದ ಪದಾಧಿಕಾರಿಗಳ ಹೆಸರು ಸೂಚಿಸುವಂತೆ ಕೇಳಿದ್ದೇವೆ. ಸಹಕಾರ ಸಚಿವಾಲಯದಲ್ಲಿ, ಇಂಧನ ಇಲಾಖೆಯಲ್ಲಿ ನಮ್ಮ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡಲು ಸಚಿವರಿಗೆ ಸೂಚನೆ ನೀಡಿದ್ದೇವೆ. ನಿಮ್ಮೆಲ್ಲರಿಗೂ ಅಧಿಕಾರ ನೀಡಬೇಕು ಎಂಬುದು ನಮ್ಮ ಉದ್ದೇಶ. ನಮ್ಮ ಬಳಿ ಸಾವಿರಾರು ನಾಯಕರು ಅನೇಕ ಹುದ್ದೆಗಳಿಗೆ ಅರ್ಜಿ ಹಾಕಿದ್ದಾರೆ. ಇದಕ್ಕಾಗಿ ಹೈಕಮಾಂಡ್ ನಾಯಕರು ನಮಗೆ ನಿರ್ದೇಶನ ನೀಡಿದ್ದು, ಈ ಅರ್ಜಿ ಹಾಕಿರುವವರು ತಮ್ಮ ಬೂತ್ ಮಟ್ಟದಲ್ಲಿ ಹೇಗೆ ಪಕ್ಷ ಸಂಘಟನೆ ಮಾಡಿದ್ದಾರೆ ಎಂಬ ಮಾಹಿತಿ ಕಲೆಹಾಕುವಂತೆ ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಪ್ರತಿ ಬ್ಲಾಕ್‌ನಲ್ಲಿ ಪಕ್ಷದ ಕಚೇರಿ ಇರಲೇಬೇಕು. ಈ ವಿಚಾರದಲ್ಲಿ ರಾಜೀ ಇಲ್ಲ. ನೀವು ಕಂದಾಯ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರನ್ನು ಭೇಟಿ ಮಾಡಿ. ನೀವು ಜಮೀನು ಖರೀದಿ ಮಾಡುತ್ತೀರೋ ಏನು ಮಾಡುತ್ತೀರೋ ಗೊತ್ತಿಲ್ಲ. ಕಾಂಗ್ರೆಸ್ ದೇವಾಲಯವಾದ ಪಕ್ಷದ ಕಚೇರಿ ನಿರ್ಮಾಣ ಮಾಡಲೇಬೇಕು. ಮುಖ್ಯ ಮಂತ್ರಿಗಳು, ಸಚಿವರುಗಳು ಯಾವುದೇ ಜಿಲ್ಲೆ ಪ್ರವಾಸ ಮಾಡಿದರೂ ಅಲ್ಲಿ ಜಿಲ್ಲಾಧ್ಯಕ್ಷರೂ ಕೂಡ ಇರಬೇಕು. ನೀವು ಬಲಿಷ್ಠವಾಗಿದ್ದರೆ ಮಾತ್ರ ನಾವು ಬಲಿಷ್ಠವಾಗಿರುತ್ತೇವೆ. ನಿಮಗೆ ನಾವು ಹೆಚ್ಚಿನ ಸಮಯ ನೀಡಲು ಸಾಧ್ಯವಾಗುತ್ತಿಲ್ಲ. ಮುಖ್ಯಮಂತ್ರಿಗಳು ಹಾಗೂ ನಾನು ಪ್ರತಿ ಜಿಲ್ಲೆಯ ಶಾಸಕರನ್ನು ಕರೆದು ಮಾತನಾಡುತ್ತಿದ್ದೇವೆ. ನಿಮಗೂ ಪ್ರತ್ಯೇಕವಾಗಿ ಸಮಯ ನಿಗದಿ ಮಾಡುತ್ತೇವೆ. ನೀವೆಲ್ಲರೂ ನಮ್ಮ ಜತೆ ಕೈಜೋಡಿಸಬೇಕು ಎಂದು ಮನವಿ ಮಾಡುತ್ತೇನೆ.

ಚುನಾವಣೆಯಾದ ಎರಡೂವರೆ ತಿಂಗಳ ನಂತರ ಪಕ್ಷದ ಸಭೆ ಕರೆದಿದ್ದೇವೆ. 2023ರ ವಿಧಾನಸಭೆ ಚುನಾವಣೆಯ ಫಲಿತಾಂಶಕ್ಕೆ ಕೊಡುಗೆ ನೀಡಿದ ನೀವೆಲ್ಲಾ ನಾಯಕರಿಗೆ ಅಭಿನಂದನೆ ಸಲ್ಲಿಸಲು ಬಯಸುತ್ತೇನೆ. ನಿಮ್ಮೆಲ್ಲರ ಒಗ್ಗಟ್ಟಿನ ಪ್ರದರ್ಶನದಿಂದ ರಾಜ್ಯದಲ್ಲಿ 1989ರ ನಂತರ ಪಕ್ಷ ಬಹುದೊಡ್ಡ ಗೆಲುವು ಸಾಧಿಸಲಾಗಿದೆ. ಆ ಮೂಲಕ ದಕ್ಷಿಣ ಭಾರತದಲ್ಲಿ ಬಿಜೆಪಿ ಬಾಗಿಲು ಮುಚ್ಚಲಾಗಿದೆ.

ನಾವು ಜನರ ವಿಶ್ವಾಸ ಉಳಿಸಿಕೊಳ್ಳಲು ನಾನು ಹಾಗೂ ಸಿದ್ದರಾಮಯ್ಯನವರು ನಮ್ಮ ಹೈಕಮಾಂಡ್ ನಾಯಕರ ಮಾರ್ಗದರ್ಶನದ ಮೇರೆಗೆ ನಮ್ಮ ಕೆಲಸ ಮುಂದುವರಿಸಿದ್ದೇವೆ. ಈ ಮಧ್ಯೆ ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಮಾಡಿದರು. ಇದಕ್ಕಾಗಿ ನಿಮ್ಮ ಶ್ರಮ ನಮಗೆ ನಿಮಗೆ ಗೊತ್ತು. ರಾಜ್ಯದ ಮೂಲೆಮೂಲೆಯಿಂದ ಬಂದಿದ್ದೀರಿ. ಬಿಜೆಪಿ ನಾಯಕರು ರಾಹುಲ್ ಗಾಂಧಿ ಅವರ ಬಗ್ಗೆ ಟೀಕೆ ಮಾಡುತ್ತಿದ್ದರು. ರಾಹುಲ್ ಗಾಂಧಿ ಅವರು ಹೆಜ್ಜೆ ಹಾಕಿದ ಎಲ್ಲಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ತುರುವೇಕೆರೆ ಕ್ಷೇತ್ರ ಬಿಟ್ಟು ಎಲ್ಲಾ ಕಡೆಗಳಲ್ಲಿ ಪಕ್ಷ ಗೆದ್ದಿದೆ. ಇದಕ್ಕೆ ನಿಮ್ಮ ಶ್ರಮ ಕಾರಣ. ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದು ಗೊತ್ತಿದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಡಾ.ಎಂ.ಆರ್.ರವಿ ಅವರಿಗೆ ಮಾತೃವಿಯೋಗ



ಯಶೋಧಮ್ಮ

ಮೈಸೂರು,ಆ.14–ಮೈಸೂರಿನ ನಾಯ್ಡುನಗರ ನಿವಾಸಿ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ)ದ ವ್ಯವ ಸ್ಥಾಪಕ ನಿರ್ದೇಶಕರಾದ ಡಾ.ಎಂ.ಆರ್.ರವಿ ಅವರ ತಾಯಿ ಯಶೋಧಮ್ಮ(79) ಅವರು ಸೋಮವಾರ ನಿಧನರಾದರು. ನೇತ್ರ ತಜ್ಞರಾಗಿದ್ದ ದಿವಂಗತ ಡಾ.ಎಂ.ಆರ್.ರಾಜರತ್ನಂ ಅವರ ಪತ್ನಿಯಾದ ಇವರು, ಡಾ.ಎಂ.ಆರ್.ರವಿ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ರುದ್ರಭೂಮಿಯಲ್ಲಿ ನಾಳೆ (ಆ.15) ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು,ಆ.14(ಪಿಎಂ)– ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಕೆ.ಹೊನ್ನಲಗೆರೆಯ ಕೀರ್ತನಾ ಟ್ರಸ್ಟ್ ಮತ್ತು ಆರ್‌ಕೆ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಆ.15ರಂದು ಸ್ವಾತಂತ್ರ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಆರ್‌ಕೆ ಪೂರ್ವ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಅಂದು ಬೆಳಗ್ಗೆ 9ಕ್ಕೆ ಆರ್‌ಕೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಮಾಜಿ ಎಂಎಲ್‌ಸಿ ಬಿ. ರಾಮಕೃಷ್ಣ ಧ್ವಜಾರೋಹಣ ಮಾಡಲಿ ದ್ದಾರೆ. ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ. ಆರ್‌ಕೆ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ವಿನಯ್ ರಾಮಕೃಷ್ಣ ಅಧ್ಯಕ್ಷತೆ ವಹಿಸಲಿದ್ದು, ಮಾಂಡವ್ಯ ಶಿಕ್ಷಣ ಮಹಾ ವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಹೆಚ್.ಆರ್.ಪಾಂಡುರಂಗ ಉಪನ್ಯಾಸ ನೀಡಲಿದ್ದಾರೆ.

13ನೇ ವರ್ಷದ ಸವಿನೆನಪು



ನೀವು ನಮ್ಮನೆಲ್ಲಾ ಅಗಲಿ ಇಂದಿಗೆ 13 ವರ್ಷಗಳಾದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಮರ ಸದಾ ನಿಮ್ಮನ್ನು ನೆನೆಯುತ್ತಿರುವ,

ಶ್ರೀ ಮಧುಗಿರಿ ವೆಂಕಟಪ್ಪ
ಕೆ.ಜಿ.ಕೊಪ್ಪಲು, ಮೈಸೂರು. (ಮರಣ: 16–8–2010)
ಇಂತಿ ದುಃಖತಪ್ತರು: ಪತ್ನಿ: ಶಾರದಮ್ಮ, ಮಕ್ಕಳು ಮತ್ತು ಕುಟುಂಬವರ್ಗ ಮಗ: ಶ್ರೀನಿವಾಸ್, ಎನ್‌ಐಇ (NIE) ಕಾಲೇಜು.

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಕುಟುಂಬ ವರ್ಗದವರು, ಹೊಸಹುಂಡಿ ಗ್ರಾಮಸ್ಥರು.
ಡೈರಿ ಶಿವಣ್ಣ.H.C

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. 29/MYS/2023
ದಿನಾಂಕ: 09.08.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	"ಬೆಳಗುಳ ಯಾರ್ಡ್‌ನಲ್ಲಿ ಎರಡು ಹೆಚ್ಚುವರಿ ಲೂಪ್ ಲೈನ್‌ಗಳನ್ನು ಒದಗಿಸುವುದು" ಅಡಿಯಲ್ಲಿ ಬಾಕಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ.	ರೂ. 28,98,325/-
2	ಹಾಸನ–ಮಂಗಳೂರು ವಿಭಾಗ: 2023–2024: ಹಿರಿಯ ಅಡಿಯಲ್ಲಿ ವಿಭಾಗ ಇಂಜಿನಿಯರ್ / ಸೇತುವೆಗಳು / ಸಕಲೇಶಪುರ ಕಾರ್ಯವ್ಯಾಪ್ತಿ ಅಡಿಯಲ್ಲಿ ಹಾಸನ–ಮಂಗಳೂರು ಜಂಕ್ಷನ್ ವಿಭಾಗದಲ್ಲಿ (ಸಕಲೇಶಪುರ – ಸುಬ್ರಹ್ಮಣ್ಯ ರಸ್ತೆ ಘಾಟ್ ವಿಭಾಗ ಸೇರಿದಂತೆ) 2018 ವರ್ಷಕ್ಕೆ ಉಕ್ಕಿನ ಗರ್ಡರ್ ಸೇತುವೆಗಳ ಪೇಂಟಿಂಗ್ (ಬ್ಯಾಲೆನ್ಸ್ ವರ್ಕ್) ಮತ್ತು ಸೇತುವೆ ಸಂ.263 {ಸ್ಪಾನ್–2x12.19ಮೀ + 1x30.50ಮೀ} @ ಕಿಮೀ 73/800–74/000.	ರೂ. 74,95,688/-
3	ಎರಡು ವರ್ಷಗಳ ಅವಧಿಗೆ ಹಿರಿಯ ವಿಭಾಗ ಇಂಜಿನಿಯರ್/ಸೇತುವೆ/ ಸಕಲೇಶಪುರ ಕಾರ್ಯವ್ಯಾಪ್ತಿ ಅಡಿಯಲ್ಲಿ ಹಾಸನ–ಮಂಗಳೂರು ಜಂಕ್ಷನ್ ವಿಭಾಗ (ಸಕಲೇಶಪುರ – ಸುಬ್ರಹ್ಮಣ್ಯ ಘಾಟ್ ವಿಭಾಗ ಸೇರಿದಂತೆ) ನಡುವೆ ಡರ್ ಸೇತುವೆಗಳಿಗೆ ವಿಶೇಷ ದುರಸ್ತಿ.	ರೂ. 75,17,690/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31–08–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್/ಕೋ–ಆರ್ಡ್
ಮೈಸೂರು

PUB/303/AAV/PRB/SWR/2023-24

S.W.Railways SWRRLY SWRRLY

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ಮೈಸುರು ಜಿಲ್ಲೆ - 571124
Email: itstaff_ulb_tnarasipura@yahoo.com
Website : www.tnarasipuratown.mrc.gov.in
Phone: 08227-261232

ಸಂಖ್ಯೆ:ತಿ.ನಪು/ಪುಸ/ಬೀವ್ಯಾ.ಕು./ಪಿ.ಆರ್/02/2023–24 ದಿನಾಂಕ:10.08.2023

ಡೇ–ನಲ್ಮ್ ಅಭಿಯಾನದಲ್ಲಿ ಕುಂದುಕೊರತೆ ನಿವಾರಣಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಸಮಿತಿ ರಚನೆಗೆ ಅರ್ಜಿ ಆಹ್ವಾನ

ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಬೀದಿಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ) ಅಧಿನಿಯಮ–2014 & ಕರ್ನಾಟಕ ಬೀದಿಬದಿ ವ್ಯಾಪಾರಿಗಳ ನಿಯಮಗಳು 2019 ರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿಬದಿ ವ್ಯಾಪಾರಿಗಳ ಕುಂದುಕೊರತೆ ನಿವಾರಣಾ ಸಮಿತಿ ಮತ್ತ ಮೇಲ್ಮನವಿ ಪ್ರಾಧಿಕಾರ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ. ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುವ ನಿವೃತ್ತ ಸಿವಿಲ್ ನ್ಯಾಯಾಧೀಶರು, ಉತ್ತಮ ಸೇವಾ ರೆಕಾರ್ಡ್ ಹೊಂದಿರುವ ಒಬ್ಬ ಗ್ರೂಪ್ "ಎ" ದರ್ಜೆ ಅಧಿಕಾರಿ ಹಾಗೂ ಬೀದಿಬದಿ ವ್ಯಾಪಾರಿಗಳಲ್ಲಿ ಒಬ್ಬ ಉತ್ತಮ ಸಾಮಾಜಿಕ ಸೇವೆ ಮತ್ತ ಅರ್ಥಿಕ ಸೇವಾ ಚಟುವಟಿಕೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಸದಸ್ಯರನ್ನಾಗಿ ನೇಮಕಮಾಡಿಕೊಳ್ಳಲು ಪ್ರಕಟಣೆ ಹೊರಡಿಸಲಾಗಿದೆ. ಪ್ರಕಟಣೆ ಹೊರಡಿಸಿದ ಒಂದು ವಾರದೊಳಗೆ ತಿ.ನರಸೀಪುರ ಪುರಸಭೆ ಮುಖ್ಯಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಪುರಸಭೆಯ ಮುಖ್ಯಾಧಿಕಾರಿ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ

ಸಹಿ/– ಮುಖ್ಯಾಧಿಕಾರಿ, ಪುರಸಭೆ ತಿ.ನರಸೀಪುರ.

DIPR/DDMYS/KSMCA/205/2023-24

5ನೇ ವರ್ಷದ ಸವಿನೆನಪು



ತಮ್ಮಯ್ಯ ನಾಯಕ
ಮಾಜಿ ಗ್ರಾ.ಪಂ ಸದಸ್ಯರು, ತಮ್ಮಡಹಳ್ಳಿ

ದುಃಖತಪ್ತರು: ಪತ್ನಿ ರಾಜಮ್ಮ, ಮಕ್ಕಳಾದ ದ್ಯಾವಪ್ಪನಾಯಕ ಅಧ್ಯಕ್ಷರು, ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮೈಸೂರು, ರವಿನಾಯಕ ಗುತ್ತಿಗೆದಾರರು, ಮಂಜುನಾಯಕ & ಸೊಸೆಯಂದಿರು, ಮೊಮ್ಮಕ್ಕಳು ಅಪಾರ ಬಂಧು ಬಳಗದವರು

7ನೇ ವರ್ಷದ ಸವಿನೆನಪು



ಸುರೇಶ್.ಬಿ
(ಗುತ್ತಿಗೆದಾರರು), ಶ್ರೀರಾಂಪುರ ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು : ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು ಬಂಧುಮಿತ್ರರು

ಕಾಡಾನೆ ಹಾವಳಿ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಿ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಸೂಚನೆ



ಮಡಿಕೇರಿ, ಆ.14– ಕಳೆದ ಮೂರು ತಿಂಗಳಲ್ಲಿ ಕಾಡಾನೆ ದಾಳಿಯ 44 ಪ್ರಕರಣಗಳು ವರದಿಯಾಗಿದ್ದು, ಕಾಡಾನೆ ಹಾವಳಿ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸೋಮವಾರಪೇಟೆಯ ತಾಪಂ ಕಚೇರಿ ಸಭಾಂಗಣದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಜೊತೆ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಸಿದ್ದಾಪುರ ಬಳಿಯ ಅರೆಕಾಡು ಸಮೀಪದಲ್ಲಿ ಭಾನುವಾರ ಕೃಷಿಕನ ಮೇಲೆ ಕಾಡಾನೆ ದಾಳಿ ನಡೆಸಿದೆ. ಕಾಡಾನೆಗಳನ್ನು ಕಾಡು ಪ್ರದೇಶಕ್ಕೆ ಓಡಿಸುವ ಸಂದರ್ಭದಲ್ಲಿ ಸ್ಥಳೀಯರಿಗೆ ಮಾಹಿತಿ ನೀಡಬೇಕು. ಮುಂಚಿತವಾಗಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಸ್ಪಷ್ಟ ನಿರ್ದೇಶನ ನೀಡಿದರು. ಕಾಡಾನೆ ಹಾವಳಿ ನಿಯಂತ್ರಣಕ್ಕೆ ತಂತಿ ಬೇಲಿ, ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಹೀಗೆ ಹಲವು ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಬೇಕು. ಕಾಡಾನೆ ಹಾವಳಿ ನಿಯಂತ್ರಣಕ್ಕೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ತಾಕೀತು ಮಾಡಿದರು.

ವಿಷಯ ಪ್ರಸ್ತಾಪಿಸಿದ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಕಾಡುಪ್ರಾಣಿಗಳ ಹಾವಳಿ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣವೇ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಪಡಿತರ ಚೀಟಿ ಸಂಬಂಧಿಸಿದಂತೆ ಆಧಾರ್ ಲಿಂಕ್ ಮಾಡಬೇಕು. ಈ ಸಂಬಂಧ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಹೇಳಿದರು. ಆಗಸ್ಟ್ ಅಂತ್ಯದೊಳಗೆ 3 ಸಾವಿರ ಕುಟುಂಬಗಳ ಆಧಾರ್‌ಗೆ ಕೆವೈಸಿ ಲಿಂಕ್ ಆಗಬೇಕಿದೆ. ಈ ಸಂಬಂಧ ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಅವರು ಹೇಳಿದರು. ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು–ಕೊರತೆ ಆಲಿಸಬೇಕು. ದೂರು ಬರದಂತೆ ವಿಶೇಷ ಗಮನಹರಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರು.

ಶಾಸಕ ಡಾ.ಮಂಥರ್‌ಗೌಡ, ಜಲಜೀವನ್ ಮಿಷನ್ ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಬೇಕು. ಬಳಗುಂದ ಗ್ರಾಮದಲ್ಲಿ ಕುಡಿಯುವ ನೀರು ಚೆನ್ನಾಗಿಲ್ಲ ಎಂಬ ಬಗ್ಗೆ ದೂರುಗಳು ಬಂದಿದ್ದು, ಪೈಪು ಒಡೆದಿದೆಯೋ ಏನು ಎಂಬುದನ್ನು ತಕ್ಷಣವೇ ಪರಿಶೀಲಿಸಿ ಸರಿಪಡಿಸುವಂತೆ ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ಸೂಚಿಸಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು ಸಂಬಂಧಪಟ್ಟ ಎಂಜಿನಿಯರ್‌ಗಳು, ತಾಪಂ ಇಓ ಮತ್ತು ಪಿಡಿಓಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು. ಜಿಪಂ ಸಿಇಓ ವರ್ಣಿತ್ ನೇಗಿ ಅವರು ಜಲಜೀವನ್ ಮಿಷನ್ ಯೋಜನೆ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಕೈಗೊಳ್ಳಲಾಗುವುದು. ಕೊಡಗು ಜಿಲ್ಲೆಯಿಂದ 10 ಮಂದಿ ಪಿಡಿಓಗಳು ವರ್ಗಾವಣೆಗೊಂಡಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ

ವಿವಿಧ ಶೀರ್ಷಿಕೆಯಡಿ ಅರ್ಥಪೂರ್ಣ ಕಾರ್ಯಕ್ರಮಗಳಿಗೆ ಚಾಲನೆ



ಚಾಮರಾಜನಗರ, ಆ.14– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತದಿಂದ ವಿವಿಧ ಶೀರ್ಷಿಕೆಯಡಿ ಅರ್ಥಪೂರ್ಣ ಕಾರ್ಯಕ್ರಮಗಳು ಸೋಮವಾರ ನಗರದಲ್ಲಿ ನಡೆಯಿತು.

ನಗರದ ಚಾಮರಾಜೇಶ್ವರ ದೇವಾಲಯದ ಬಳಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ, ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಪಂ ಸಿಇಓ ಎಸ್.ಪೂವಿತಾ, ಎಸ್ಪಿ ಪದ್ಮಿನಿ ಸಾಹು, ಎಡಿಸಿ ಗೀತಾ ಹುಡೇದ, ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ನಿರ್ದೇಶಕಿ ದೀಪಾ ಜೆ.ಕಂಟ್ರಾಕ್ಟರ್ ಸಮ್ಮುಖದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಸ್ವಾತಂತ್ರ್ಯ ಮಹೋತ್ಸವ ಹಿನ್ನೆಲೆಯಲ್ಲಿ ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಶೀರ್ಷಿಕೆಯಡಿ ರಾಷ್ಟ್ರಧ್ವಜ ಪ್ರದರ್ಶಿಸಲಾಯಿತು. ಅಲ್ಲದೇ ರಾಷ್ಟ್ರಗೀತೆ ಹಾಡಿ ಗೌರವ ಸಲ್ಲಿಸಲಾಯಿತು.

ಪಂಚಪ್ರಾಣ ಶೀರ್ಷಿಕೆಯಡಿ ಗಣ್ಯರು ಮಣ್ಣಿನ ಹಣತೆ ಹಚ್ಚಿದರು. ಹಣತೆಯನ್ನು ಕೈಯಲ್ಲಿ ಹಿಡಿದು ಸ್ವಾತಂತ್ರ್ಯ ಮಹೋತ್ಸವದ ಮಹತ್ವ ಸಾರಿದರು. ಬಳಿಕ ಸ್ವಾತಂತ್ರ್ಯ ನಡಿಗೆಗೆ ಚಾಲನೆ ನೀಡಲಾಯಿತು. ಗಣ್ಯರು, ಅಧಿಕಾರಿಗಳು, ವಿದ್ಯಾರ್ಥಿಗಳೊಂದಿಗೆ ರಾಷ್ಟ್ರಧ್ವಜ ಹಿಡಿದು ಚಾಮರಾಜೇಶ್ವರ ದೇವಸ್ಥಾನದಿಂದ ಹೊರಟು ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದ ಆವರಣ ತಲುಪಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 75 ಗಿಡಗಳನ್ನು ನೆಡುವ ವಸುದಾನಂದ ಕಾರ್ಯಕ್ರಮ ಜಿಲ್ಲಾಡಳಿತ ಭವನದ ಆವರಣದಲ್ಲಿ ನಡೆಯಿತು. ಗಣ್ಯರು, ಅಧಿಕಾರಿಗಳು ಜಿಲ್ಲಾಡಳಿತ ಭವನದ ಆವರಣದಲ್ಲಿ ಗಿಡಗಳನ್ನು ನೆಟ್ಟು ನೀರೆರೆದರು.

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಘನತೆಯ ಬಗ್ಗೆ ವಿಶೇಷವಾಗಿ ಮಕ್ಕಳಿಗೆ ತಿಳಿಸಿಕೊಡಲಾಗಿದೆ. ಪಂಚಪ್ರಾಣ ಶೀರ್ಷಿಕೆ ಕಾರ್ಯಕ್ರಮದಡಿ ಮಣ್ಣಿನ ಹಣತೆ ಹಚ್ಚುವ ಮೂಲಕ ಸ್ವಾತಂತ್ರ್ಯ ದೀಪ ಎಲ್ಲಾ ಕಡೆ ಬೆಳಗಲಿ ಎಂಬುದು ಉದ್ದೇಶವಾಗಿದೆ ಎಂದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 75 ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೂ ಚಾಲನೆ ನೀಡಲಾಗಿದೆ. ಸ್ವಾತಂತ್ರ್ಯ ನಡಿಗೆಯಲ್ಲಿ ನ್ಯಾಯಾಧೀಶರು, ಅಧಿಕಾರಿಗಳು, ವಿದ್ಯಾರ್ಥಿಗಳು ಪಾಲ್ಗೊಂಡಿರುವುದು ಹರ್ಷದ ಸಂಗತಿಯಾಗಿದೆ. ಹರ್ ಘರ್ ತಿರಂಗಾ ಅಭಿಯಾನವನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ವಾತಂತ್ರ್ಯೋತ್ಸವದ ಸಂದರ್ಭ ಜಿಲ್ಲೆಯಲ್ಲಿ ಪ್ರತಿ ಮನೆ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸುವ ಮೂಲಕ ಗೌರವ ಸಲ್ಲಿಸಬೇಕು. ಪ್ಲಾಸ್ಟಿಕ್ ಧ್ವಜ ಬಳಕೆ ಮಾಡಬಾರದು ಎಂದರು.

ಈ ವೇಳೆ ತಹಶೀಲ್ದಾರ್ ಬಸವರಾಜು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಬಿಇಓ ಸೋಮಣ್ಣೇಗೌಡ ಸೇರಿದಂತೆ ಅಧಿಕಾರಿಗಳಿದ್ದರು.

ಬೈಕ್‌ಗೆ ಓಮ್ನಿ ಡಿಕ್ಕಿ; ಸವಾರ ಸಾವು

ಮಡಿಕೇರಿ, ಆ.14– ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟ ಘಟನೆ ಗೋಣಿಕೊಪ್ಪದ ಕೈಕೇರಿ ಬಳಿ ನಡೆದಿದೆ. ಗೋಣಿಕೊಪ್ಪಲಿನ ಎಂ.ಎಂ. ಲೇಔಟ್ ನಿವಾಸಿ ಅಮೀಶ (23) ಅಪಘಾತದಲ್ಲಿ ಸಾವನ್ನಪ್ಪಿದ್ದು, ಈತ ಸೋಮವಾರ ಮಧ್ಯಾಹ್ನ ವಿರಾಜಪೇಟೆಯಿಂದ ಗೋಣಿಕೊಪ್ಪದತ್ತ ಕೆಟಿಎಂ ಬೈಕ್‌ನಲ್ಲಿ ತೆರಳುತ್ತಿದ್ದ ಸಂದರ್ಭ ಕೈಕೇರಿ ಬಳಿ ಗೋಣಿಕೊಪ್ಪದಿಂದ ವಿರಾಜಪೇಟೆ ಕಡೆಗೆ ಬರುತ್ತಿದ್ದ ಓಮ್ನಿ ವ್ಯಾನ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಬೈಕ್ ಸವಾರ ಅಮೀಶ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಗೋಣಿಕೊಪ್ಪಲು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಚಲಿಸುತ್ತಿದ್ದ ವಾಹನದಲ್ಲೇ ಹೃದಯಾಘಾತ; ಚಾಲಕ ಸಾವು

ಮಡಿಕೇರಿ, ಆ.14– ಚಲಿಸುತ್ತಿದ್ದ ವಾಹನದಲ್ಲೇ ಹೃದಯಾಘಾತವಾಗಿ ಚಾಲಕ ಸಾವನ್ನಪ್ಪಿರುವ ದಾರುಣ ಘಟನೆ ವಿರಾಜಪೇಟೆ ಹೊರವಲಯದ ಬಿಟ್ಟಂಗಾಲ ಬಳಿ ನಡೆದಿದೆ. ಬಿಟ್ಟಂಗಾಲ ಸಮೀಪದ ಪೆಗ್ಗರಿಕಾಡು ನಿವಾಸಿ ರವಿಕುಮಾರ್(28) ಎಂಬವರೇ ಮೃತ ದುರ್ದೈವಿಯಾಗಿದ್ದಾರೆ. ತಮ್ಮ ಪಿಕ್‌ಅಪ್ ವಾಹನದಲ್ಲಿ ಗೋಣಿಕೊಪ್ಪದಿಂದ ವಿರಾಜಪೇಟೆಯ ಬಿಟ್ಟಂಗಾಲ ಕಡೆಗೆ ತೆರಳುತ್ತಿದ್ದ ಸಂದರ್ಭ ಕೊಳತ್ತೋಡು ಬಳಿ ರವಿಕುಮಾರ್‌ಗೆ ಎದೆ ನೋವು ಕಾಣಿಸಿಕೊಂಡಿದ್ದು, ತೀವ್ರ ಹೃದಯಾಘಾತವಾಗಿ ವಾಹನದಲ್ಲೇ ಮೃತಪಟ್ಟಿದ್ದಾರೆ.

ಪತ್ರಕರ್ತರ ಜಿಲ್ಲಾ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಸಿಂಗಲ್ಸ್ ಆದರ್ಶ್ ಪ್ರಥಮ, ಡಬಲ್ಸ್ ನವೀನ್, ವಿಶ್ವ ಕುಂಬೂರು ಪ್ರಥಮ



ಕುಶಾಲನಗರ, ಆ.14– ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಣಾ ಸಮಿತಿ ಸಹಯೋಗದಲ್ಲಿ ಪತ್ರಕರ್ತರ ಜಿಲ್ಲಾ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ನಡೆಯಿತು.

ಪತ್ರಕರ್ತರ ಜಿಲ್ಲಾ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸಿಂಗಲ್ಸ್ ವಿಭಾಗದಲ್ಲಿ ಆದರ್ಶ್ ಮತ್ತು ಡಬಲ್ಸ್‌ನಲ್ಲಿ ನವೀನ್ ಹಾಗೂ ವಿಶ್ವ ಕುಂಬೂರು ಪ್ರಥಮ ಸ್ಥಾನ ಪಡೆದರು. ಸಮಾರೋಪ ಸಮಾರಂಭದಲ್ಲಿ ಉದ್ಯಮಿ ಎಚ್.ಪಿ.ರಂಜನ್ ಮತ್ತು ಚಲನಚಿತ್ರ ನಿರ್ದೇಶಕ ಗಯಾಜ್ ಕುಶಾಲ್ ವಿಜೇತರಿಗೆ ಬಹುಮಾನ ವಿತರಿಸಿದರು. ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಬಿ.ಆರ್.ಸವಿತಾ ರೈ ಅಧ್ಯಕ್ಷತೆ ವಹಿಸಿ ಮಾತನಾಡಿ, ಸುದ್ದಿಯ ಜಂಜಾಟದ ನಡುವೆ ಪತ್ರಕರ್ತರು ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಾರೆ. ಇದು ಪತ್ರಕರ್ತರ ಸುದ್ದಿಯ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದರು.

ವೇದಿಕೆಯಲ್ಲಿ ಕೊಡಗು ಪ್ರೆಸ್ ಕ್ಲಬ್ ಅಧ್ಯಕ್ಷರಾದ ಎ.ಆರ್.ಕುಟ್ಟಪ್ಪ, ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಣಾ ಸಮಿತಿ ಕ್ರೀಡಾ ಸಂಚಾಲಕರಾದ ಸಂತೋಷ್ ರೈ, ಪತ್ರಕರ್ತ ಎಚ್.ಸಿ.ಜಯಪ್ರಕಾಶ್, ಪಂದ್ಯಾವಳಿಯ ಸಂಚಾಲಕ ಕೆ.ಬಿ.ಶಂಶುದ್ದೀನ್, ಜೆಡಿಎಸ್ ಪ್ರಮುಖ ಮಹದೇವ್ ಇದ್ದರು.

ಚಿರತೆ ದಾಳಿಗೆ 2 ಕುರಿಗಳು ಬಲಿ



ಬೇಗೂರು, ಆ.14– ಚಿರತೆ ದಾಳಿಗೆ 2 ಕುರಿಗಳು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಯಡುವನಹಳ್ಳಿ ಗ್ರಾಮದ ಬಳಿ ನಡೆದಿದೆ.

ಹೊರೆಯಾಲ ಗ್ರಾಮದ ಬಸಮ್ಮ ಅವರಿಗೆ ಸೇರಿದ ಕುರಿಗಳು ಚಿರತೆ ದಾಳಿಗೆ ಬಲಿಯಾಗಿರುವುದು. ಯಡುವನಹಳ್ಳಿ ಬಳಿ ಇರುವ ಜಮೀನಿನಲ್ಲಿ ಬಸಮ್ಮನವರ ಪುತ್ರ ಮರಿಸ್ವಾಮಿ ಕುರಿ ಮೇಯಿಸುತ್ತಿದ್ದ ವೇಳೆ ಚಿರತೆ ದಾಳಿ ಮಾಡಿ ಕುರಿಗಳನ್ನು ಬಲಿ ಪಡೆದಿದೆ. ವಿಷಯ ತಿಳಿದು ಓಂಕಾರ್ ವಲಯದ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು.

ಇದೇ ವೇಳೆ ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ರೈತರು ತಮ್ಮ ಜಮೀನಿಗೆ ತೆರಳಲು ಹಾಗೂ ಜಾನುವಾರುಗಳನ್ನು ಮೇಯಿಸಲು ಸಾಧ್ಯವಾಗದೇ ಭಯಗೊಂಡಿದ್ದಾರೆ. ಕೂಡಲೇ ಅರಣ್ಯಾಧಿಕಾರಿಗಳು ಚಿರತೆ ಸೆರೆಗೆ ಕ್ರಮ ವಹಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು.

ಸಿಕ್ಕ ಅವಕಾಶದಲ್ಲಿ ಜನರ ಏಳಿಗೆಗೆ ದುಡಿಯಿರಿ

ಗ್ರಾಪಂ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಮಾಜಿ ಶಾಸಕ ಸಲಹೆ



ಗುಂಡ್ಲುಪೇಟೆ, ಆ.14– ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದಿಂದ ಎಲ್ಲಾ ವರ್ಗದ ಜನರು ರಾಜಕೀಯ ಅಧಿಕಾರ ಪಡೆಯುವಂತಾಗಿದೆ. ಹೀಗಾಗಿ ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಂಡು ಜನರ ಏಳಿಗೆಗೆ ದುಡಿಯಬೇಕು ಎಂದು ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ತಿಳಿಸಿದರು.

ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ಸೋಮವಾರ ನಡೆದ ಗ್ರಾಪಂನ ಬಿಜೆಪಿ ಬೆಂಬಲಿತ ನೂತನ ಅಧ್ಯಕ್ಷ–ಉಪಾಧ್ಯಕ್ಷರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಶ್ವಾಸನೆ ನೀಡುವ ಮೂಲಕ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಉಚಿತ ಬಸ್ ಎಂಬ ಗ್ಯಾರಂಟಿ ಯೋಜನೆ ಜಾರಿಗೆ ತಂದು ಸುಲಲಿತವಾಗಿ ಓಡಾಟ ನಡೆಸದಂತೆ ಮಾಡಿದ್ದಾರೆ. ಈ ಯೋಜನೆಗಳಿಗೆ ಪರಿಶಿಷ್ಟ ಜಾತಿ, ಪಂಗಡದ ಅನುದಾನ ಬಳಸುವ ಮೂಲಕ ದಲಿತ ವಿರೋಧಿ ಧೋರಣೆ ಎಸಗುತ್ತಿದೆ. ನಮ್ಮ ಆಡಳಿತಾವಧಿಯಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ. ಕ್ಷೇತ್ರದಲ್ಲಿ ಎಷ್ಟು ಅಭಿವೃದ್ಧಿ ಕೆಲಸಗಳಾಗಿವೆ ಎಂಬುದು ಜನರಿಗೆ ಗೊತ್ತಿದೆ. ಈ ಕ್ಷೇತ್ರದ ಶಾಸಕರು ಅಧಿಕಾರಕ್ಕೆ ಬಂದು 3 ತಿಂಗಳಾದರೂ ಕ್ಷೇತ್ರಕ್ಕೆ ಯಾವುದೇ ಅನುದಾನ ತಂದಿಲ್ಲ ಇದರಿಂದ ಮತದಾರರು ನಿರಾಸೆಗೊಂಡಿದ್ದಾರೆ. ಬಿಜೆಪಿ ಬೆಂಬಲಿತ 20 ಗ್ರಾಪಂ ಅಧ್ಯಕ್ಷರು ಹಾಗೂ 23 ಉಪಾಧ್ಯಕ್ಷರು ಆಯ್ಕೆಗೊಳ್ಳುವ ಮೂಲಕ ಬಿಜೆಪಿ ಪಕ್ಷ ಕ್ಷೇತ್ರದಲ್ಲಿ ತನ್ನ ಪ್ರಾಬಲ್ಯ ಮೆರೆದಿದ್ದು ಮುಂದಿನ ದಿನಗಳಲ್ಲಿ ಅಧಿಕಾರಕ್ಕೆ ಬರುತ್ತದೆ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮು, ಮಂಡಲಾಧ್ಯಕ್ಷ ಜಗದೀಶ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಬಗರ್‌ಹುಕುಂ ಸಮಿತಿ ಮಾಜಿ ಉಪಾಧ್ಯಕ್ಷ ನಾಗರಾಜಪ್ಪ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷರಾದ ಎಸ್.ಎಂ.ಮಲ್ಲಿಕಾರ್ಜುನ, ಎನ್.ಮಲ್ಲೇಶ್, ತಾಪಂ ಮಾಜಿ ಸದಸ್ಯರಾದ ಸಿ.ಮಹದೇವಪ್ರಸಾದ್, ರೇವಣ್ಣ, ಮುಖಂಡರಾದ ಎಲ್.ಸುರೇಶ್, ಶಿವಪ್ರಸಾದ್, ಕೃಷ್ಣ ಸೇರಿದಂತೆ ಇತರರಿದ್ದರು.

ಸಚಿವ ಸ್ಥಾನದಿಂದ ಎನ್.ಚಲುವರಾಯಸ್ವಾಮಿ ವಜಾಕ್ಕೆ ಒತ್ತಾಯಿಸಿ

ಆ.17, ರಾಜ್ಯಪಾಲರ ಬಳಿಗೆ ಬಿಜೆಪಿ ನಿಯೋಗ

ಮಾಜಿ ಸಚಿವ ಡಾ.ಅಶ್ವಥ್ ನಾರಾಯಣ್



ಮಂಡ್ಯ, ಆ.14– ಸಚಿವ ಸ್ಥಾನದಿಂದ ಎನ್.ಚಲುವರಾಯಸ್ವಾಮಿ ವಜಾಕ್ಕೆ ಒತ್ತಾಯಿಸಿ ಆ.17ರಂದು ರಾಜ್ಯಪಾಲರ ಬಳಿಗೆ ಬಿಜೆಪಿ ನಿಯೋಗ ತೆರಳಲಿದೆ ಎಂದು ಮಾಜಿ ಸಚಿವ ಡಾ.ಅಶ್ವಥ್ ನಾರಾಯಣ್ ತಿಳಿಸಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಕೃಷಿ ಸಚಿವ ಚಲುವರಾಯಸ್ವಾಮಿ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ವಿರೋಧಿಸಿ ಮಂಡ್ಯದಿಂದ ಹೋರಾಟ ಆರಂಭವಾಗಿದೆ. ಇದರ ಮುಂದುವರೆದ ಭಾಗವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ರಾಜ್ಯಪಾಲರ ಬಳಿಗೆ ನಿಯೋಗ ತೆರಳಲಿದೆ. ಪಕ್ಷದ ಶಾಸಕರು, ವಿಧಾನಪರಿಷತ್ ಸದಸ್ಯರು, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರು ನಿಯೋಗದಲ್ಲಿ ಇರಲಿದ್ದಾರೆ ಎಂದರು.

ಕೃಷಿ ಇಲಾಖೆ ಅಧಿಕಾರಿಗಳು ನಮ್ಮ ಬಳಿ ಸಚಿವ ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ. ಅದೇ ರೀತಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುತ್ತಿಗೆದಾರರ ಬಳಿ ಶೇ.15 ರಷ್ಟು ಕಮಿಷನ್‌ಗಾಗಿ ಪೀಡಿಸುತ್ತಿದ್ದಾರೆ. ಇಂತಹ ಭ್ರಷ್ಟ ಸಚಿವರನ್ನು ಸಂಪುಟದಿಂದ ವಜಾ ಮಾಡುವ ಜೊತೆಗೆ ಪ್ರಕರಣ ಕುರಿತು ಲೋಕಾಯುಕ್ತಕ್ಕೆ ತನಿಖೆ ನಡೆಸುವಂತೆ ರಾಜ್ಯಪಾಲರನ್ನು ಕೋರಲಾಗುವುದೆಂದು ಹೇಳಿದರು. ಸರ್ಕಾರದ ಭ್ರಷ್ಟಾಚಾರದ ವಿರುದ್ಧದ ಅಭಿಯಾನ ಇಷ್ಟಕ್ಕೆ ನಿಲ್ಲುವುದಿಲ್ಲ. ರಾಜ್ಯಾದ್ಯಂತ ವೈಎಸ್‌ಟಿ ತೆರಿಗೆ, ಪೇ ಸಿಎಂ, ಪೇ ಡಿಕೆ ಹಾಗೂ ಪೇ ಸಿಎಸ್ ಅಭಿಯಾನ ನಡೆಯಲಿದೆ ಎಂದು ತಿಳಿಸಿದರು.

ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಜನ ಮತ್ತು ರೈತ ವಿರೋಧಿ ಧೋರಣೆ ತಾಳಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಪರ ಹೋರಾಟ ಮುಂದುವರೆಯಲಿದ್ದು, ಪಕ್ಷದ ಕಾರ್ಯಕರ್ತರು ಮಂಡ್ಯದಿಂದ ಹೋರಾಟ ಆರಂಭಿಸುವ ಮೂಲಕ ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದೀರಿ. ನಿಮ್ಮಿಂದ ರಾಜ್ಯ ಮಟ್ಟಕ್ಕೆ ಹೋರಾಟ ತಲುಪಿದೆ ಎಂದರು.

ಧರಣಿ ಅಂತ್ಯ: 'ಕೈ', 'ಕಮಲ' ನಡುವೆ ಘೋಷಣೆ ಸಮರ

ಮಂಡ್ಯ, ಆ.14– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರಾಜೀನಾಮೆಗೆ ಒತ್ತಾಯಿಸಿ ಕಳೆದ 4 ದಿನಗಳಿಂದ ಬಿಜೆಪಿ ನಡೆಸುತ್ತಿದ್ದ ಅಹೋರಾತ್ರಿ ಧರಣಿ ಹಾಗೂ ಬಿಜೆಪಿ ವಿರುದ್ಧ ಕಾಂಗ್ರೆಸ್ ನಡೆಸುತ್ತಿದ್ದ ಧರಣಿ ಅಂತ್ಯಗೊಂಡಿದೆ.



ಧರಣಿ ಅಂತ್ಯಗೊಳಿಸುವ ಮುನ್ನ ಪಂಜಿನ ಮೆರವಣಿಗೆ ಹೊರಟ ಬಿಜೆಪಿ ಕಾರ್ಯಕರ್ತರು ಪಕ್ಕದಲ್ಲಿಯೇ ನಡೆಯುತ್ತಿದ್ದ ಕಾಂಗ್ರೆಸ್‌ನ ಅಹೋರಾತ್ರಿ ಧರಣಿ ಮುಂದೆಯೇ ಸಾಗಿದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಪೈಪೋಟಿ ಮೇಲೆ ಘೋಷಣೆ ಕೂಗಿದರು. ಇದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಪಂಜು ಹಿಡಿದ ಕೆಲ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಕಾರ್ಯಕರ್ತರತ್ತ ನುಗ್ಗಲು ಮುಂದಾದರು. ಇದನ್ನರಿತ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ಎರಡೂ ಪಕ್ಷದ ಕಾರ್ಯಕರ್ತರನ್ನು ತಡೆದು ವಾತಾವರಣ ತಿಳಿಗೊಳಿಸಿದರು. ನಂತರ ಮುಂದೆ ಸಾಗಿದ ಬಿಜೆಪಿ ಕಾರ್ಯಕರ್ತರು ಜೆ.ಸಿ.ವೃತ್ತದಲ್ಲಿ ಅಂತ್ಯಗೊಳಿಸಿದರೆ, ಕಾಂಗ್ರೆಸ್ ಕೂಡ ಧರಣಿ ಕೈಬಿಟ್ಟಿತು.

ಕಾಮಧೇನುಗೆ ಸೀಮಂತ ಕಾರ್ಯ



ಮಂಡ್ಯ, ಆ.14– ಹಸುಗೆ ಶಾಸ್ತ್ರೋಕ್ತವಾಗಿ ಸೀಮಂತ ಮಾಡಿ ಮದ್ದೂರು ತಾಲೂಕಿನ ಮುದ್ದಗೆರೆ ಗ್ರಾಮದ ಕುಟುಂಬವೊಂದು ಗಮನ ಸೆಳೆದಿದೆ.

ಗ್ರಾಮದ ರಾಜಪ್ಪ ಎಂಬುವರ ಮನೆಯಲ್ಲಿ ಹಸುವಿನ ಸೀಮಂತ ನಡೆದಿದ್ದು, ಮಲೆನಾಡು ಗಿಡ್ಡ ತಳಿಯ ಹಸುವಿಗೆ ಶಾಸ್ತ್ರೋಕ್ತವಾಗಿ ಸೀಮಂತ ಕಾರ್ಯ ಮಾಡಿದ್ದಾರೆ. ತೃಪ್ತಿ ತುಂಬಿ ಗರ್ಭಿಣಿ ಮಹಿಳೆಯರ ಮಾದರಿಯಂತೆ ಸೀಮಂತ ಮಾಡಿದ್ದು, ಗ್ರಾಮಸ್ಥರಿಗೆಲ್ಲ ಊಟ ಹಾಕಿಸಿ, ವಿಶಿಷ್ಟವಾಗಿ ಗಮನ ಸೆಳೆದಿದ್ದಾರೆ. ಹಸು ಮಾಲೀಕ ರಾಜಪ್ಪ ಮಾತನಾಡಿ, ಹಸುಗಳಿಂದ ನಾವು ಚೆನ್ನಾಗಿ ಬದುಕುತ್ತಿದ್ದೇವೆ. ಅವುಗಳನ್ನು ಚೆನ್ನಾಗಿ ನೋಡಿಕೊಂಡರೆ ನಾವು ಸಮೃದ್ಧವಾಗಿರುತ್ತೇವೆ. ನಮ್ಮ ಮನೆಯ ಹೆಣ್ಣು ಮಕ್ಕಳೆಂದು ಭಾವಿಸಿ ಸೀಮಂತ ಮಾಡಿದ್ದೇವೆ ಎಂದರು. ರಾಜಪ್ಪ ಅವರ ಇಡೀ ಕುಟುಂಬ ಗೋ ಪ್ರೇಮಿ ಕುಟುಂಬವಾಗಿದ್ದು, ಹಬ್ಬ ಹರಿದಿನಗಳಲ್ಲಿ ಗೋವುಗಳನ್ನು ವಿಶೇಷ ರೀತಿ ಪೂಜಿಸುತ್ತಾರೆ. ಈ ನಿಟ್ಟಿನಲ್ಲಿ ಗೋವಿಗೆ ಸೀಮಂತ ಮಾಡಿ, ಇಡೀ ಊರಿಗೆ ಊಟ ಹಾಕಿಸಿದ್ದಾರೆ.

ನಟ ಉಪೇಂದ್ರ ವಿರುದ್ಧ ದೂರು ದಾಖಲು



ಮಂಡ್ಯ, ಆ.14– ಪರಿಶಿಷ್ಟ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಹಿನ್ನೆಲೆಯಲ್ಲಿ ನಟ ಹಾಗೂ ನಿರ್ದೇಶಕ ಉಪೇಂದ್ರ ವಿರುದ್ಧ ಮದ್ದೂರು ತಾಲೂಕಿನ ಕೆ.ಎಂ. ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಲ್ಲಿನ ಪೊಲೀಸ್ ಠಾಣೆಯಲ್ಲಿ ಉಪೇಂದ್ರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಾಗಿದ್ದು, ಮದ್ದೂರು ತಾಲೂಕು ದಲಿತ ಸಂಘಟನೆಗಳ ಒಕ್ಕೂಟದಿಂದ ದೂರು ಕೊಡಲಾಗಿದೆ. ಉಪೇಂದ್ರ ಹೇಳಿಕೆ ದಲಿತ ಸಮಾಜದ ಭಾವನೆಗಳಿಗೆ ಘಾಸಿ ಉಂಟು ಮಾಡಿದೆ. ಆದ್ದರಿಂದ ಉಪೇಂದ್ರ ವಿರುದ್ಧ SC/ST ದೌರ್ಜನ್ಯ ಕಾಯ್ದೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಆಗ್ರಹಿಸಲಾಗಿದೆ.

ಕಬಿನಿ ನೀರಾವರಿ ಕಚೇರಿ ಮುಂದೆ ರೈತರ ಪ್ರತಿಭಟನೆ



ನಂಜನಗೂಡು, ಆ.14– ಕಬಿನಿ ನೀರಾವರಿ ಇಲಾಖೆ ಅಧಿಕಾರಿಗಳು ನಾಲೆಗಳ ಹೂಳು ತೆಗೆಸಿಲ್ಲ ಹಾಗೂ ರೈತರ ಜಮೀನುಗಳಿಗೆ ನೀರು ಹರಿಸಲು ಮುಂದಾಗಿಲ್ಲ ಎಂದು ಆರೋಪಿಸಿ ಸಾಮೂಹಿಕ ನಾಯಕತ್ವದಲ್ಲಿ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಕಬಿನಿ ನೀರಾವರಿ ಕಚೇರಿಯ ಮುಂಭಾಗ ಜಮಾವಣೆಗೊಂಡ ರೈತರು ನೀರಾವರಿ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್. ವಿದ್ಯಾಸಾಗರ್ ಮಾತನಾಡಿ, ಕಬಿನಿ ಬಲದಂಡೆ ಹಾಗೂ ಎಡದಂಡೆ ನಾಲೆಗಳಿಗೆ ಆ.25ರಂದೇ ನೀರು ಹರಿಸಿದ್ದರೂ ಸಹ ಅಧಿಕಾರಿಗಳು ತೂಬುಗಳನ್ನು ತೆರೆಯದೆ ಇರುವ ಕಾರಣ ಕೆರೆಗಳಿಗೆ ಹಾಗೂ ಗದ್ದೆಗಳಿಗೆ ನೀರು ಹರಿಯುತ್ತಿಲ್ಲ, ಅಲ್ಲದೆ ನಾಲೆಗಳ ಹೂಳು ತೆಗೆಯದೆ ನೀರು ಹರಿಸಿರುವ ಕಾರಣ ಕಡೆಯ ಭಾಗದ ರೈತರ ಜಮೀನುಗಳಿಗೆ ನೀರು ತಲುಪುತ್ತಿಲ್ಲ ಎಂದು ಆರೋಪಿಸಿದರು.

ನೀರಾವರಿ ಅಧಿಕಾರಿಗಳು ಎಚ್ಚೆತ್ತುಕೊಂಡು ಈ ಕೂಡಲೇ ನಾಲೆಯ ತೂಬುಗಳನ್ನು ತೆರೆದು ರೈತರ ಜಮೀನುಗಳಿಗೆ ಮತ್ತು ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಮುಂದಾಗಬೇಕು ಇಲ್ಲವಾದಲ್ಲಿ ಉಗ್ರ ಪ್ರತಿಭಟನೆಯನ್ನು ರೂಪಿಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಸತೀಶ್ ರಾವ್, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಇಮ್ಮಾವು ರಘು, ಕೆಂಪಣ್ಣ, ನಾಗರಾಜು, ದೊಡ್ಡಯ್ಯ, ಶಿವಣ್ಣ, ಮಹದೇವ ನಾಯಕ, ರಮೇಶ್, ಶೈಲಜಾ, ಸಿದ್ದಮ್ಮ, ಮಂಜುನಾಥ್, ಮುಳ್ಳೂರು ರಾಮಣ್ಣ ಹಲವಾರು ಪ್ರಮುಖರು ಇದ್ದರು.

ಸ್ಕೂಟರ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು



ಕೆ.ಆರ್. ನಗರ, ಆ.14– ಸ್ಕೂಟರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಪಟ್ಟಣದ ಚೌಕಹಳ್ಳಿ ಡಾಬಾದ ಬಳಿ ಸಂಭವಿಸಿದೆ. ಡೋರ್ನಹಳ್ಳಿ ನಿವಾಸಿ ಜುವಾನಿಸ್(63) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಇಂದು ಮಧ್ಯಾಹ್ನ ಸ್ಕೂಟರ್‌ನಲ್ಲಿ ತೆರಳುತ್ತಿದ್ದಾಗ ಕೆಎಸ್‌ಆರ್‌ಟಿಸಿ ಬಸ್ (KA,18.F,0868,) ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಜುವಾನಿಸ್ ಮೃತಪಟ್ಟಿದ್ದಾರೆ. ಈ ಸಂಬಂಧ ಕೆ.ಆರ್. ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಮೃತರು ಪತ್ನಿ, ಚಾಮರಾಜನಗರ ಜಿಲ್ಲೆ ದೊಡ್ಡರಾಯಪೇಟೆಯ ಸಂತ ಥೆರೆಸಮ್ಮರವರ ದೇವಾಲಯದ ರೆ.ಫಾ. ಜೆ. ಆಂಟೆನಿ ರಾಜ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ನಾಳೆ (ಆ.15) ಸಂಜೆ 4 ಗಂಟೆಗೆ ಡೋರ್ನಹಳ್ಳಿಯ ಸಂತ ಆಂತೋಣಿಯವರ ಕಿರು ಬಸಲಿಕದಲ್ಲಿ ಅಂತಿಮ ಬಲಿ ಪೂಜೆ ನೆರವೇರುವುದು. ನಂತರ ಅವರನ್ನು ಭೂಸ್ಥಾಪನೆ ಮಾಡಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ತಾಲೂಕು ಡಿಎಂಜಿ ಹಳ್ಳಿ ಗ್ರಾಪಂ ಗ್ರಂಥಾಲಯದಲ್ಲಿ ಗ್ರಂಥಾಲಯ ಪಿತಾಮಹ ಎನ್.ಆರ್.ರಂಗನಾಥ್ ಅವರ ಜಯಂತಿ ಆಚರಿಸಲಾಯಿತು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಶ್ರೀಮತಿ ನೀತಾ ಲಕ್ಷ್ಮಿ, ಗ್ರಾಪಂ ಸದಸ್ಯ ಭಗವಂತ ಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಮಾಲೇಗೌಡ, ಗ್ರಂಥಪಾಲಕ ಪುಟ್ಟೇಗೌಡ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ಜೆಡಿಎಸ್ ಯುವ ಮುಖಂಡ ಸಾವು



ಹನಗೋಡು, ಆ.14– ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಜೆಡಿಎಸ್ ಯುವ ಮುಖಂಡ ರಮೇಶ್ ಭಾನುವಾರ ಸಂಜೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಅಬ್ಬೂರು ಗ್ರಾಮದ ರಮೇಶ್ ಕಳೆದ ಶನಿವಾರ ತನ್ನ ಜಮೀನು ಹಾಗೂ ಅಕ್ಕ ಪಕ್ಕದ ರೈತರ ಜಮೀನಿನಲ್ಲಿ ಬೆಳೆದಿದ್ದ ತರಕಾರಿಗಳನ್ನು ಬೆಂಗಳೂರಿನ ಮಾರುಕಟ್ಟೆಗೆ ಮಹೇಂದ್ರ ಬೊಲೆರೋ ವಾಹನದಲ್ಲಿ ಕೊಂಡೊಯ್ದು ಭಾನುವಾರ ಮುಂಜಾನೆ ಮಾರಾಟ ಮಾಡಿ ವಾಪಸ್ಸಾಗುತ್ತಿದ್ದಾಗ ಮದ್ದೂರು ಬಳಿ ಲಾರಿ ಹಾಗೂ ಮಹೇಂದ್ರ ಬೊಲೇರೋ ವಾಹನದ ನಡುವೆ ಡಿಕ್ಕಿ ಹೊಡೆದ ಪರಿಣಾಮ ರಮೇಶ್ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ನಿನ್ನೆ ಸಂಜೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತರಾಗಿದ್ದಾರೆ.

ಶಾಸಕ ಜಿ.ಟಿ.ದೇವೇಗೌಡರ ಪತ್ನಿ ಲಲಿತ ಜಿ.ಟಿ.ದೇವೇಗೌಡ, ದೊಡ್ಡಹೆಜ್ಜೂರು ಗ್ರಾಪಂ ಮಾಜಿ ಅಧ್ಯಕ್ಷ ಮುದಗನೂರು ಸುಭಾಷ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರವಿಕುಮಾರ್, ದಾ.ರಾ. ಮಹೇಶ, ಇನ್ನಿತರರು ಅಂತಿಮ ದರ್ಶನ ಪಡೆದರು.

ಪಶ್ಚಿಮಬಂಗಾಳ ಮೂಲದ ವ್ಯಕ್ತಿ ನಾಪತ್ತೆ

ನಂಜನಗೂಡು, ಆ.14– ಪಶ್ಚಿಮಬಂಗಾಳ ಮೂಲದ ಕೃಷ್ಣ ಬಗ್ದಿ (45) ಎಂಬಾತ ಕಾಣೆಯಾಗಿದ್ದಾನೆ. ಈತ ಕುಟುಂಬ ಸಮೇತ ತಾಲೂಕಿನ ಹದಿನಾರು ಗ್ರಾಮದ ಜೇಮ್ಸ್ ಎಂಬುವರ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದು, ಆ.10 ರಂದು ಮಧ್ಯಾಹ್ನದಿಂದ ಕಾಣೆಯಾಗಿದ್ದಾನೆ. ಈತನ ಬಗ್ಗೆ ಮಾಹಿತಿ ಇರುವವರು ನಂಜನಗೂಡು ಗ್ರಾಮಾಂತರ ಠಾಣೆಯನ್ನು ಸಂಪರ್ಕಿಸುವಂತೆ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಿಬಸವ ಶಾಸ್ತ್ರಿ ನಿಧನ



ಹುಣಸೂರು, ಆ.14– ತಾಲೂಕಿನ ಶ್ರೀ ಕೆಂಡಗಣ್ಣ ಸ್ವಾಮಿ ಗದ್ದಿಗೆಯ ಪ್ರಧಾನ ಆಗಮಿಕರಾದ ವೇದಬ್ರಹ್ಮ ಕರಿಬಸವ ಶಾಸ್ತ್ರಿಗಳು ಲಿಂಗೈಕ್ಯರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಕೆಂಡಗಣ್ಣ ಸ್ವಾಮಿ ಗದ್ದಿಗೆಯ ಕಟ್ಟುವಾಡಿ ಗ್ರಾಮದಲ್ಲಿ ನಾಳೆ (ಆ.15) ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.


WISHING OUR PRODUCER
SANDESH NAGARAJ
A HAPPY BIRTHDAY
BIG DADDY OF ALL MASSES
DR SHIVARAJKUMAR
GHOST
DASARA 2023
PRODUCED BY
SANDESH N
VISION BY
SRINI
T SERIES


Sandesh Productions
LOKESH Productions
ಹುಟ್ಟುಹಬ್ಬದ ಶುಭಾಶಯಗಳು
ಸಂದೇಶ್ ನಾಗರಾಜ್
ಎಂ.ಎಲ್.ಸಿ - ರಾಷ್ಟ್ರಪ್ರಶಸ್ತಿ ವಿಜೇತರು
SANDESH PRODUCTION
LOKESH PRODUCTION
PRESENTS
TALKING STAR SRUJAN LOKESH IN
GST
GHOSTS IN TROUBLE
ನಿರ್ಮಾಪಕರು : ಸಂದೇಶ್. ಎನ್
ನಿರ್ದೇಶನ : ಸೃಜನ್ ಲೋಕೇಶ್
ಗುಂಡ್ಲುಪೇಟೆ ಸುರೇಶ್ - ಚಂದನ್ ಶೆಟ್ಟಿ - ತೇಜಸ್ವಿ.ಕೆ.ನಾಗ್ - ಗಣೇಶ್ ಮಲ್ಲಯ್ಯ
AVES DESIGN STUDIO


ನಮ್ಮ ನಿರ್ಮಾಪಕರಾದ
ಸಂದೇಶ್ ನಾಗರಾಜ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
2024
SRINI'S
CASE 2
ಸಂದೇಶ.N | ಶ್ರೀನಿ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ

ಬಡವರ ಬಂಧು ಗೆಳೆಯರ ಬಳಗದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ



ಮೈಸೂರು, ಆ.14(ಎಸ್‌ಪಿಎನ್)– ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬಡವರ ಬಂಧು ಗೆಳೆಯರ ಬಳಗದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಹಾಜನ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಇತರೆ ಸಾಮಾಗ್ರಿಗಳು ಹಾಗೂ ಮೂವರ ಮಂದಿ ಮಹಿಳೆಯರಿಗೆ ವಿಧವಾ ಮಾಶಾಸನ ಪ್ರಮಾಣ ಪತ್ರವನ್ನು ನಗರ ಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್ ವಿತರಿಸಿದರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರೌಢಶಾಲೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ವಿದ್ಯಾರ್ಥಿಗಳು ಶಿಕ್ಷಕ ಮಾರ್ಗದರ್ಶನದಲ್ಲಿ ಉನ್ನತ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಕಿವಿ ಮಾತು ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿ(ಉತ್ತರ ವಲಯ) ಕೃಷ್ಣ ಮಾತನಾಡಿ, ಅನೇಕ ಸಾಧಕರು ಬಡತನದಲ್ಲಿ ಹುಟ್ಟಿ – ಬೆಳೆದು ಸ್ವ– ಸಾಮರ್ಥ್ಯ ಮೇಲೆ ಎತ್ತರಕ್ಕೆ ಬೆಳೆದು ಸಾಧನೆ ಮಾಡಿ, ಸಮುದಾಯಕ್ಕೆ ಉತ್ತಮ ಕೆಲಸ ಮಾಡುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಈ ವೇಳೆ 40ಕ್ಕೂ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಇತರೆ ಲೇಖನ ಸಾಮಾಗ್ರಿಗಳನ್ನು ವಿತರಿಸಲಾಯಿತು. ವೇದಿಕೆಯಲ್ಲಿ ಬಡವರ ಬಂಧು ಕನ್ನಡ ಗೆಳೆಯರ ಬಳಗದ ಅಧ್ಯಕ್ಷ ಪಾಪಣ್ಣ ರಮೇಶ್, ಎನ್. ಕೃಷ್ಣಮೂರ್ತಿ, ಕೃಷ್ಣ, ಕೆಪಿಸಿಸಿ ಅಸಂಘಟಿತ, ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಶ್ರೀಪಾಲ್, ಮುಖ್ಯಶಿಕ್ಷಕಿ ಸುಜಾತ, ಬೀರೇಗೌಡ ಇತರರಿದ್ದರು.

ರಾಜ್ಯದ ಇಬ್ಬರು ಐಪಿಎಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

18 ಪೊಲೀಸರಿಗೆ ವಿಶಿಷ್ಟ ಸೇವಾಚಿ ಪದಕ ಘೋಷಣೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ನೀಡುವ ರಾಷ್ಟ್ರಪತಿ ಪದಕ ವಿಜೇತರ ಹೆಸರು ಘೋಷಣೆಯಾಗಿದೆ. ಎಡಿಜಿಪಿಗಳಾದ ಸೀಮಂತ್ ಕುಮಾರ್ ಸಿಂಗ್, ಎಸ್. ಮುರುಗನ್, ಡಿಜಿಪಿ ಸಂದೀಪ್ ಪಾಟೀಲ್ ಅವರಿಗೆ ರಾಷ್ಟ್ರಪತಿ ಪದಕ ಲಭಿಸಿದೆ. **ರಾಷ್ಟ್ರಪತಿ ಪದಕ:** ಸೀಮಂತ್ ಕುಮಾರ್ ಸಿಂಗ್ (ಎಡಿಜಿಪಿ), ಎಸ್. ಮುರುಗನ್ (ಎಡಿಜಿಪಿ) **ವಿಶಿಷ್ಟ ಸೇವಾ ಪದಕ:** ಸಂದೀಪ್ ಪಾಟೀಲ್ (ಐಜಿಪಿ), ಬಿ.ಎಸ್. ಮೋಹನ್‌ಕುಮಾರ್ (ಡಿವೈಎಸ್‌ಪಿ), ನಾಗರಾಜ್ (ಎಸಿಪಿ), ಶಿವಶಂಕರ್ (ಕೆಪಿಎ ಅಸಿಸ್ಟೆಂಟ್ ಡೈರೆಕ್ಟರ್), ಭೀಮಾರಾವ್ ಗಿರೀಶ್ (ಎಸ್‌ಪಿ), ರಾಘವೇಂದ್ರ ಹೆಗ್ಡೆ (ಎಸ್‌ಪಿ), ಜಗದೀಶ್ ಹೆಚ್.ಎಸ್. (ಎಸಿಪಿ), ಕೇಶವಮೂರ್ತಿ ಗೋಪಾಲಯ್ಯ (ಡಿಎಸ್‌ಪಿ), ನಾಗಯ್ಯ ನಾಗರಾಜು (ಡಿಎಸ್‌ಪಿ), ಬಿ.ಎನ್ ಶ್ರೀನಿವಾಸ್ (ಡಿಎಸ್‌ಪಿ), ಅಂಜುಮಾಲ ನಾಯ್ಕ್ (ಡಿವೈಎಸ್‌ಪಿ), ಅನಿಲ್ ಕುಮಾರ್ ಪ್ರಭಾಕರ್ (ಪೊಲೀಸ್ ಇನ್‌ಸ್ಪೆಕ್ಟರ್), ಅಶೋಕ್ ಆರ್.ಪಿ (ಪೊಲೀಸ್ ಇನ್‌ಸ್ಪೆಕ್ಟರ್), ರಾಮಪ್ಪ ಗುತ್ತೇರ್ (ಪೊಲೀಸ್ ಇನ್‌ಸ್ಪೆಕ್ಟರ್), ಶಂಕರ (ಹೆಡ್ ಕಾನ್‌ಸ್ಟೇಬಲ್), ಕೆ.ವೆಂಕಟೇಶ್ (ಹೆಡ್ ಕಾನ್‌ಸ್ಟೇಬಲ್), ಕುಮಾರ್ (ಸಹಾಯಕ ಮುಖ್ಯ ಪೇದೆ), ವಿ.ಬಂಗಾರು (ಕೆಎಸ್‌ಆರ್‌ಪಿ)

ಮೂರನೇ ಪುಟದಿಂದ

ಹೊಸ ಪರಿಕಲ್ಪನೆಯಡಿ ವಿಶಿಷ್ಟವಾಗಿ ದಸರಾ ಆಚರಣೆ

ಹೋಗಲು ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಸರ್ಕಾರದ ಆಡಳಿತ, ಅಭಿವೃದ್ಧಿ ಬಿಂಬಿಸಬೇಕು. ಹಲವು ವಿಚಾರಗಳ ಬಗ್ಗೆ ಅರ್ಥಪೂರ್ಣ ವಿಚಾರಗೋಷ್ಠಿಗಳ ನಡೆಸಬೇಕು. ಇದು ಬಿಟ್ಟು ಪ್ರತಿ ವರ್ಷ ನಡೆಸುವ ಮಾದರಿಯಲ್ಲೇ ದಸರಾ ನಡೆಸಿದರೆ ಏನು ಪ್ರಯೋಜನ ಎಂದು ಡಾ.ಮಹದೇವಪ್ಪ ಅಧಿಕಾರಿಗಳನ್ನು ಪ್ರಶ್ನಿಸಿದರು.

ಮೈಸೂರು ದಸರಾ ಕೇವಲ ಒಂದೆರಡು ಕಾರ್ಯಕ್ರಮಗಳಿಗೆ ಸೀಮಿತವಾಗಬಾರದು. ವಿಶ್ವ ವಿಖ್ಯಾತ ದಸರಾ ಎಂಬ ಹೆಸರಿಗೆ ತಕ್ಕಂತೆ ಎಲ್ಲಾ ಕಾರ್ಯಕ್ರಮಗಳನ್ನು ಕ್ರೋಢೀಕರಿಸಬೇಕು. ಎಲ್ಲಾ ಸಮುದಾಯವನ್ನು ಆಕರ್ಷಿಸುವ ದಸರಾ ಆಚರಣೆ ಮಾಡುವ ನಿಟ್ಟಿನಲ್ಲಿ ವೈಶಿಷ್ಟ್ಯಪೂರ್ಣ ಹೊಸ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ದಸರಾ ಅಂದರೆ ಆಹಾರ ಮೇಳದಲ್ಲಿ ಇಡ್ಲಿ, ದೋಸೆ, ಮಂಗಳೂರು ಬಜ್ಜಿ ತಿಂದು ಹೋಗುವುದಾಗಿದೆ. ಆಹಾರ ಮೇಳ ಹಾಗೂ ಯುವ ದಸರಾದಿಂದ ದಸರಾದ ಸಾಂಸ್ಕೃತಿಕ ವೈಭವ ಬಿಂಬಿಸುವ ಕುಸ್ತಿ, ಪೊಲೀಸ್ ಬ್ಯಾಂಡ್ ಸೇರಿದಂತೆ ಇತರೆ ಪರಂಪರಾಗತ ಕಾರ್ಯಕ್ರಮಗಳು ಪ್ರಾಮುಖ್ಯತೆ ಕಳೆದುಕೊಳ್ಳುತ್ತಿವೆ. ಈ ಹಿನ್ನೆಲೆ ದಸರಾ ಎಂಬ ಪರಿಕಲ್ಪನೆಯಲ್ಲಿ ರೂಪುಗೊಂಡಿರುವ ಕಾರ್ಯಕ್ರಮಗಳಿಗೆ ಜನರನ್ನು ಆಕರ್ಷಿಸುವಂತೆ ಹೊಸತನದ ಸ್ಪರ್ಶ ನೀಡಬೇಕು ಎಂದು ಡಾ.ಮಹದೇವಪ್ಪ ಹೇಳಿದರು.

ಹಾಗಂತ ಆಹಾರ ಮೇಳ ಹಾಗೂ ಯುವ ದಸರಾಗೆ ಪ್ರಾಮುಖ್ಯತೆ ನೀಡದೆ ಯುವ ಪೀಳಿಗೆಗೆ ಬೇಸರ ಮಾಡುವುದು ಬೇಡ. ಈ ಕಾರ್ಯಕ್ರಮಗಳಿಗೆ ಹೇಗೆ ಜನರು ಆಕರ್ಷಿತರಾಗುತ್ತಾರೋ ಅದೇ ರೀತಿ ಇತರೆ ಕಾರ್ಯಕ್ರಮಗಳಿಗೂ ಜನರು ಆಕರ್ಷಣೆಗೊಳಗಾಗುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

16 ಸಮಿತಿ ರಚನೆ: ಮೈಸೂರು ದಸರಾವನ್ನು ಯಶಸ್ವಿಗೊಳಿಸಲು 16 ಸಮಿತಿಗಳನ್ನು ರಚನೆ ಮಾಡಲಾಗುವುದು. ಅವಶ್ಯವಿದ್ದರೆ ಇನ್ನು ಮೂರು ಸಮಿತಿ ರಚನೆ ಮಾಡಲಾಗುವುದು. ಅನಾವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕಿ. ಹೆಚ್ಚು ಅದ್ದೂರಿತನವೂ ಬೇಡ, ಕಡಿಮೆ ಆಗುವುದು ಬೇಡ. ಎಷ್ಟು ಅವಶ್ಯವೋ ಅಷ್ಟು ಹಣ ಖರ್ಚು ಮಾಡಿ ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದರು. ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಮಹತ್ವ ಸಾರುವ ವಿಶಿಷ್ಟ ಸ್ತಬ್ಧ ಚಿತ್ರಗಳನ್ನು ಗುಣಮಟ್ಟದಲ್ಲಿ ರೂಪಿಸಬೇಕು. ದಸರಾ ಉದ್ಘಾಟನೆಯಾದರೂ ದಸರಾ ವಸ್ತು ಪ್ರದರ್ಶನದಲ್ಲಿ ಸರ್ಕಾರದ ಮಳಿಗೆಗಳು ಖಾಲಿಯಾಗಿರುತ್ತವೆ. ಇದು ಪ್ರತಿ ವರ್ಷದ ಗೋಳು. ಆದರೆ ಈ ಬಾರಿ ದಸರಾ ಉದ್ಘಾಟನೆ ದಿನದಂದೇ ಎಲ್ಲಾ ಮಳಿಗೆಗಳು ಭರ್ತಿಯಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರದ ಕಾರ್ಯದರ್ಶಿಗಳ ಜೊತೆ ಸಮಾಲೋಚನೆ ನಡೆಸಿ ಎಂದು ಸಭೆಯಲ್ಲಿ ಹಾಜರಿದ್ದ ಮೈಸೂರು ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಗೆ ಡಾ.ಮಹದೇವಪ್ಪ ಸೂಚನೆ ನೀಡಿದರು.

ನಂಜರಾಜ ಬಹದ್ದೂರ್ ಛತ್ರ ಆವರಣದಲ್ಲಿ ವಾಹನ ನಿಲುಗಡೆ: ಟೌನ್‌ಹಾಲ್‌ನಲ್ಲಿ ಸುಮಾರು 600 ಹಾಗೂ ನಂಜರಾಜ ಬಹದ್ದೂರ್ ಛತ್ರದ ಹಿಂಭಾಗ 700 ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಿ. ಈ ಮೂಲಕ ದಸರಾ ವೇಳೆ ಅರಮನೆ ಸುತ್ತ ಝೀರೋ ಟ್ರಾಫಿಕ್ ವ್ಯವಸ್ಥೆ ರೂಪಿಸಿ, ಇದರಿಂದ ಅರಮನೆ ಸುತ್ತಲೂ ವಾಹನ ದಟ್ಟಣೆ ಉಂಟಾಗದಂತೆ ಕ್ರಮ ಕೈಗೊಳ್ಳಿ ಎಂದು ಆದೇಶ ನೀಡಿದರು.

ಆದರೆ ಈ ಬಾರಿ ಯಾವುದೇ ನೂಕು ನುಗ್ಗಲಿಗೆ ಅವಕಾಶ ನೀಡದಂತೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿ ಎಂದು ಹೇಳಿದರು. ಹುಣಸೂರಿನ ವೀರನಹೊಸಳ್ಳಿಯಲ್ಲಿ ಸೆಪ್ಟೆಂಬರ್ 1 ರಂದು ಗಜಪಯಣ ಕಾರ್ಯಕ್ರಮ ನಡೆಯಲಿದೆ. ಸೆಪ್ಟೆಂಬರ್ 4 ರಂದು ಮೈಸೂರು ಅರಮನೆ ಆವರಣಕ್ಕೆ ಗಜಪಡೆಯನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಗುವುದು. ಮೊದಲ ಹಂತದಲ್ಲಿ 9 ಆನೆಗಳು ಆಗಮಿಸಲಿವೆ ಎಂದರು.

ಶಾಸಕರಾದ ಜಿ.ಟಿ.ದೇವೇಗೌಡ, ಹೆಚ್.ವಿಶ್ವನಾಥ್, ಕೆ. ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ರವಿಶಂಕರ್, ಶ್ರೀವತ್ಸ ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಡಾ.ರಾಜೇಂದ್ರ ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಸೇರಿದಂತೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಹೊಸಬರಿಗೆ ಅವಕಾಶ ನೀಡಿ

ಅಧಿಕಾರಕ್ಕೆ ಬಂದಾಗಲೆಲ್ಲಾ ಅಧಿಕಾರ ಅನುಭವಿಸಿದ್ದಾರೆ. ನಾವೇ ಅಧಿಕಾರದಲ್ಲಿದ್ದರೆ, ಬೇರೆ ಮುಖಂಡರು ಬೆಳೆಯುವುದಾದರೂ ಹೇಗೆ? ಅವರಿಗೆ ಅವಕಾಶ ನೀಡೋಣ ಎಂದು ವೇದಿಕೆಯ ಮೇಲಿದ್ದ ನಾಯಕರಿಗೆ ಕಿವಿಮಾತು ಹೇಳಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ನಾವು ಇಷ್ಟು ಸ್ಥಾನ ಗೆದ್ದೆವು. ನಮ್ಮಿಂದಲೇ ಗೆದ್ದಿತ್ತು. ನಾವೇ ಇದಕ್ಕೆ ಕಾರಣ ಎಂಬ ಭ್ರಮೆ ಬೇಡ. ಬಿಜೆಪಿ ಆಡಳಿತ ವಿರೋಧಿ ಅಲೆ, ನಮ್ಮ ಕಾರ್ಯಕರ್ತರ ಸಂಘಟನೆಯಿಂದ ಅಧಿಕಾರಕ್ಕೆ ಬಂದಿದ್ದೇವೆ.

ಅಧಿಕಾರಕ್ಕೆ ಬಂದ ತಕ್ಷಣ ಕಾರ್ಯಕರ್ತರನ್ನು ಮರೆಯುವುದು ಬೇಡ. ಬ್ಲಾಕ್ ಮಟ್ಟದಿಂದ ರಾಜ್ಯ ಮಟ್ಟದವರೆಗೂ ದುಡಿದವರಿಗೆ ಅಧಿಕಾರ ನೀಡಿ. ಜಿಲ್ಲಾಧ್ಯಕ್ಷರನ್ನು ನಿಗಮ ಮಂಡಳಿಗಳಿಗೆ ಪರಿಗಣಿಸಿ. ಕೇವಲ ಶಾಸಕರಿಗೆ ಸೀಮಿತಗೊಳಿಸಿಕೊಳ್ಳಬೇಡಿ. ಪ್ರತಿಯೊಬ್ಬ ಕಾರ್ಯಕರ್ತರಿಗೂ ಅಧಿಕಾರ ದಕ್ಕಬೇಕು. ನಾವೇ ಅನುಭವಿಸುವುದು ಬೇಡ. ಅವರಿಗೂ ಅಧಿಕಾರ ಸಿಗಲಿ ಎಂದರು. ಒಂದು ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ವಿರುದ್ಧ ಮುನಿಯಪ್ಪ ಕಿಡಿಕಾರಿದರು. ಇವರು ಭಾಷಣ ಮಾಡುವಾಗ ಈ ಮೂವರು ನಾಯಕರು ಮಾತನಾಡುತ್ತಿದ್ದದ್ದು, ಮುನಿಯಪ್ಪನವರು ಕೆರಳುವಂತೆ ಮಾಡಿತು. ನೀವು ಮಾತನಾಡುವುದಿದ್ದರೆ, ಇಲ್ಲೇ ಬಂದು ಮಾತನಾಡಿ ನಾನು ಭಾಷಣ ನಿಲ್ಲಿಸುತ್ತೇನೆ ಎಂದರು. ನಂತರ ಮುಂದುವರೆದು ಮಾತನಾಡಿ, 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಲೋಕಸಭಾ ಚುನಾವಣೆ ಹಾಗೂ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದ ಮಾಹಿತಿಯನ್ನು ಭಾಷಣದಲ್ಲಿ ಪ್ರಸ್ತಾಪಿಸಿದರು.

ಅನುಮತಿ ಪಡೆಯದ ಕಾರಣ ಮಧ್ಯರಾತ್ರಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ತಡೆ





ಮೈಸೂರು, ಆ.14– ಪೊಲೀಸರ ಪೂರ್ವಾನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ಮಧ್ಯರಾತ್ರಿ ಸ್ವಾತಂತ್ರ್ಯೋತ್ಸವ ಸಭಾ ಕಾರ್ಯಕ್ರಮವನ್ನು ರದ್ದುಗೊಳಿಸಿದ ಘಟನೆ ಮೈಸೂರಿನಲ್ಲಿ ನಡೆದಿದೆ.

ನಗರದ ರಾಜ್‌ಕುಮಾರ್ ರಸ್ತೆ ತ್ರಿವೇಣಿ ವೃತ್ತದಲ್ಲಿ ಸೋಮವಾರ ಮಧ್ಯರಾತ್ರಿ 12ಕ್ಕೆ ಸ್ವಾತಂತ್ರ್ಯೋತ್ಸವ ಆಚರಣೆಗೆ ತ್ರಿವೇಣಿ ಗೆಳೆಯರ ಬಳಗದ ವತಿಯಿಂದ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ ಭದ್ರತೆ ದೃಷ್ಟಿಯಿಂದ ಗಮನಕ್ಕೆ ತಂದು ಅನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ಪೊಲೀಸರು ಕಾರ್ಯಕ್ರಮ ನಡೆಸದಂತೆ ವೇದಿಕೆ ತೆರವು ಮಾಡಿಸಿದರು. ಪೊಲೀಸರ ಈ ನಡೆಗೆ ತೀವ್ರ ಬೇಸರ ವ್ಯಕ್ತಪಡಿಸಿರುವ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ತ್ರಿವೇಣಿ ವೃತ್ತದಲ್ಲಿ ಸ್ಥಳೀಯರೆಲ್ಲಾ ಸೇರಿ ಮಧ್ಯರಾತ್ರಿ ಸ್ವಾತಂತ್ರ್ಯೋತ್ಸವ ಆಚರಿಸುವುದು ಬಹಳ ವರ್ಷಗಳಿಂದ ನಡೆದು ಬಂದಿದೆ. ಆದರೆ ಈ ಬಾರಿ ಪೊಲೀಸರು ತಡೆಯೊಡ್ಡಿದ್ದಾರೆ. ಬ್ಯಾನರ್‌ನಲ್ಲಿ ಸ್ಥಳೀಯ ಶಾಸಕರ ಫೋಟೋ ಹಾಕಿಲ್ಲ ಎನ್ನುವ ಕಾರಣಕ್ಕೆ ಯಾರದೋ ಒತ್ತಡದಿಂದ ಪೊಲೀಸರು ಹೀಗೆ ಮಾಡಿದ್ದಾರೆಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಇದು ಅತ್ಯಂತ ನೋವಿನ ಸಂಗತಿ. ಸ್ವಾತಂತ್ರ್ಯ ಪಡೆದು 75 ವರ್ಷ ಕಳೆದರೂ ನರಸಿಂಹರಾಜ ಕ್ಷೇತ್ರದಲ್ಲಿ ಯಾವುದೊಂದು ಕಾರ್ಯಕ್ರಮ ನಡೆಸಲು ಇಲ್ಲಿನ ಜನರಿಗೆ ಸ್ವತಂತ್ರವಿಲ್ಲ ಎಂದರೆ ನೆಮ್ಮದಿಯಿಂದ ಬದುಕುವುದು ಹೇಗೆ? ಪೊಲೀಸರು ರಾಜಕೀಯ ಪ್ರೇರಣೆಯಿಂದ ಹೀಗೆ ಮಾಡಿದ್ದಾರೆ. ರಕ್ಷಣೆ ನೀಡಬೇಕಿರುವ ಪೊಲೀಸರು ಸೌಜನ್ಯದಿಂದ ವರ್ತಿಸಬೇಕು. ಮತ್ತೆ ಈ ರೀತಿಯ ಘಟನೆಗಳು ನಡೆಯಬಾರದು ಎಂದು ಅವರು ಮನವಿ ಮಾಡಿದರು.

ಮುಂದಿನ ಶೈಕ್ಷಣಿಕ ವರ್ಷದಿಂದ ಎನ್‌ಇಪಿ ರದ್ದು


ಬೆಂಗಳೂರು, ಆ. 14 (ಕೆಎಂಶಿ)– ಮುಂದಿನ ಶೈಕ್ಷಣಿಕ ವರ್ಷದಿಂದ ಎನ್‌ಇಪಿ ರದ್ದುಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಕೆಪಿಸಿಸಿ ಕಚೇರಿಯಲ್ಲಿ ನಡೆದ ಕರ್ನಾಟಕ ಕಾಂಗ್ರೆಸ್ ಸಮಿತಿಯ ಸರ್ವ ಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಎನ್‌ಇಪಿಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಸಂಪೂರ್ಣ ರದ್ದುಗೊಳಿಸಲಾಗುವುದು ಎಂದರು.



ಅಗತ್ಯವಾದ ಕೆಲವೊಂದು ಸಿದ್ಧತೆಗಳನ್ನು ಮಾಡಿಕೊಂಡು ಎನ್‌ಇಪಿ ರದ್ದುಗೊಳಿಸಬೇಕಿದೆ. ಈ ವರ್ಷ ಅದಕ್ಕೆ ಸಮಯ ಇರಲಿಲ್ಲ. ಚುನಾವಣೆ ಫಲಿತಾಂಶ ಬಂದು ಸರ್ಕಾರ ರಚನೆ ಆಗುವ ವೇಳೆಗೆ ಶೈಕ್ಷಣಿಕ ವರ್ಷ ಆರಂಭವಾಗಿತ್ತು. ಮಧ್ಯದಲ್ಲಿ ಸಮಸ್ಯೆ ಆಗಬಾರದು ಎನ್ನುವ ಕಾರಣದಿಂದ ಈ ವರ್ಷ ಹಾಗೆಯೇ ಮುಂದುವರೆದಿದೆ.

ಎನ್‌ಇಪಿಗೆ ಏಕಕಾಲದಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಉಪನ್ಯಾಸಕರು ಹಾಗೂ ಶಿಕ್ಷಕರ ವಿರೋಧವಿದೆ. ಬಿಜೆಪಿ ದೇಶದಲ್ಲಿ ಎಲ್ಲಾ ಕಡೆ ಎನ್‌ಇಪಿ ಜಾರಿಗೊಳಿಸದೆ ರಾಜ್ಯದಲ್ಲಿ ಮೊದಲ ಬಾರಿಗೆ ಜಾರಿಗೊಳಿಸಿ ನಾಡಿನ ವಿದ್ಯಾರ್ಥಿ ಸಮೂಹದ ಹಿತಾಸಕ್ತಿಯನ್ನು ಬಲಿಕೊಟ್ಟಿದೆ ಎಂದು ಆರೋಪಿಸಿದರು.

ಜಿಲ್ಲಾ ಕಚೇರಿಗಳ ಸಂಕೀರ್ಣದಲ್ಲಿ ಶಾರ್ಟ್ ಸರ್ಕ್ಯೂಟ್; ಬೆಚ್ಚಿದ ಸಿಬ್ಬಂದಿ



ಮೈಸೂರು, ಆ.14(ಎಂಕೆ)– ಮೈಸೂರಿನ ಬನ್ನೂರು ರಸ್ತೆಯಲ್ಲಿನ ಸಿದ್ದಾರ್ಥನಗರ ಬಳಿ ನಿರ್ಮಿಸಿರುವ ನೂತನ ಜಿಲ್ಲಾ ಮಟ್ಟದ ಕಚೇರಿಗಳ ಸಮುಚ್ಚಯ ಕಟ್ಟಡದಲ್ಲಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಕೆಲಸದಲ್ಲಿ ನಿರತರಾಗಿದ್ದ ಅಧಿಕಾರಿ–ಸಿಬ್ಬಂದಿ ಬೆಚ್ಚಿಬಿದ್ದ ಘಟನೆ ಸೋಮವಾರ ನಡೆದಿದೆ. ಬೆಳಗ್ಗೆ 11 ಗಂಟೆ ಸುಮಾರಿಗೆ ಕಟ್ಟಡದಲ್ಲಿನ ಖಜಾನೆ ವಿಭಾಗದಲ್ಲಿ ಸಿಬ್ಬಂದಿಯೊಬ್ಬರು ಸ್ವಿಚ್ ಆನ್ ಮಾಡಲು ಹೋದಾಗ ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು, ಜೋರು ಶಬ್ದ ಬಂದ ಹಿನ್ನೆಲೆಯಲ್ಲಿ ಕೆಲಸದಲ್ಲಿ ನಿರತರಾಗಿದ್ದ ಸಿಬ್ಬಂದಿ ಹೌಹಾರಿದ್ದಾರೆ. ಕೂಡಲೇ ಎಚ್ಚೆತ್ತ ಅಧಿಕಾರಿಗಳು ಸ್ವಿಚ್ ಬೋರ್ಡ್ ಸರಿಪಡಿಸಿದ್ದಾರೆ. ಅದೃಷ್ಟವಶಾತ್ ಈ ವೇಳೆ ಯಾರಿಗೂ ವಿದ್ಯುತ್ ಸ್ಪರ್ಶವಾಗಿಲ್ಲ ಎಂದು ಇಲ್ಲಿನ ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಮುದ್ರಿತ ಅಂಕಪಟ್ಟಿ ನೀಡಲು ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು,ಆ.14(ಪಿಎಂ)– ಮೈಸೂರು ವಿವಿ ವಿದ್ಯಾರ್ಥಿಗಳಿಗೆ ಡಿಜಿಟಲ್ ಅಂಕಪಟ್ಟಿ ಬದಲು ಮುದ್ರಿತ ಅಂಕಪಟ್ಟಿ ನೀಡಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ಮಹಾರಾಜ ಕಾಲೇಜು ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.



ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ವಿದ್ಯಾರ್ಥಿಗಳಿಂದ ಅಂಕಪಟ್ಟಿ ಶುಲ್ಕವನ್ನು ಪರೀಕ್ಷಾ ಶುಲ್ಕದ ಜೊತೆ ಪಡೆದುಕೊಳ್ಳಲಾಗಿದೆ. ಆದರೆ ಮುದ್ರಿತ ಅಂಕಪಟ್ಟಿ ನೀಡದೇ ಡಿಜಿ ಲಾಕರ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಲು ಸೂಚಿಸಲಾಗುತ್ತಿದೆ. ಅದಾಗ್ಯೂ ಡಿಜಿ ಲಾಕರ್‌ನಲ್ಲಿ ಅಂಕಪಟ್ಟಿ ಪಡೆಯಲು ಸಾಧ್ಯವಾಗುತ್ತಿಲ್ಲ. ಇದು ವಿದ್ಯಾರ್ಥಿಗಳಲ್ಲಿ ಆತಂಕ ಉಂಟು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂಕಪಟ್ಟಿ ಇಲ್ಲದ ಕಾರಣ ಹಲವು ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ವೇತನ ಪಡೆಯಲು ಸಾಧ್ಯವಾಗುತ್ತಿಲ್ಲ. ಅಂತಿಮ ವರ್ಷದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಹಾಗೂ ಉದ್ಯೋಗಕ್ಕೆ ಸೇರಲು ಅಂಕಪಟ್ಟಿ ಅಗತ್ಯವಾಗಿದೆ. ಹಾಗಾಗಿ ವಿವಿ ಆಡಳಿತ ತಕ್ಷಣ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಮೈಸೂರು ವಿವಿಯ ಹಾಸ್ಟೆಲ್ ಗಳಲ್ಲಿ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿ ಇಲ್ಲದ ಕಾರಣ ವಿದ್ಯಾರ್ಥಿಗಳು ಅನೇಕ ಸಮಸ್ಯೆ ಎದುರಿಸುವಂತಾಗಿದೆ. ಶಿಥಿಲಗೊಂಡಿರುವ ಹಾಸ್ಟೆಲ್ ಕೊಠಡಿಗಳನ್ನು ಕೂಡಲೇ ದುರಸ್ತಿಗೊಳಿಸಬೇಕು. ಜೊತೆಗೆ ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ನೀಡಬೇಕು. ಅಲ್ಲದೆ, ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು ಎಂದು ಆಗ್ರಹಿಸಿದರು. ಮಹಾರಾಜ ಕಾಲೇಜಿನ ಕ್ರಿಮಿ ನಾಲಜಿ ಅಂಡ್ ಫೋರೆನ್ಸಿಕ್ ಸೈನ್ಸ್‌ನ ಅಂತಿಮ ವರ್ಷದ ವಿದ್ಯಾರ್ಥಿಗಳ 2ನೇ ಸೆಮಿಸ್ಟರ್ ಫಲಿತಾಂಶವನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಎಸ್‌ಎಫ್‌ಐ ಮೈಸೂರು ಅಧ್ಯಕ್ಷ ವಿಜಯ್ ಕುಮಾರ್, ಮಹಾರಾಜ ಕಾಲೇಜು ವಿದ್ಯಾರ್ಥಿಗಳಾದ ಮನು, ಅಲಾಸ್, ಚೇತನ್, ಶಿಬಿನ್ ರೆಹಮಾನ್, ಅಲಿಪ್ತ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೆ.15ರೊಳಗೆ ಅಶೋಕಪುರಂ ರೈಲು ನಿಲ್ದಾಣ ನವೀಕರಣ ಕಾಮಗಾರಿ ಪೂರ್ಣ

ಸ್ಥಳ ಪರಿಶೀಲಿಸಿದ ಸಂಸದ ಪ್ರತಾಪ್ ಸಿಂಹರಿಂದ ಮಾಹಿತಿ



ಮೈಸೂರು, ಆ. 14 (ಆರ್‌ಕೆ)– ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದ ನವೀಕರಣ (ರಿ–ಮಾಡೆಲಿಂಗ್) ಕಾಮಗಾರಿ ಸೆ15 ರೊಳಗಾಗಿ ಪೂರ್ಣಗೊಳ್ಳಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ರಿ–ಮಾಡೆಲಿಂಗ್ ಕಾಮಗಾರಿ ನಡೆಯುತ್ತಿರುವ ಅಶೋಕಪುರಂ ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಆಗಸ್ಟ್ 15ರಂದು ಲೋಕಾರ್ಪಣೆ ಮಾಡುವುದಾಗಿ ನಾವು ಹೇಳಿದ್ದೆವಾದರೂ, ಕೆಲಸ ತಡವಾದ ಕಾರಣ ಮುಂದಿನ ತಿಂಗಳ 15 ರೊಳಗಾಗಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಮೈಸೂರು ನಗರದ 2ನೇ ಸುಸಜ್ಜಿತ ರೈಲು ನಿಲ್ದಾಣವಾಗಿ ಹೊರ ಹೊಮ್ಮುತ್ತಿರುವ ಅಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಫುಟ್ ಓವರ್ ಬ್ರಿಡ್ಜ್ ನಿರ್ಮಿಸಲಾಗಿದ್ದು, ರೈಲುಗಳ ನಿಲುಗಡೆಗೆ ಟ್ರಾಕ್‌ಗಳು, 5 ಫ್ಲಾಟ್‌ಫಾರಂಗಳು, ಶೌಚಾಲಯ, ಟಿಕೆಟ್ ಕೌಂಟರ್‌ಗಳು, ಪ್ರವೇಶ ಮತ್ತು ನಿರ್ಗಮನ ಸ್ಥಳ, ವಾಹನ ನಿಲುಗಡೆ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಎಂದರು.

ಅತೀ ಹೆಚ್ಚು ರೈಲುಗಳು ಅಶೋಕಪುರಂ ರೈಲು ನಿಲ್ದಾಣದಿಂದಲೇ ಹೊರಡಲು ಅನುಕೂಲ ಮಾಡಲಾಗುತ್ತಿದ್ದು, ಪ್ರಧಾನ ರೈಲು ನಿಲ್ದಾಣ ಮತ್ತು ಅಶೋಕಪುರಂ ರೈಲು ನಿಲ್ದಾಣ ನಡುವೆ ಜೋಡಿ ಹಳಿ ನಿರ್ಮಿಸುವ ಮನವಿಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಭರವಸೆ ನೀಡಿದ್ದಾರೆ ಎಂದು ಪ್ರತಾಪ್ ಸಿಂಹ ಇದೇ ವೇಳೆ ತಿಳಿಸಿದರು. ಇದರಿಂದಾಗಿ ಸುತ್ತಮುತ್ತಲಿನ ಬಡಾವಣೆ ಜನರು ಅಶೋಕಪುರಂ ರೈಲು ನಿಲ್ದಾಣದಿಂದಲೇ ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣಿಸಬಹುದಾಗಿದ್ದು, ಅದರಿಂದಾಗಿ ಐದಾರು ಕಿ.ಮೀ. ದೂರದ ಮೇನ್ ನಿಲ್ದಾಣಕ್ಕೆ ಹೋಗುವುದು ತಪ್ಪುತ್ತದೆ. ಸೆಪ್ಟೆಂಬರ್ 15 ರಂದು ಆಧುನೀಕರಣಗೊಂಡ ಅಶೋಕಪುರಂ ರೈಲು ನಿಲ್ದಾಣವನ್ನು ಲೋಕಾರ್ಪಣೆ ಮಾಡುವುದಾಗಿಯೂ ತಿಳಿಸಿದರು. ಕ್ರಾಫರ್ಡ್ ಭವನದ ಬಳಿ ರೈಲ್ವೆ ಅಂಡರ್ ಪಾಸ್ ಯೋಜನೆಗೆ ನಗರ ಪಾಲಿಕೆಯು ಹಣ ನೀಡಬೇಕಾಗಿರುವುದರಿಂದ ಸ್ವಲ್ಪ ತಡವಾಗಿದೆ. ರಿಂಗ್ ರಸ್ತೆಯ ರೈಲ್ವೆ ಅಂಡರ್ ಬ್ರಿಡ್ಜ್‌ಗಳ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ ಎಂದು ಸಂಸದರು ಇದೇ ಸಂದರ್ಭ ತಿಳಿಸಿದರು.

ಶಾಸಕ ಟಿ.ಎಸ್. ಶ್ರೀವತ್ಸ, ಸೀನಿಯರ್ ಡಿವಿಷನಲ್ ಇಂಜಿನಿಯರ್ (ಕೋ–ಆರ್ಡಿನೇಷನ್) ಅಸಿಸ್ಟೆಂಟ್ ಇಂಜಿನಿಯರ್ ಕೇಶವ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಕಬ್ಬು ಬೆಳೆಗಾರರ ಬೇಡಿಕೆ ಈಡೇರಿಸಲು ಒತ್ತಾಯಿಸಿ

ಆ.21ರಂದು ಸಕ್ಕರೆ ನಿರ್ದೇಶನಾಲಯದ ಆಯುಕ್ತರ ಕಚೇರಿಗೆ ಮುತ್ತಿಗೆ

ಮೈಸೂರು,ಆ.14(ಪಿಎಂ)– ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆ.21ರಂದು ಬೆಂಗಳೂರಿನಲ್ಲಿರುವ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತರ ಕಚೇರಿಗೆ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಮುತ್ತಿಗೆ ಹಾಕಲಾಗುವುದು ಎಂದು ಸಂಘದ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೇ.8.5ರಷ್ಟು ಸಕ್ಕರೆ ಇಳುವರಿ ಆಧಾರದಲ್ಲಿ ಕಬ್ಬಿನ ಎಫ್‌ಆರ್‌ಪಿ ದರ ನೀಡಬೇಕು. ರಾಜ್ಯ ಸರ್ಕಾರ ಕಬ್ಬಿಗೆ ಎಸ್‌ಎಪಿ ದರ ನೀಡಬೇಕು. ಕಳೆದ ರಾಜ್ಯ ಬಿಜೆಪಿ ಸರ್ಕಾರ ಆದೇಶದಂತೆ ಬಾಕಿ ಉಳಿದಿರುವ 150 ರೂ. ಪಾವತಿಸಬೇಕು. ಕಾರ್ಖಾನೆಗಳೇ ಕಬ್ಬು ಕಟಾವು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಈ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದರು.




ಹೆರಿಟೇಜ್ ಗಾಲ್ಫ್ ಕಂಪನಿಯು ಕೋಚನಹಳ್ಳಿ ಗ್ರಾಮದ ರೈತರಿಂದ ಖರೀದಿಸಿದ್ದ 189 ಎಕರೆ ಭೂಮಿಯನ್ನು ದುಬಾರಿ ಬೆಲೆಗೆ ಕೆಐಎಡಿಬಿಗೆ ಮಾರಾಟ ಮಾಡಿದೆ. ಈ ಸಂಬಂಧ ಸರ್ಕಾರ ಮಧ್ಯಪ್ರವೇಶಿಸಿ, 105 ರೈತರಿಗೆ ಸೂಕ್ತ ಪರಿಹಾರ ಕೊಡಿಸಬೇಕು. ಈ ನಿಟ್ಟಿನಲ್ಲಿ ಆ.17ರಂದು ಕೋಚನಹಳ್ಳಿ ಗ್ರಾಮದಿಂದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ತಿಳಿಸಿದರು. ರೈತ ಸಂಘದ ಮಂಡ್ಯ ಜಿಲ್ಲಾಧ್ಯಕ್ಷ ಕೆಂಪುಗೌಡ, ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಸಂಘದ ಮುಖಂಡರಾದ ಪ್ರಸನ್ನ ಎನ್.ಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮನಸ್ಸು ಶ್ರೀಮಂತಿಕೆಯಿಂದ ಇದ್ದಾಗ ಮಾತ್ರ ಮನೆಯಲ್ಲಿ ಸುಖ ಶಾಂತಿ ನೆಲೆಸುತ್ತದೆ

ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅಭಿಮತ

ಮೈಸೂರು,ಆ.14(ಎಂಟಿವೈ)– ಮನಸ್ಸು ಶ್ರೀಮಂತಿಕೆಯಿಂದ ಕೂಡಿದ್ದಾಗ ಮಾತ್ರ ಮನೆ ವಾತವರಣವೂ ಶ್ರೀಮಂತವಾಗಿ ಸುಖ ಶಾಂತಿ ನೆಲೆಸುತ್ತದೆ ಎಂದು ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ್ಯೋತ್ಸವ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಸೋಮವಾರ ಆಯೋಜಿಸಿದ್ದ 'ಒಕ್ಕೂಟ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಮತ್ತು ಬೀದಿ ಬದಿ ವ್ಯಾಪಾರಿ ಸಂಘಗಳ ಉದ್ಘಾಟನಾ ಕಾರ್ಯಕ್ರಮ' ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯು ಮಹಿಳೆಯರ ಸಬಲೀಕರಣಕ್ಕೆ ಕಾರ್ಯಕ್ರಮ ರೂಪಿಸುವ ಆರ್ಥಿಕವಾಗಿ ಸಬಲೀಕರಣಗೊಳಿಸಲು ಮುಂದಾಗಿದೆ. ಮಹಿಳೆಯರಾದಿಯಾಗಿ ವಿವಿಧ ವ್ಯಾಪಾರಿಗಳಿಗೆ ಸರ್ಕಾರದಿಂದ ಹಲವು ಯೋಜನೆಗಳಿದ್ದರೂ, ಆ ಕಾರ್ಯಕ್ರಮಗಳು ಎಲ್ಲರಿಗೂ ತಲುಪುತ್ತಿಲ್ಲ. ಸಾಲ ಸೌಲಭ್ಯ ಪಡೆಯಲು ಅವಕಾಶವಿದ್ದರೂ, ಬ್ಯಾಂಕ್‌ಗಳಿಗೆ ಬೇಕಾದ ದಾಖಲೆ ಒದಗಿಸಲು ಸಾಧ್ಯವಾಗದೇ ಹಲವರು ಸಾಲ ಸೌಲಭ್ಯ ಪಡೆದುಕೊಳ್ಳಲು ವಿಫಲರಾಗುತ್ತಿದ್ದಾರೆ. ಆದರೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಮಹಿಳೆಯರಿಗೆ ಸುಲಭ ಮಾರ್ಗದಲ್ಲಿ ಸಾಲ ಸೌಲಭ್ಯ ನೀಡುವ ಮೂಲಕ ಅವರ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ 30 ವರ್ಷದ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭವಾಗಿ ಇಂದು ರಾಜ್ಯದಾದ್ಯಂತ ವಿಸ್ತರಿಸಿದೆ. ಈ ಸಂಸ್ಥೆಯ ಕಾರ್ಯಕರ್ತರು, ಸದಸ್ಯರು ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸುತ್ತಿರುವುದರಿಂದಲೇ ರಾಜ್ಯದಾದ್ಯಂತ ಕಾರ್ಯಕ್ಷೇತ್ರ ವಿಸ್ತಾರಗೊಳ್ಳುತ್ತಿದೆ. ಸರ್ಕಾರದ ಯೋಜನೆಗಳು ತಳಮಟ್ಟದ ಜನರಿಗೆ ತಲುಪದೇ ಇದ್ದಂತಹ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಬದ್ಧತೆ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದೆ. ಈ ಸಂಸ್ಥೆಯ ಕಾರ್ಯಕರ್ತರಲ್ಲಿ ಧರ್ಮ ಚಿಂತನೆ, ಸಂಸ್ಕೃತಿ, ಸಂಸ್ಕಾರ ಇರುವುದರಿಂದ ಇನ್ನೊಬ್ಬರ ಕಷ್ಟ ನಮ್ಮ ಕಷ್ಟ ಎಂದು ಪರಿಗಣಿಸಿ ಸೇವೆ ಒದಗಿಸುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು. ಅಲ್ಲದೆ ಒಕ್ಕೂಟ ಪದಾಧಿಕಾರಿಗಳಿಗೆ ವಿಳ್ಯೆ ನೀಡಿ ಸಂಘಟನೆ ಮಾಡುವಂತೆ ಪ್ರೇರೇಪಿಸಲಾಯಿತು. ಇಬ್ಬರು ಹಿರಿಯ ನಾಗರಿಕರಿಗೆ ಮಾಸಾಶನ ಮಂಜೂರು ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯರಾದ ಎಂ.ಡಿ.ನಾಗರಾಜು, ರಮೇಶ್, ರಂಗಸ್ವಾಮಿ, ಜೀವದಾರ ರಕ್ತನಿಧಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಇ. ಗಿರೀಶ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮು ನೆಲಿತ್ತಾಯ, ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್, ಯೋಜನಾಧಿಕಾರಿ ಸಂದಿನಿ ಶೇಟ್, ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಂಗಸ್ವಾಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ಸಾಮಾಜಿಕ ಸ್ವಾತಂತ್ರ್ಯ ಸಾಧಿಸದ ಹೊರತು ಕಾನೂನಿನ ಮೂಲಕ ನೀಡುವ ಯಾವುದೇ ರೀತಿಯ ಸ್ವಾತಂತ್ರ್ಯ ನಿಷ್ಪ್ರಯೋಜಕವಾಗುವುದು."
- ಡಾ. ಬಿ. ಆರ್. ಅಂಬೇಡ್ಕರ್
77ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀ ಡಿ.ಕೆ. ಶಿವಕುಮಾರ್,
ಮಾನ್ಯ ಉಪಮುಖ್ಯಮಂತ್ರಿಗಳು ಪಂಚ ಯೋಜನೆ ಘೋಷಿಸಿದ ಸುಸಂದರ್ಭ.
ಶಕ್ತಿ
ಮಹಿಳೆಯರಿಗೆ ಬಸ್ ಸಂಚಾರ ಉಚಿತ
ಅನ್ನಭಾಗ್ಯ
ಬಡವರಿಗೆ
10kg
ಪ್ರತಿ ತಿಂಗಳು ತಲಾ 10Kg ಆಹಾರಧಾನ್ಯ ಅಥವಾ ತಲಾ 5Kg ಆಹಾರಧಾನ್ಯ ಹಾಗೂ ರೂ. 170/-
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000
ಗೃಹ ಜ್ಯೋತಿ
ಪ್ರತಿ ಮನೆಗೆ ಗರಿಷ್ಠ
200
ಯೂನಿಟ್ ವಿದ್ಯುತ್ ಉಚಿತ
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
ಪ್ರಗತಿಪರ ಅಭಿವೃದ್ಧಿಗಾಗಿ ನುಡಿದಂತೆ ನಡೆದಿದ್ದೇವೆ...
ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟವರ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು
ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ಕರ್ನಾಟಕ ವಾರ್ತೆ

ಮೈಸೂರು ಮಿತ್ರ

ಸ್ವಾತಂತ್ರ್ಯ ಮುನ್ನ ದಿನ ದೇಶವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ

ಕುವೆಂಪು 'ನವ ಭಾರತ ಲೀಲೆ' ಕವನದ ಸಾಲುಗಳ ಉಲ್ಲೇಖಿಸಿ ಶ್ರೇಷ್ಠ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬರು ಕೊಡುಗೆ ನೀಡಲು ಸಲಹೆ




ನವದೆಹಲಿ: ಭಾರತ ಸ್ವಾತಂತ್ರ್ಯ ದಿನಾಚರಣೆ ಮುನ್ನ ದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ದೇಶವನ್ನುದ್ದೇಶಿಸಿ ತಮ್ಮ ಚೊಚ್ಚಲ ಭಾಷಣ ಮಾಡಿದರು. ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ತ್ಯಾಗ–ಬಲಿದಾನ, ಇಂದಿನ ಭಾರತದ ಸಾಧನೆ ಕುರಿತು ದ್ರೌಪದಿ ಮುರ್ಮು ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಈ ವೇಳೆ ಹೆಣ್ಣುಮಕ್ಕಳು ನಮ್ಮ ರಾಷ್ಟ್ರದ ದೊಡ್ಡ ಭರವಸೆ. ದೇಶದ ಬಗ್ಗೆ ನಮ್ಮ ಹೆಣ್ಣುಮಕ್ಕಳು ದೊಡ್ಡ ಭರವಸೆ ಹೊಂದಿದ್ದಾರೆ ಎಂದು ಪ್ರತಿಪಾದಿಸಿದರು.

ನಾವು ವಸಾಹತುಶಾಹಿ ಆಡಳಿತಗಾರರ ಸಂಕೋಲೆಯಿಂದ ಮುಕ್ತವಾಗಲು ಅಗಾಧ ತ್ಯಾಗ ಮಾಡಿದ ಹೋರಾಟಗಾರರನ್ನು ಸ್ಮರಿಸಿದರು. ಸ್ವತಂತ್ರ ಭಾರತದಲ್ಲಿ ಬದುಕಲು ಸಾಧ್ಯವಾಗುವಂತೆ ಅಪಾರ ತ್ಯಾಗ ಮಾಡಿದವರಿಗೆ ನಾವು ನಮಸ್ಕರಿಸುತ್ತೇವೆ. ಇತರ ಸುಸ್ಥಾಪಿತ ಪ್ರಜಾಪ್ರಭುತ್ವಗಳಲ್ಲಿ ಮಹಿಳೆಯರು ಮತದಾನದ ಹಕ್ಕನ್ನು ಪಡೆಯಲು ದೀರ್ಘಾವಧಿಯ ಹೋರಾಟಗಳನ್ನು ನಡೆಸಬೇಕಾಗಿತ್ತು. ಆದರೆ ಪ್ರಜಾಪ್ರಭುತ್ವದ ನಿಜವಾದ ಸಾಮರ್ಥ್ಯವನ್ನು ತಿಳಿಸಲು ಜಗತ್ತಿಗೆ ಸಹಾಯ ಮಾಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ನಮ್ಮ ಹೆಣ್ಣುಮಕ್ಕಳು ರಾಷ್ಟ್ರದ ದೊಡ್ಡ ಭರವಸೆ ಎಂದು ಅವರು ಪ್ರತಿಪಾದಿಸಿದರು.

ಹಲವು ವೀರರು ಮತ್ತು ಅವರ ಹೋರಾಟಗಳನ್ನು ವಿಶೇಷವಾಗಿ ರೈತರು ಮತ್ತು ಬುಡಕಟ್ಟು ಜನಾಂಗದವರು ಮರೆತುಹೋಗಿದ್ದಾರೆ. ನಮ್ಮ ಬುಡಕಟ್ಟು ವೀರರು ಕೇವಲ ಸ್ಥಳೀಯ ಅಥವಾ ಪ್ರಾದೇಶಿಕ ಐಕಾನ್‌ಗಳಲ್ಲ. ಇಡೀ ರಾಷ್ಟ್ರಕ್ಕೆ ಸ್ಫೂರ್ತಿಯಾಗಿದ್ದಾರೆ ಎಂದರು. ಸ್ವಾತಂತ್ರ್ಯ ದಿನವನ್ನು ಆಚರಿಸುವಾಗ ನಾವು ನಮ್ಮ ಭಾರತೀಯತೆಯನ್ನು ಆಚರಿಸುತ್ತೇವೆ. ಭಾರತವು ವೈವಿಧ್ಯತೆಯಿಂದ ಕೂಡಿದೆ. ಆದರೆ, ನಾವೆಲ್ಲರೂ ಒಂದೇ ಎಂಬ ಸಾಮಾನ್ಯ ಮನೋಭಾವವಿದೆ. ಈ ಸಾಮಾನ್ಯ ಥ್ರೆಡ್ ನಮ್ಮನ್ನು ಒಟ್ಟಿಗೆ ಬಂಧಿಸುತ್ತದೆ. 'ಏಕ್ ಭಾರತ್, ಶ್ರೇಷ್ಠ ಭಾರತ್' ಮನೋಭಾವದೊಂದಿಗೆ ಒಟ್ಟಾಗಿ ನಡೆಯಲು ಪ್ರೇರೇಪಿಸುತ್ತದೆ ಎಂದರು. ಈ ವೇಳೆ ಕನ್ನಡದ ರಾಷ್ಟ್ರಕವಿ ಕುವೆಂಪು ಅವರ 'ನವ ಭಾರತ ಲೀಲೆ' ಕವನದ ಸಾಲುಗಳನ್ನು ರಾಷ್ಟ್ರಪತಿಗಳು ಕನ್ನಡದಲ್ಲೇ ಉಲ್ಲೇಖಿಸಿದರು. ಶ್ರೇಷ್ಠ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬ ನಾಗರಿಕ ತನ್ನ ಕೈಲಾದ ಕೊಡುಗೆ ನೀಡಬೇಕು. ಎಲ್ಲರೂ ಜೊತೆಗೂಡಿದರೆ ನವಭಾರತ ನಿರ್ಮಾಣವಾಗಲಿದೆ ಎಂದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾನು ಅಳಿಯುತ್ತೇನೆ, ನೀನು ಅಳಿಸಿ ಹೋಗುತ್ತಿಯಾ. ಆದರೆ ನಾವು ಪಡೆದ ಗೆಲುವು ಹೊಸ ಭಾರತ ನಿರ್ಮಿಸಲಿದೆ. ನಮ್ಮ ಹೋರಾಟದಿಂದ ಭಾರತದ ಅಸ್ತಿತ್ವ ಇರಲಿದೆ ಎಂದು ಕುವೆಂಪು ಅರ್ಥಪೂರ್ಣವಾಗಿ ನಾನಳಿವೆ ನಿನಳಿವೆ ನಮ್ಮಲವುಗಳ ಮೇಲೆ ಮೂಡುವುದು ನವ ಭಾರತ ಲೀಲೆ ಕವನದಲ್ಲಿ ಹೇಳಿದ್ದಾರೆ. ದೇಶಕ್ಕಾಗಿ ಕೊಡುಗೆ ನೀಡುವುದು, ದೇಶಕ್ಕಾಗಿ ಜೀವವನ್ನೇ ಮುಡಿಪಾಗಿಡುವುದು ನಮ್ಮ ಆದರ್ಶವಾಗಬೇಕು ಎಂಬುದನ್ನು ಕುವೆಂಪು ಸೂಚ್ಯವಾಗಿ ಹೇಳಿದ್ದಾರೆ. ಈ ಕುವೆಂಪು ಕವನದ ಸಾಲಿನ ಅರ್ಥವನ್ನೂ ದ್ರೌಪದಿ ಮುರ್ಮು ತಮ್ಮಭಾಷಣದಲ್ಲಿ ಹೇಳಿದ್ದಾರೆ. ಭಾರತೀಯ ಯುವ ಸಮೂಹಕ್ಕೆ ಹೊಸ ಭಾರತ ನಿರ್ಮಾಣಕ್ಕೆ ಕೈಜೋಡಿಸುವಂತೆ ಕರೆ ನೀಡಿದ್ದಾರೆ. ಇದೇ ವೇಳೆ ಭಾರತ ನದಿ, ಬೆಟ್ಟ ಗುಡ್ಡ, ಬಯಲು, ಕಾಡು, ಕೃಷಿ ಸೇರಿದಂತೆ ಪ್ರಾಕೃತಿಕ ಸೌಂದರ್ಯದಿಂದ ಕೂಡಿದ ದೇಶವಾಗಿದೆ. ಈ ಸಂಪದ್ಭರಿತ ದೇಶವನ್ನು ಮುಂದಿನ ಪೀಳಿಗೆಗೆ ನೀಡುವ ಅತೀ ದೊಡ್ಡ ಜವಾಬ್ದಾರಿಯೂ ನಮ್ಮ ಮೇಲಿದೆ ಎಂದು ದ್ರೌಪದಿ ಮುರ್ಮು ಹೇಳಿದ್ದಾರೆ.

ಭಾರತೀಯ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಗರಿಮೆ ಹೆಚ್ಚಿಸಿದ್ದಾರೆ. ಪದಕಗಳನ್ನು ಗಳಿಸುವ ಮೂಲಕ ಭಾರತದ ಕೀರ್ತಿಯನ್ನು ಪಸರಿಸಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ಭಾರತ ಅತ್ಯುತ್ತಮ ಸಾಧನೆಯೊಂದಿಗೆ ಮುನ್ನುಗ್ಗುತ್ತಿದೆ. ಇನ್ನು ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮೂಲಕ ಮುನ್ನುಗ್ಗುತ್ತಿದ್ದಾರೆ ಎಂದು ದ್ರೌಪದಿ ಮುರ್ಮು ಹೇಳಿದ್ದಾರೆ.

ಅಟ್ರಾಸಿಟಿ ಪ್ರಕರಣದಲ್ಲಿ ಎಫ್‌ಐಆರ್‌ಗೆ ಹೈಕೋರ್ಟ್ ತಡೆ: ಉಪೇಂದ್ರಗೆ ಬಿಗ್ ರಿಲೀಫ್



ಬೆಂಗಳೂರು: ನಟ, ಉತ್ತಮ ಪ್ರಜಾಕೀಯ ಪಕ್ಷದ ಸಂಸ್ಥಾಪಕ ಉಪೇಂದ್ರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳಿಗೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆನೀಡಿದ್ದು ಬಂಧನ ಭೀತಿಯಿಂದ ನಟ ಪಾರಾಗಿದ್ದಾರೆ. ತಮ್ಮ ಮೇಲೆ ದಾಖಲಾಗಿರುವ FIR ರದ್ದು ಗೊಳಿಸುವಂತೆ ಉಪೇಂದ್ರ ಹೈಕೋರ್ಟ್ ಮೆಟ್ಟಿಲೇರಿದ್ದರು. ಇಂದು ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡಿದೆ.

ಹಿರಿಯ ವಕೀಲ ಉದಯ್ ಹೊಳ್ಳ ಅವರು ಉಪೇಂದ್ರ ಪರ ವಾದ ಮಂಡಿಸಿದ್ದು ದುರುದ್ದೇಶದಿಂದ ಆ ಪದ ಬಳಕೆ ಮಾಡಿದ್ದಲ್ಲ. ಎಲ್ಲರ ಬಗ್ಗೆಯೂ ಉಪೇಂದ್ರರಿಗೆ ಗೌರವವಿದೆ. ಅಲ್ಲದೆ ತಾವು ಆಡಿದ್ದ ಮಾತಿನ ಬಗ್ಗೆ ಕ್ಷಮೆ ಕೇಳಿದ್ದಾರೆ. ಅಲ್ಲದೆ ಸಾಮಾಜಿಕ ಜಾಲತಾಣದಲ್ಲಿದ್ದ ವಿಡಿಯೋವನ್ನು ಡಿಲೀಟ್ ಮಾಡಲಾಗಿದೆ. ಗಾದೆ ಮಾತು ಉಲ್ಲೇಖಿಸಿ ಉಪೇಂದ್ರ ಹೇಳಿಕೆ ನೀಡಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಇದಕ್ಕೆ ಅನ್ವಯವಾಗುವುದಿಲ್ಲ ಎಂದು ವಾದ ಮಂಡನೆ ಮಾಡಿದ್ದರು. ಜಾತಿ ನಿಂದನೆ ಆರೋಪ ತೀವ್ರ ಪ್ರತಿಭಟನೆಗಳು ಶುರುವಾದ ಹಿನ್ನೆಲೆಯಲ್ಲಿ ಉಪೇಂದ್ರ ಅವರ ಮನೆಗೆ ಪೊಲೀಸರು ಬಿಗಿ ಭದ್ರತೆ ನೀಡಿದ್ದಾರೆ. ಬೆಂಗಳೂರಿನ ಕತ್ತರಿಗುಪ್ಪೆ ಮತ್ತು ಸದಾಶಿವನಗರದ ಅವರ ನಿವಾಸಕ್ಕೆ ಪೊಲೀಸರು ಭದ್ರತೆ ಒದಗಿಸಿದ್ದಾರೆ.

ಕ್ಯೂ ಆರ್ ಕೋಡ್ ಸ್ಕ್ಯಾನ್ ಮೂಲಕ ಮೈಸೂರು ಸ್ವಚ್ಛತೆ ದಾಖಲಿಸಿದ ಸುತ್ತೂರು ಶ್ರೀಗಳು



ಮೈಸೂರು, ಆ.14(ಎಸ್‌ಬಿಡಿ)– ಸುತ್ತೂರು ಶ್ರೀಗಳು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಮೈಸೂರು ನಗರದ ಸ್ವಚ್ಛತೆ ಬಗ್ಗೆ ದಾಖಲಿಸಿದರು.

ಮೇಯರ್ ಶಿವಕುಮಾರ್ ನೇತೃತ್ವದ ನಗರ ಪಾಲಿಕೆ ನಿಯೋಗ ಸುತ್ತೂರು ಶ್ರೀಗಳನ್ನು ಭೇಟಿ ಮಾಡಿ, ನಗರದ ಸ್ವಚ್ಛತೆ ಬಗ್ಗೆ ಪ್ರತಿಕ್ರಿಯೆ ದಾಖಲಿಸುವಂತೆ ಮನವಿ ಮಾಡಿತು. ಸ್ಥಳದಲ್ಲೇ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದ ಶ್ರೀಗಳು, ವೆಬ್‌ಸೈಟ್‌ನಲ್ಲಿ ಪ್ರದರ್ಶನವಾದ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಅಭಿಪ್ರಾಯ ದಾಖಲಿಸಿದರು. ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮಾ.ವಿ.ರಾಂಪ್ರಸಾದ್, ಎಂ.ಯು.ಸುಬ್ಬಯ್ಯ, ಅಶ್ವಿನಿ ಅನಂತು, ಪಾಲಿಕೆ ಎಡಿಸಿ ಸೋಮಶೇಖರ್, ಸವಿತಾ ಸುರೇಶ್, ಎಡಿಸಿ ಸೋಮಶೇಖರ್, ಆರೋಗ್ಯಾಧಿಕಾರಿ ಡಾ.ನಾಗರಾಜು, ಪರಿಸರ ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿ, ಮೈಸೂರು ನಗರಕ್ಕೆ 2014 ಹಾಗೂ 15ನೇ ಸಾಲಿನಲ್ಲಿ ಸತತವಾಗಿ ಮೊದಲ ಸ್ಥಾನ ದಕ್ಕಿತಾದರೂ ನಂತರದ ವರ್ಷಗಳಲ್ಲಿ ಈ ಸಾಧನೆ ಸಾಧ್ಯವಾಗಿಲ್ಲ. ಈ ಬಾರಿ ಮೊದಲ ಸ್ಥಾನ ಪಡೆಯುವ ಗುರಿ ಯೊಂದಿಗೆ ಕಾರ್ಯೋನ್ಮುಖರಾಗಿದ್ದೇವೆ. ಈ ಬಾರಿ ಸಾರ್ವಜನಿಕರ ಪ್ರತಿಕ್ರಿಯೆಗೆ 600 ಅಂಕಗಳಿದ್ದು, ಹೆಚ್ಚು ಸಂಖ್ಯೆಯ ಜನ ಭಾಗವಹಿಸುವ ಮೂಲಕ ಕೈಜೋಡಿಸಬೇಕು. ಸುತ್ತೂರು ಶ್ರೀಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಆಶೀರ್ವದಿಸಿದ್ದಾರೆ. ಪ್ರಮುಖ ಸ್ಥಳಗಳಲ್ಲಿ ಹಾಗೂ ಸ್ವಚ್ಛತಾ ವಾಹನಗಳಲ್ಲಿ ಅಳವಡಿಸಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ, ಅಭಿಪ್ರಾಯ ದಾಖಲಿಸುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಪೊಲೀಸ್ ಸಿಬ್ಬಂದಿ, ಅಧಿಕಾರಿಗಳು ಸಂಚಾರ ನಿಯಮ ಪಾಲನೆ ಅವಶ್ಯವಾದುದು


● ಎಡಿಜಿಪಿಗೆ ನಿವೃತ್ತ ಎಸ್ಪಿ ಶಂಕರೇಗೌಡರ ಪತ್ರ ● ರಸ್ತೆ ಅಪಘಾತದಲ್ಲಿ ಇಬ್ಬರು ಸಿಬ್ಬಂದಿ ಅಸುನೀಗಿದ ದುರಂತ ಉಲ್ಲೇಖ; ಹೆಲ್ಮೆಟ್ ಧರಿಸಿದ್ದರೆ ಜೀವಹಾನಿ ತಪ್ಪುತ್ತಿತ್ತು!



ಶಂಕರೇಗೌಡ

ಮೈಸೂರು, ಆ.14(ಎಸ್‌ಬಿಡಿ)– ರಸ್ತೆ ಅಪಘಾತದಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ನಿವೃತ್ತ ಎಸ್ಪಿ ಶಂಕರೇಗೌಡರು, ಎಡಿಜಿಪಿ ಹಾಗೂ ರಸ್ತೆ ಸುರಕ್ಷತಾ ಸಮಿತಿ ಆಯುಕ್ತರಿಗೆ ಪತ್ರ ಬರೆದು ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲು ನಿರ್ದೇಶನ ನೀಡುವಂತೆ ಮನವಿ ಮಾಡಿದ್ದಾರೆ. ಮೈಸೂರಿನ ಲಲಿತಮಹಲ್ ಪ್ಯಾಲೇಸ್ ರಸ್ತೆಯಲ್ಲಿ ಆ.13ರ ರಾತ್ರಿ ರಸ್ತೆ ಅಪಘಾತ ಸಂಭವಿಸಿ, ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಕೆಎಸ್‌ಆರ್‌ಪಿಯ ಇಬ್ಬರು ಸಿಬ್ಬಂದಿ ಸಾವನ್ನಪ್ಪಿದ್ದು ನೋವಿನ ಸಂಗತಿ. ಹೆಲ್ಮೆಟ್ ಧರಿಸಿದ್ದರೆ ಅವರ ಜೀವ ಉಳಿಯುತ್ತಿತ್ತು ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದರು. ಸಮವಸ್ತ್ರದಲ್ಲಿರುವ ಹಲವು ಪೊಲೀಸ್ ಸಿಬ್ಬಂದಿ ದ್ವಿಚಕ್ರ ವಾಹನದಲ್ಲಿ ಹೆಲ್ಮೆಟ್ ಧರಿಸದೆ ಪ್ರಯಾಣಿಸುವುದನ್ನು ನಾನೇ ಗಮನಿಸಿದ್ದೇನೆ. ಈ ಬಗ್ಗೆ ಆ.4 ರಂದು ನಗರ ಪೊಲೀಸ್ ಕಂಟ್ರೋಲ್ ರೂಂಗೆ ತಿಳಿಸಿ, ಅವರ ವಿರುದ್ಧ ಪ್ರಕರಣ ದಾಖಲಿಸಿ. ಜೊತೆಗೆ ಕವಾಯತು ಸಮಯದಲ್ಲಿ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಬೇಕೆಂದು ಕೋರಿದ್ದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಮೋಟಾರ್ ವಾಹನ ಕಾಯ್ದೆ ಅನುಷ್ಠಾನ ಮಾಡುವವರೇ ತಪ್ಪು ಮಾಡಿದರೆ ಅಂತಹವರಿಗೆ ಕಾಯ್ದೆಯ ಕಲಂ 210 ಬಿ ಅಡಿಯಲ್ಲಿ ದುಪ್ಪಟ್ಟು ದಂಡ ವಿಧಿಸಲು ಅವಕಾಶವಿದೆ. ಸಮಾಜದ ಸುರಕ್ಷತೆಯಲ್ಲಿ ಪೊಲೀಸರ ಪಾತ್ರ ಮಹತ್ವಪೂರ್ಣವಾಗಿದೆ. ಪೊಲೀಸ್ ಸಿಬ್ಬಂದಿ ಸುರಕ್ಷತೆ ದೃಷ್ಟಿಯಿಂದ ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಸೂಚನೆ ನೀಡಿ. ಇದನ್ನು ಪಾಲಿಸದವರ ವಿರುದ್ಧ ಕಾನೂನು ಕ್ರಮ ಜರುಗಿಸುವುದರ ಜೊತೆಗೆ ಸೂಕ್ತ ತಿಳಿವಳಿಕೆ ನೀಡುವಂತೆ ಎಲ್ಲಾ ಘಟಕಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡುವಂತೆ ಶಂಕರೇಗೌಡರು ಮನವಿ ಮಾಡಿದ್ದಾರೆ. ಶಂಕರೇಗೌಡರು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿಯಾಗಿದ್ದಾಗ ಸಂಚಾರ ನಿರ್ವಹಣೆ ಜೊತೆಗೆ ವಾಹನ ಸವಾರರ ಸುರಕ್ಷತೆ ಬಗ್ಗೆ ಅತೀವ ಕಾಳಜಿಯೊಂದಿಗೆ ಕಾರ್ಯ ನಿರ್ವಹಿಸಿದ್ದರು. ಸಂಚಾರ ನಿಯಮಗಳ ಪಾಲನೆ ಬಗ್ಗೆ ಜಾಗೃತಿ ಮೂಡಿಸಿದ್ದರು. ನಿಯಮ ಉಲ್ಲಂಘನೆಯಿಂದ ಸಂಭವಿಸಬಹುದಾದ ಅಪಘಾತ, ಅನಾಹುತಗಳ ಬಗ್ಗೆ ಫಲಕಗಳ ಮೂಲಕ ಅರಿವು ಮೂಡಿಸಿದ್ದರು.

ಕಾವೇರಿ ವಿವಾದ: ಸುಪ್ರೀಂ ಮೊರೆ ಹೋದ ತಮಿಳ್ನಾಡು 24,000 ಕ್ಯುಸೆಕ್ ನೀರು ಬಿಡುಗಡೆಗೆ ಕರ್ನಾಟಕಕ್ಕೆ ನಿರ್ದೇಶನ ನೀಡಲು ಮನವಿ



ನವದೆಹಲಿ: ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರಕಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು, ಬೆಳೆದು ನಿಂತಿರುವ ಬೆಳೆಗಾಗಿ ಇಂದಿನಿಂದ 24, 000 ಕ್ಯುಸೆಕ್ ನೀರನ್ನು ತನ್ನ ಜಲಾಶಯಗಳಿಂದ ತಕ್ಷಣವೇ ಬಿಡುಗಡೆಗೆ ಕರ್ನಾಟಕ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಇದೇ ತಿಂಗಳ 11 ರಂದು ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳಿಂದ ಮುಂದಿನ 15 ದಿನಗಳವರೆಗೂ ಪ್ರತಿದಿನ 0.864 ಟಿಎಂಸಿ ಅಂದರೆ 15,000 ಕ್ಯುಸೆಕ್‌ನಿಂದ 10, 000 ಕ್ಯುಸೆಕ್‌ನಷ್ಟು ನೀರನ್ನು ಕರ್ನಾಟಕ ಬಿಳಿಗುಂಡ್ಲುವಿಗೆ ಹರಿಸಬೇಕೆಂದು ಸೂಚಿಸಿತ್ತು. ಆದರೆ, ಕರ್ನಾಟಕ ಸರ್ಕಾರ ಅದನ್ನೂ ಅನುಸರಿಸಿಲ್ಲ ಎಂದು ತಮಿಳುನಾಡು ಸರ್ಕಾರ ಅರ್ಜಿಯಲ್ಲಿ ವಾದಿಸಿದೆ.

ಬಿಳಿಗುಂಡ್ಲುವಿನಲ್ಲಿ ಇದೇ ತಿಂಗಳ 11, 13, ಮತ್ತು 14 ರಂದು ಕ್ರಮವಾಗಿ 6,148, 4,453 ಮತ್ತು 4,000 ಕ್ಯುಸೆಕ್‌ನಷ್ಟು ನೀರು ಹರಿದಿದೆ. ಕರ್ನಾಟಕದಿಂದ ನೀರು ಪಡೆಯಲು ತಮಿಳುನಾಡು ಸರ್ಕಾರ ಕೈಗೊಂಡಿರುವ ಪ್ರಯತ್ನಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದ್ದು, ಸುಪ್ರೀಂಕೋರ್ಟ್ ನೀಡಿದ ಆದೇಶದಂತೆ ನೀರು ಬಿಡಲು ಕರ್ನಾಟಕ ಬದ್ಧವಾಗಿರಬೇಕು ಎಂದು ಹೇಳಲಾಗಿದೆ.

14.913 ಲಕ್ಷ ಎಕರೆ ನೀರಾವರಿಗಾಗಿ ಮೆಟ್ಟೂರು ಜಲಾಶಯದ ಮೇಲೆ ಅವಲಂಬಿತವಾಗಿದೆ. ಇದು ಬಿಳಿಗುಂಡ್ಲುವಿನಲ್ಲಿ ಹರಿದ ಹರಿವಿನ ಮೇಲೆ ಅವಲಂಬಿತವಾಗಿದ್ದು, ನೈರುತ್ಯ ಮುಂಗಾರು ಅವಧಿಯಲ್ಲಿ ಕೆಆರ್ ಎಸ್ ಮತ್ತು ಕಬಿನಿ ಜಲಾಶಯಗಳಿಂದ ಕರ್ನಾಟಕ ಬಿಡುಗಡೆ ಮಾಡುವ ನೀರಿನ ಹರಿವಿನ ಆಧಾರದ ಮೇಲೆ ಒಳಹರಿವು ಇರಲಿದೆ. ಈ ಬಾರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಕುರುವೈ ಮತ್ತು ಸಾಂಬಾ ಎರಡೂ ಬೆಳೆಗಳನ್ನು ಬಿತ್ತಲಾಗುತ್ತದೆ ಮತ್ತು ನಾಟಿ ಮಾಡಲಾಗುತ್ತದೆ. ಹಾಗಾಗಿ ನೈರುತ್ಯ ಮಾನ್ಸೂನ್ ಸಮಯದಲ್ಲಿ ಮೆಟ್ಟೂರಿನಿಂದ ನೀರು ಬಿಡುವುದು ನಿರ್ಣಾಯಕವಾಗಿದೆ ಎಂದು ತಮಿಳುನಾಡು ಹೇಳಿದೆ. ಸುಮಾರು 4 ಮಿಲಿಯನ್ ರೈತರು ಮತ್ತು ಸುಮಾರು 10 ಮಿಲಿಯನ್ ಕಾರ್ಮಿಕರು ತಮ್ಮ ಜೀವನೋಪಾಯಕ್ಕಾಗಿ ಮೆಟ್ಟೂರು ನೀರನ್ನು ನೇರವಾಗಿ ಮತ್ತು ಪರೋಕ್ಷವಾಗಿ ಅವಲಂಬಿಸಿದ್ದಾರೆ. ಕಾವೇರಿ ನದಿ ಮುಖಜ ಭೂಮಿಯಲ್ಲಿನ ಕೃಷಿ ಚಟುವಟಿಕೆಗಳು ನೀರಿಲ್ಲದೆ ಬಳಲುತ್ತಿದ್ದು, ಕೃಷಿ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ 16, 2018ರ ಸುಪ್ರೀಂಕೋರ್ಟ್ ತೀರ್ಪಿನಂತೆ ಕರ್ನಾಟಕ ಸರ್ಕಾರ ಮಾಸಿಕ ವೇಳಾಪಟ್ಟಿಯಂತೆ ಗೊತ್ತುಪಡಿಸಿದ ಹಂತದಲ್ಲಿ ಕಾವೇರಿ ನೀರನ್ನು ನೀಡುವಂತೆ ನಿರ್ದೇಶಿಸಬೇಕೆಂದು ತಮಿಳುನಾಡು ಸರ್ಕಾರ ಕೋರಿದೆ.

ಪ್ರಸಕ್ತ ನೀರಾವರಿ ವರ್ಷದಲ್ಲಿ 28.849 ಟಿಎಂಸಿ ನೀರಿನ ಕೊರತೆ ಸರಿದೂಗಿಸಲು ಮತ್ತು ಸೆಪ್ಟೆಂಬರ್‌ಗೆ ನಿಗದಿತ ನೀರಿನ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಎಂಕೆ ಸ್ಟಾಲಿನ್ ನೇತೃತ್ವದ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಮನವಿ ಮಾಡಿದೆ. ಕರ್ನಾಟಕಕ್ಕೆ ನೀಡಲಾದ ನಿರ್ದೇಶನಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಸಕ್ತ ನೀರಿನ ವರ್ಷದ ಉಳಿದ ಅವಧಿಯಲ್ಲಿಯೂ ನೀರು ಹರಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ನಿರ್ದೇಶಿಸಬೇಕೆಂದು ತಮಿಳುನಾಡು ಒತ್ತಾಯಿಸಿದೆ.

ತಾಲೂಕು ಕಚೇರಿ, ಅಧೀನ ಕಾರ್ಯಾಲಯದಲ್ಲಿ ಖಾಸಗಿ ವ್ಯಕ್ತಿಗಳು ಕಾರ್ಯ ನಿರ್ವಹಿಸಲು ಅವಕಾಶ ನೀಡಬೇಡಿ

ಸಿಬ್ಬಂದಿಗೆ ತಹಸೀಲ್ದಾರ್ ಗಿರೀಶ್ ಎಚ್ಚರಿಕೆ



ಮೈಸೂರು, ಆ.14(ಎಸ್‌ಬಿಡಿ)– ಮೈಸೂರು ತಾಲೂಕು ಕಚೇರಿ ಹಾಗೂ ಅಧೀನ ಕಚೇರಿಗಳಲ್ಲಿ ಖಾಸಗಿ ವ್ಯಕ್ತಿಗಳು ಕಾನೂನು ಬಾಹಿರವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಬಾರದು ಎಂದು ಸಿಬ್ಬಂದಿಗೆ ತಹಸೀಲ್ದಾರ್ ಗಿರೀಶ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ತಾಲೂಕು ಕಚೇರಿ, ಇಲವಾಲ, ವರುಣ ಹಾಗೂ ಜಯಪುರ ನಾಡಕಚೇರಿಗಳಲ್ಲಿ ಕಂದಾಯ ಸಿಬ್ಬಂದಿಯೊಡನೆ ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಸಾರ್ವಜನಿಕರು ಮೌಖಿಕವಾಗಿ ದೂರಿದ್ದು, ಇದು ಮೇಲಧಿಕಾರಿಗಳ ಗಮನಕ್ಕೂ ಬಂದಿದೆ. ಅನಧಿಕೃತ ಖಾಸಗಿ ವ್ಯಕ್ತಿಗಳು ಸರ್ಕಾರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುವುದು ಕಾನೂನು ಬಾಹಿರ. ಇದರಿಂದ ಆಡಳಿತ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಖಾಸಗಿ ವ್ಯಕ್ತಿಗಳ ಕಾರ್ಯ ನಿರ್ವಹಣೆಗೆ ಅನುವು ಮಾಡಿಕೊಟ್ಟರೆ ಅಂತಹ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು ಎಂದು ಜ್ಞಾಪನ ಪತ್ರದ ಮುಖೇನ ತಿಳಿವಳಿಕೆ ನೀಡಿದ್ದಾರೆ.

ಈ ಸಂಬಂಧ ತಹಸೀಲ್ದಾರ್ ಗಿರೀಶ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಇತ್ತೀಚೆಗೆ ಆರ್‌ಟಿಓ ಕಚೇರಿಯಲ್ಲಿ ಅನಧಿಕೃತ ವ್ಯಕ್ತಿಗಳು ಕಾರ್ಯ ನಿರ್ವಹಿಸುತ್ತಿರುವ ಸಂಬಂಧ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ನಮ್ಮ ಸಿಬ್ಬಂದಿಗೂ ಎಚ್ಚರಿಕೆ ನೀಡಲಾಗಿದೆ. ತಾಲೂಕು ಕಚೇರಿ ಹಾಗೂ ನಾಡ ಕಚೇರಿಗಳ ಸಿಬ್ಬಂದಿ, ಖಾಸಗಿ ವ್ಯಕ್ತಿಗಳು ಕಾರ್ಯ ನಿರ್ವಹಿಸಲು ಅವಕಾಶ ನೀಡಬಾರದು. ಒಂದು ವೇಳೆ ಅವಕಾಶ ನೀಡಿದರೆ ಅಂತಹವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಸೂಕ್ತ ಕ್ರಮಕ್ಕೆ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುದುವು ಎಂದು ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ, ಬಯೋಮೆಟ್ರಿಕ್ ಹಾಜರಾತಿ ಹಾಗೂ ಸಿಬ್ಬಂದಿ ಗುರುತಿನ ಚೀಟಿ ಧರಿಸುವುದು ಕಡ್ಡಾಯವಾಗಿದೆ. ಕಚೇರಿಗೆ ಹೋದಾಗ ಸಿಬ್ಬಂದಿ ಬದಲು ಬೇರೆ ಯಾರೋ ಇದ್ದರು ಎಂದು ಕೆಲವರು ಮೌಖಿಕವಾಗಿ ದೂರಿದ್ದಾರೆ. ಈ ಬಗ್ಗೆ ಸಿಬ್ಬಂದಿಗಳನ್ನು ವಿಚಾರಿಸಿದಾಗ ಆರೋಪವನ್ನು ತಳ್ಳಿ ಹಾಕಿದ್ದಾರೆ. ಆದಾಗ್ಯೂ ಈಗ ಎಲ್ಲರಿಗೂ ಎಚ್ಚರಿಕೆ ನೀಡಿದ್ದು, ಮುಂದಿನ ದಿನಗಳಲ್ಲಿ ದಿಢೀರ್ ಬೇಟಿ ನೀಡಿ ಪರಿಶೀಲಿಸಲಾಗುವುದು. ಈಗಾಗಲೇ ತಿಳಿವಳಿಕೆ ನೀಡಿರುವುದರಿಂದ ಯಾವುದೇ ಅವಕಾಶ ನೀಡದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

24 ಮನೆ ತೆಲುಗುಶೆಟ್ಟರ ಜನಾಂಗಕ್ಕೆ ನಿಗಮ ಮಂಡಳಿಯಲ್ಲಿ ಸ್ಥಾನ ಕಲ್ಪಿಸಲು ಆಗ್ರಹ

ಮೈಸೂರು, ಆ.14– ರಾಜ್ಯದಲ್ಲಿ ತೀರಾ ಹಿಂದುಳಿದ ಜನಾಂಗವಾದ 24 ಮನೆ ತೆಲುಗು ಶೆಟ್ಟರ ಜನಾಂಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನಿಗಮ ಮಂಡಳಿಯಲ್ಲಿ ಸೂಕ್ತ ಸ್ಥಾನ ಕಲ್ಪಿಸುವ ಮೂಲಕ ಈ ಸಮುದಾಯದ ಜನರಿಗೆ ಅನುಕೂಲ ಮಾಡುವುದರ ಜೊತೆಗೆ ಜನಾಂಗದ ಮಕ್ಕಳಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯ ಕಲ್ಪಿಸುವಂತೆ ಜನಾಂಗದ ರಾಜ್ಯ ನಿರ್ದೇಶಕರಾದ ಸಾಗರೆ ಎಸ್.ವಿ.ವಸಂತ್‌ಕುಮಾರ್ ಒತ್ತಾಯಿಸಿದ್ದಾರೆ.

ಭಾರತ ಇಬ್ಭಾಗವಾದ ದುರಂತ ದಿನ ಅಂಗವಾಗಿ ಬಿಜೆಪಿ ಪಂಜಿನ ಮೆರವಣಿಗೆ

ಮೈಸೂರು, ಆ.14(ಎಂಕೆ)– ಬಿಜೆಪಿ ನಗರ ಘಟಕದ ವತಿಯಿಂದ ಪಂಜಿನ ಮೆರವಣಿಗೆ ಮೂಲಕ ಭಾರತ ಇಬ್ಭಾಗವಾದ ದುರಂತ ದಿನ(ವಿಭಜನ್ ವಿಭಿಷಿಕ ಸ್ಮೃತಿ ದಿವಸ್) ಸ್ಮರಿಸಲಾಯಿತು.

ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಎದುರು ಜಮಾವಣೆಗೊಂಡ ನೂರಾರು ಮಂದಿ ಬಿಜೆಪಿ ಕಾರ್ಯಕರ್ತರು ಕೈಯ್ಯಲ್ಲಿ ಪಂಜಿನ ಜೊತೆಗೆ ಸ್ವಾತಂತ್ರ್ಯ ಹೋರಾಟ ಹಾಗೂ ದೇಶ ಇಬ್ಭಾಗವಾದ ಸಂದರ್ಭ ತಿಳಿಸುವ ಚಿತ್ರಪಟಗಳನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ದೇವಸ್ಥಾನದ ಎದುರಿನಿಂದ ಆರಂಭವಾದ ಮೆರವಣಿಗೆ ಜಯನಗರ, ಕೃಷ್ಣಮೂರ್ತಿಪುರಂನ ಪ್ರಮುಖ ಬೀದಿಗಳಲ್ಲಿ ಸಾಗಿ, ನ್ಯೂ ಕಾಂತರಾಜ್ ಅರಸ್ ರಸ್ತೆ ಮೂಲಕ ವಾಪಸ್ ಚಾಮುಂಡೇಶ್ವರಿ ದೇವಸ್ಥಾನದವರೆಗೆ ಸಾಗಿತು.



ಪಂಜಿನ ಮೆರವಣಿಗೆ ನೇತೃತ್ವ ವಹಿಸಿದ್ದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, 1947ರ ಆ.14ರ ಮಧ್ಯರಾತ್ರಿ ಭಾರತ ದೇಶ ಇಬ್ಭಾಗವಾದ ದುರಂತದ ದಿನವನ್ನು ಪಂಜಿನ ಮೆರವಣಿಗೆ ಮೂಲಕ ಸ್ಮರಿಸುವುದರೊಂದಿಗೆ ಯುವ ಜನಾಂಗಕ್ಕೆ ದೇಶ ಇಬ್ಭಾಗವಾಗಲೂ ಮುಖ್ಯ ಕಾರಣವೇನು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದೇವೆ. ದೇಶ ಎರಡು ಭಾಗವಾಗಬಾರದಿತ್ತು. ದೇಶದಲ್ಲಿ ಹಿಂದೂ–ಮುಸ್ಲಿಂ ಒಟ್ಟಾಗಿರಬೇಕು ಇಬ್ಭಾಗವಾಗುವುದು ಬೇಡ ಎಂದು ಮಹಾತ್ಮ ಗಾಂಧೀಜಿಯವರು ಹಾಗೂ ಅಂದಿನ ಬಿಜೆಪಿ ಪ್ರೇರಿತ ಸಂಘಟನೆಗಳು ಒತ್ತಾಯ ಮಾಡಿದ್ದರೂ ರಾತ್ರೋರಾತ್ರಿ ದೇಶವನ್ನು ವಿಭಜನೆ ಮಾಡಲಾಯಿತು. ಇದರ ನೈಜ ಇತಿ ಹಾಸವನ್ನು ಇಂದಿನ ಯುವ ಸಮೂಹ ತಿಳಿಯುವುದು ಅವಶ್ಯವಾಗಿರುವ ಹಿನ್ನೆಲೆಯಲ್ಲಿ ತಿಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು. ಮೇಯರ್ ಶಿವಕುಮಾರ್, ಉಪ ಮೇಯರ್ ಡಾ. ರೂಪ, ಪಾಲಿಕೆ ಸದಸ್ಯರಾದ ಮ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ, ಸುಬ್ಬಯ್ಯ, ರಮೇಶ್, ಸೌಮ್ಯ ಉಮೇಶ್, ಪ್ರಮೀಳಾ ಭರತ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್, ವಾಣೀಶ್, ಸಂಚಾಲಕ ಜೋಗಿ ಮಂಜು, ಸಹ ಸಂಚಾಲಕ ಆರ್.ಪರಮೇಶ್‌ಗೌಡ, ಮುಖಂಡರಾದ ವಡಿವೇಲು, ಗೆಜ್ಜಗಳ್ಳಿ ಮಹೇಶ್, ಅಜಯ್ ಶಾಸ್ತ್ರೀ, ವಿಕ್ರಂ ಅಯ್ಯಂಗಾರ್, ಶರತ್ ಭಂಡಾರಿ ಮತ್ತಿತರರಿದ್ದರು.

ಈ ಬಾರಿಯ ದಸರಾದಲ್ಲಿ ಏರ್ ಶೋ ಪ್ರಮುಖ ಆಕರ್ಷಣೆ

● ಏರ್ ಶೋಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮತಿ ● ಅತ್ಯಾಕರ್ಷಕ ದೀಪಾಲಂಕಾರಕ್ಕೆ 7 ಕೋಟಿ ● ಶೀಘ್ರವೇ ಬಸ್‌ನಲ್ಲಿ ಸಚಿವರ ಸಿಟಿ ರೌಂಡ್ಸ್ ● ಮೈಸೂರಿನ ಹಲವು ಭಾಗಕ್ಕೆ ಕಾಂಕ್ರೀಟ್ ರಸ್ತೆ ಯೋಗ ● ದಸರಾ ಕ್ರೀಡಾಕೂಟದಲ್ಲಿ 32 ವಿವಿಧ ಬಗೆಯ ಕ್ರೀಡೆ



ಮೈಸೂರು,ಆ.14(ಬಿಎಲ್‌ಯು)– ಈ ಬಾರಿಯ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದಲ್ಲಿ ಏರ್ ಶೋ ಪ್ರಮುಖ ಆಕರ್ಷಣೆಯಾಗಲಿದ್ದು, ದಸರಾಗೆ ಮತ್ತಷ್ಟು ಜನರನ್ನು ಆಕರ್ಷಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ದಸರಾದಲ್ಲಿ ಏರ್ ಶೋಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮತಿ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಏರ್ ಶೋಗೆ ಪೂರಕ ತಯಾರಿ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮೈಸೂರು ದಸರಾ ಬೆಳಕಿನ ಹಬ್ಬ ಎಂಬ ಮಾತಿದೆ. ಈ ಕಾರಣ ದಸರಾದಲ್ಲಿ ಅತ್ಯಾಕರ್ಷಕ ದೀಪಾಲಂಕಾರ ಮಾಡಬೇಕು. ಕೊಲ್ಕತ್ತಾ ಹಾಗೂ ಹೈದರಾಬಾದ್ ಮಾದರಿಯಲ್ಲಿ ಕಣ್ಣನ ಸೆಳೆಯುಂತಹ ದೀಪಾಲಂಕಾರ ಮಾಡಿ. ಅಲ್ಲಿಂದ ಹಲವು ಸಲಹೆಗಳನ್ನು ಪಡೆದು ಅನುಭವಸ್ಥರ ಮಾರ್ಗದರ್ಶನದಲ್ಲಿ ದೀಪಾಲಂಕಾರ ಮಾಡಬೇಕು. ದೀಪಾಲಂಕಾರಕ್ಕೆ ಕಳೆದ ಬಾರಿ 6.5 ಕೋಟಿ ರೂಪಾಯಿ ನೀಡಲಾಗಿತ್ತು. ಈ ವರ್ಷ ಇನ್ನೂ 50 ಲಕ್ಷ ಹೆಚ್ಚುವರಿಯಾಗಿ ನೀಡಲು ಸಿದ್ಧ. ಆದರೆ ವಿಶಿಷ್ಟ ರೀತಿಯ ದೀಪಾಲಂಕಾರ ಇರಬೇಕು ಎಂದು ಡಾ.ಹೆಚ್.ಸಿ.ಮಹದೇವಪ್ಪ, ಚೆಸ್ಕಾಂ ಅಧಿಕಾರಿಗಳಿಗೆ ತಾಕೀತು ಮಾಡಿದರು.

ದಸರಾ ವೀಕ್ಷಣೆಗೆ ದೇಶ–ವಿದೇಶದಿಂದ ಲಕ್ಷಾಂತರ ಜನರು ಬರುತ್ತಾರೆ. ಕಸ ವಿಲೇವಾರಿ ಮಾಡದೆ, ಗುಂಡಿ ಮುಚ್ಚದೆ ಅವ್ಯವಸ್ಥೆ ಇದ್ದರೆ ಮೈಸೂರಿಗೆ ಬರುವ ಹೊರಗಿನ ಜನರು ಹಿಡಿಶಾಪ ಹಾಕುತ್ತಾರೆ. ಈ ಕಾರಣದಿಂದ ರಸ್ತೆಗಳಲ್ಲಿ ಗುಂಡಿಗಳಿರಬಾರದು, ಕಸ ವಿಲೇವಾರಿ ಮಾಡಿ ಸ್ವಚ್ಛತೆ ಕಾಪಾಡಬೇಕು ಎಂದು ಸೂಚನೆ ನೀಡಿದರು.

ಶೀಘ್ರ ಸಿಟಿ ರೌಂಡ್: ಶೀಘ್ರದಲ್ಲೇ ಶಾಸಕರ ಜೊತೆ ಬಸ್‌ನಲ್ಲಿ ಸಿಟಿ ರೌಂಡ್ ಮಾಡುತ್ತೇನೆ. ಅಷ್ಟರಲ್ಲಿ ನಾವು ಸೂಚನೆ ನೀಡಿದ ಎಲ್ಲಾ ಕೆಲಸ ಕಾರ್ಯಗಳು ನಡೆದಿರಬೇಕು ಎಂದು ಡಾ.ಮಹದೇವಪ್ಪ ಅಧಿಕಾರಿಗಳನ್ನು ಎಚ್ಚರಿಸಿದರು. ದಸರಾ ಜಂಬೂ ಸವಾರಿ ಸಾಗುವ 6 ಕಿಲೋ ಮೀಟರ್ ತನಕ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗಿದೆ. ಮೈಸೂರು ನಗರದ ಉಳಿದ ಭಾಗದಲ್ಲಿ ಕೂಡ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗುವುದು. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಶೀಘ್ರದಲ್ಲೇ ಸಮಾಲೋಚನೆ ನಡೆಸುತ್ತೇನೆ ಎಂದರು.

ದಸರಾ ಕ್ರೀಡಾಕೂಟದಲ್ಲಿ ಒಟ್ಟು 32 ವಿವಿಧ ಬಗೆಯ ಕ್ರೀಡೆಗಳನ್ನು ಆಯೋಜಿಸಲಾಗುವುದು. ಕಳೆದ ಬಾರಿ 5 ಕೋಟಿ ರೂ. ನೀಡಲಾಗಿತ್ತು. ಆದರೆ ಈ ಬಾರಿ 8 ಕೋಟಿ ರೂಪಾಯಿಗೆ ಬೇಡಿಕೆ ಇಟ್ಟಿದ್ದಾರೆ. ಈ ಸಂಬಂಧ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡುತ್ತೇನೆ. ಆದರೆ ಕ್ರೀಡಾಪಟುಗಳಿಗೆ ಯಾವುದೇ ತೊಂದರೆ ಆಗದಂತೆ ಉತ್ತಮ ವ್ಯವಸ್ಥೆ ಮಾಡಬೇಕು. ಮೈಸೂರು ದಸರಾ ಬಗ್ಗೆ ಹೊರ ರಾಜ್ಯ ಹಾಗೂ ಹೊರ ದೇಶಗಳಲ್ಲಿ ಕೂಡ ಪ್ರಚಾರ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಚಾಮರಾಜನಗರ ದಸರಾ ಹಾಗೂ ಶ್ರೀರಂಗಪಟ್ಟಣ ದಸರಾಗೆ ತಲಾ 1 ಕೋಟಿ ನೀಡಲಾಗುತ್ತಿತ್ತು. ಆದರೆ ಈ ಬಾರಿ ಹೆಚ್ಚುವರಿ ಒಂದು ಕೋಟಿ ರೂಪಾಯಿಗೆ ಬೇಡಿಕೆ ಸಲ್ಲಿಸಿದ್ದಾರೆ. ಒಟ್ಟಾರೆ ಸರ್ಕಾರದಿಂದ 30 ಕೋಟಿ ರೂ. ಅನುದಾನದ ಅವಶ್ಯವಿದ್ದು, ಈ ವಿಚಾರವನ್ನು ಮುಖ್ಯಮಂತ್ರಿಗಳ ಮುಂದೆ ಇಡಲಾಗುವುದು ಎಂದು ಡಾ.ಮಹದೇವಪ್ಪ ತಿಳಿಸಿದರು.

ಗೋಲ್ಡ್ ಕಾರ್ಡ್‌ಗೆ ಆಸನ ವ್ಯವಸ್ಥೆ: ಇದೇ ವೇಳೆ ಮಾತನಾಡಿದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು, ದಸರಾ ಜಂಬೂಸವಾರಿ, ಟಾರ್ಚ್‌ಲೈಟ್ ಪರೇಡ್ ಸೇರಿದಂತೆ ಇತರೆ ಕಾರ್ಯಕ್ರಮಗಳ ವೀಕ್ಷಣೆಗೆ ಪ್ರತಿ ವರ್ಷ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗುತ್ತದೆ. ಆದರೆ ಸಾವಿರಾರು ರೂ. ನೀಡಿ ಗೋಲ್ಡ್ ಕಾರ್ಡ್ ಖರೀದಿಸುವವರಿಗೆ ಆಸನದ ವ್ಯವಸ್ಥೆ ಇರುವುದಿಲ್ಲ. ಇದರಿಂದ ಪ್ರವೇಶ ದ್ವಾರದಲ್ಲೇ ನಿಂತು ಅವರು ವಾಪಸು ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಗೋಲ್ಡ್ ಕಾರ್ಡ್ ಹೊಂದಿರುವವರಿಗೆ ಸೂಕ್ತ ಆಸನ ವ್ಯವಸ್ಥೆ ಮಾಡಬೇಕು ಎಂದು ಸಲಹೆ ನೀಡಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಡಿಸಿ ಡಾ.ರಾಜೇಂದ್ರ, ಗೋಲ್ಡ್ ಕಾರ್ಡ್ ಖರೀದಿಸುವವರಿಗೆ ದಸರಾದಲ್ಲಿ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು. ದಸರಾ ಆಹಾರ ಮೇಳ ಅತೀ ಹೆಚ್ಚು ಜನರನ್ನು ಆಕರ್ಷಿಸುತ್ತದೆ. ಇದರಿಂದ ಆಹಾರ ಮೇಳದಲ್ಲಿ ಭಾಗವಹಿಸುವ ವ್ಯಾಪಾರಸ್ಥರಿಗೆ ಹೆಚ್ಚಿನ ವ್ಯಾಪಾರವಾಗುತ್ತದೆ. ಸ್ಟಾಲ್‌ಗಳ ಹರಾಜು ಮಾಡಿ ಅದರಿಂದ ಆದಾಯ ಕ್ರೋಢೀಕರಿಸಲು ತೀರ್ಮಾನ ಮಾಡಲಾಗಿದೆ ಎಂದರು.

ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅನುಕೂಲ ಇರುವ ಕಾರಣ ಈ ಬಾರಿಯ ದಸರಾಗೆ ಶೇ.30 ರಷ್ಟು ಜನರು ಹೆಚ್ಚುವರಿಯಾಗಿ ಮೈಸೂರಿಗೆ ಬರುತ್ತಾರೆ. ಅವರಿಗೆ ತೊಂದರೆ ಆಗದಂತೆ ಅಗತ್ಯ ಕೆಎಸ್‌ಆರ್‌ಟಿಸಿ ಬಸ್ಸುಗಳ ವ್ಯವಸ್ಥೆ ಕೂಡ ಮಾಡಲಾಗುವುದು ಎಂದು ಡಿಸಿ ಡಾ.ರಾಜೇಂದ್ರ ಹೇಳಿದರು.

ಓವರ್‌ಟೇಕ್ ಮಾಡಿದ ವೆಂಕಟೇಶ್ ಮೇಲೆ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಕೋಪ!

ಮೈಸೂರು, ಆ.14(ಬಿಎಲ್‌ಯು)– ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ವರ್ತನೆಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೋಪೋದ್ರಿಕ್ತರಾದ ಪ್ರಸಂಗ ಸೋಮವಾರ ನಡೆಯಿತು. ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ದಸರಾ ಪೂರ್ವ ಸಿದ್ಧತೆಗಳ ಸಭೆಯಲ್ಲಿ, ಗ್ರಾಮೀಣ ದಸರಾ ಆಚರಣೆ ಬಗ್ಗೆ ಕೆ.ಆರ್.ನಗರ ಶಾಸಕ ರವಿಶಂಕರ್ ಪಟ್ಟು ಹಿಡಿದರು. ಕಳೆದ ಬಾರಿ 3 ಲಕ್ಷ ರೂಪಾಯಿ ನೀಡಲಾಗಿತ್ತು. ಆದರೆ ಈ ಬಾರಿ 8 ಲಕ್ಷ ರೂಪಾಯಿ ನೀಡುವಂತೆ ಕೇಳಿದರು.

ಗ್ರಾಮೀಣ ಭಾಗದ ಜನರಿಗೆ ಮೈಸೂರಿಗೆ ಬಂದು ದಸರಾ ನೋಡಲು ಕಷ್ಟವಾಗುತ್ತದೆ ಎಂಬ ಕಾರಣದಿಂದ ಗ್ರಾಮೀಣ ಪ್ರದೇಶದಲ್ಲಿ ದಸರಾ ಆಚರಣೆ ಆರಂಭಿಸಲಾಯಿತು. ಆದರೆ ಈಗ ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ವ್ಯವಸ್ಥೆ ಇರುವ ಕಾರಣ ಮೈಸೂರಿಗೆ ಬಂದು ದಸರಾ ವೀಕ್ಷಣೆ ಮಾಡಬಹುದು ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಭಿಪ್ರಾಯಪಟ್ಟರು. ಇದಕ್ಕೆ ಸಮ್ಮತಿ ಸೂಚಿಸಿದ ಡಾ.ಮಹದೇವಪ್ಪ ಈ ಬಾರಿ ಗ್ರಾಮೀಣ ದಸರಾ ಬೇಡವೇ ಬೇಡ ಎಂಬ ತೀರ್ಮಾನ ಪ್ರಕಟಿಸಿದರು.

ಈ ವೇಳೆ ಗ್ರಾಮೀಣ ದಸರಾ ಮಾಡಲೇಬೇಕು ಎಂದು ರವಿಶಂಕರ್ ಪಟ್ಟು ಹಿಡಿದರು. ಮೈಸೂರು ನಗರದಲ್ಲೇ ಬಹಳಷ್ಟು ಕೆಲಸ ಇರುತ್ತದೆ. ಗ್ರಾಮೀಣ ದಸರಾ ಮಾಡಿದರೆ ಅಧಿಕಾರಿಗಳು ಹಳ್ಳಿಗಳಲ್ಲೇ ಇರುತ್ತಾರೆ. ಇದರಿಂದ ನಗರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತೊಂದರೆ ಆಗುತ್ತದೆ. ಆದ ಕಾರಣ ಗ್ರಾಮೀಣ ದಸರಾ ಬೇಡ ಎಂದು ಡಾ.ಮಹದೇವಪ್ಪ ಹೇಳಿದರು.

ಆದರೆ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ವೆಂಕಟೇಶ್, ಗ್ರಾಮೀಣ ದಸರಾ ಮಾಡಲು 10 ಲಕ್ಷ ರೂಪಾಯಿ ಪ್ರಸ್ತಾವನೆ ಸಲ್ಲಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಮಾತುಕತೆ ನಡೆಸಿ ಹಣ ಕೊಡಿಸುತ್ತೇನೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣ ದಸರಾ ಬೇಡ ಎಂದು ಜಿಲ್ಲಾ ಉಸ್ತುವಾರಿ ಸಚಿವನಾದ ತಾನು ಹೇಳಿದರೆ, ಮುಖ್ಯಮಂತ್ರಿಯಿಂದಲೇ ಹಣ ಕೊಡಿಸುತ್ತೇನೆ ಎಂದು ಹೇಳಿದ ವೆಂಕಟೇಶ್ ಮಾತಿನಿಂದ ಡಾ.ಮಹದೇವಪ್ಪ ಅಧಿಕಾರಿಗಳ ಮುಂದೆ ಮುಜುಗರಕ್ಕೊಳಗಾದರು. ಆದರೆ ಅದನ್ನು ಅಧಿಕಾರಿಗಳ ಎದುರು ತೋರಿಸಿಕೊಳ್ಳದೆ ಒಳಗೊಳಗೆ ಗೊಣಗುತ್ತಾ ಪಕ್ಕದಲ್ಲೇ ಕುಳಿತಿದ್ದ ವೆಂಕಟೇಶ್ ಮೇಲೆ ಕೊಸರಿದರು. ಡಾ.ಮಹದೇವಪ್ಪ ಕೋಪ ಕಂಡ ವೆಂಕಟೇಶ್ ಮರು ಮಾತನಾಡದೆ ಮೌನಕ್ಕೆ ಶರಣಾದರು. ದಸರಾ ಜಂಬೂ ಸವಾರಿ ಹಾಗೂ ಟಾರ್ಚ್ ಲೈಟ್ ಪರೇಡ್‌ನಲ್ಲಿ ಪಥಸಂಚಲನ ಮಾಡುವಾಗ ಪೊಲೀಸರಲ್ಲಿ ಶಿಸ್ತು ಇರುವುದಿಲ್ಲ. ಪರೇಡ್‌ನಲ್ಲಿ ಪೊಲೀಸರು ಒಬ್ಬೊಬ್ಬರು ಒಂದೊಂದು ಕಡೆ ಕೈ ಬೀಸುತ್ತಿರುತ್ತಾರೆ. ಸರಿಯಾಗಿ ತಾಲೀಮು ನಡೆಸದ ಕಾರಣ ಹೀಗೆ ಆಗುತ್ತದೆ. ಆದ ಕಾರಣ ಪರೇಡ್‌ನಲ್ಲಿ ಶಿಸ್ತು ಇರುವಂತೆ ನೋಡಿಕೊಳ್ಳಿ ಎಂದು ಡಾ.ಮಹದೇವಪ್ಪ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದರು.

ದಸರಾ ಆಚರಣೆಗೆ ಜನಪ್ರತಿನಿಧಿಗಳ ನಾನಾ ಸಲಹೆ

"ದಸರಾ ವೇಳೆ ಕೆ.ಆರ್.ಆಸ್ಪತ್ರೆಗೆ ಹೋಗುವ ಮಾರ್ಗದಲ್ಲಿ ಆಂಬುಲೆನ್ಸ್ ಸಾಗಲು ತೊಂದರೆ ಆಗುತ್ತದೆ. ಜನರ ನಡುವೆ ಆಂಬುಲೆನ್ಸ್ ಸಿಲುಕಿಕೊಂಡರೆ, ರೋಗಿಗಳಿಗೆ ತೊಂದರೆ ಆಗುತ್ತದೆ. ಆದ ಕಾರಣ ಆಂಬುಲೆನ್ಸ್ ಹೋಗಲು ತೊಂದರೆ ಆಗದಂತೆ ನೋಡಿಕೊಳ್ಳುವುದು ಅಗತ್ಯ. ದಸರಾಗೆ ದೇಶ ವಿದೇಶದಿಂದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಕೊನೆ ದಿನ ನೂಕು ನುಗ್ಗಲು ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಿ. ಕೊನೆ ತನಕ ಉತ್ತಮ ವ್ಯವಸ್ಥೆ ಮಾಡಿ. ಕೊನೆ ದಿನ ಅವ್ಯವಸ್ಥೆ ಉಂಟಾದರೆ, ಸಣ್ಣ ಲೋಪದಿಂದ ಹೀಗಾಯಿತಲ್ಲ ಎಂದು ಕಣ್ಣೀರು ಹಾಕಬೇಡಿ. –ಜಿ.ಟಿ.ದೇವೇಗೌಡ, **ಚಾಮುಂಡೇಶ್ವರಿ ಕ್ಷೇತ್ರದ ಶಾಸಕ**

"ಒಂದೇ ಸೂರಿನಲ್ಲಿ ಮೈಸೂರಿನ ಹೆಸರಾಂತ ಬ್ರ್ಯಾಂಡ್ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕೆ ಅವಕಾಶ ನೀಡಬೇಕು. ಇದರಿಂದ ವಸ್ತುಗಳ ಗುಣಮಟ್ಟದ ಬಗ್ಗೆ ಜನರಿಗೆ ಖಾತರಿಯಾಗಿ, ಖರೀದಿ ಮಾಡುತ್ತಾರೆ. –ಟಿ.ಎಸ್.ಶ್ರೀವತ್ಸ, **ಕೆ.ಆರ್.ಕ್ಷೇತ್ರದ ಶಾಸಕರು**

"ಮೈಸೂರು ದಸರಾ ವಿಶ್ವ ವಿಖ್ಯಾತಿ ಹೊಂದಿದೆ. ಆದ ಕಾರಣ ಹೊರ ರಾಜ್ಯ ಹಾಗೂ ಹೊರ ದೇಶದಲ್ಲಿ ಕೂಡ ದಸರಾ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವುದು ಅತ್ಯವಶ್ಯ – ಶಿವಕುಮಾರ್, **ಮೇಯರ್**

"ಜಂಬೂ ಸವಾರಿ ಹೊರತುಪಡಿಸಿ ಇನ್ನುಳಿದ ಯಾವುದೇ ಕಾರ್ಯಕ್ರಮಗಳಿಗೆ ಪಾಸ್ ವ್ಯವಸ್ಥೆ ಬೇಡ. ಎಲ್ಲರಿಗೂ ಮುಕ್ತ ಅವಕಾಶ ಇರಲಿ. – ಪ್ರತಾಪ್ ಸಿಂಹ, **ಮೈಸೂರು–ಕೊಡಗು ಸಂಸದ**

ಲೋಗೋ, ಟ್ಯಾಗ್ ಲೈನ್ ನೀಡಿ ಬಹುಮಾನ ಗೆಲ್ಲಿ

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಜನರನ್ನು ಆಕರ್ಷಿಸುವ ಲೋಗೋ ಹಾಗೂ ಟ್ಯಾಗ್ ಲೈನ್ ಪ್ರಮುಖ ಪಾತ್ರ ವಹಿಸುತ್ತದೆ. ಪ್ರವಾಸೋದ್ಯಮ ಇಲಾಖೆ ದಸರಾ ಲೋಗೋ ಹಾಗೂ ಟ್ಯಾಗ್ ಲೈನ್ ನೀಡುವ ಅವಕಾಶವನ್ನು ಜನರಿಗೆ ನೀಡಿದೆ. ಇದಕ್ಕಾಗಿ ಬ್ರ್ಯಾಡಿಂಗ್ ಮೈಸೂರು ಸ್ಪರ್ಧೆ ಆಯೋಜಿಸಿದೆ. ಅತ್ಯಾಕರ್ಷಕ ಲೋಗೋ ಹಾಗೂ ಟ್ಯಾಗ್ ಲೈನ್ ನೀಡಿದವರಿಗೆ 3 ಬಹುಮಾನಗಳನ್ನು ನೀಡಲಾಗುತ್ತದೆ. ಮೊದಲ ಬಹುಮಾನ 20 ಸಾವಿರ, 2ನೇ ಬಹುಮಾನ 10 ಸಾವಿರ ಹಾಗೂ 3ನೇ ಬಹುಮಾನವಾಗಿ 5 ಸಾವಿರ ರೂ. ನೀಡಲಾಗುವುದು. ಡಾ.ಮಹದೇವಪ್ಪ ಬ್ರ್ಯಾಡಿಂಗ್ ಮೈಸೂರು ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಿದರು.

ರೈತರ ಸಮಗ್ರ ಸಮಸ್ಯೆಗಳಿಗೆ ಶೀಘ್ರ ಪರಿಹಾರ: ಡಾ.ಮಹದೇವಪ್ಪ ಭರವಸೆ

ಮೈಸೂರು,ಆ.14(ಎಂಕೆ)–ಕಬ್ಬಿಗೆ ಬೆಂಬಲ ಬೆಲೆ, ವಿದ್ಯುತ್ ಪೂರೈಕೆ, ನಾಲೆಗಳಲ್ಲಿ ಹೂಳೆತ್ತುವುದು, ಬ್ಯಾಂಕ್ ವ್ಯವಹಾರದಲ್ಲಾಗುತ್ತಿರುವ ತೊಂದರೆಗಳು ಸೇರಿದಂತೆ ರೈತರ ಸಮಗ್ರ ಸಮಸ್ಯೆಗಳ ಕುರಿತು ಶೀಘ್ರದಲ್ಲಿಯೇ ಕೃಷಿ ಇಲಾಖೆ, ಕಂದಾಯ, ನೀರಾವರಿ, ಸಕ್ಕರೆ ಹಾಗೂ ಕಾನೂನು ಸಚಿವರ ಸಮ್ಮುಖದಲ್ಲಿ ಚರ್ಚಿಸಿ ಬಗೆಹರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ಸೋಮವಾರ ಜಿಪಂ ಸಭಾಂಗಣದಲ್ಲಿ ರೈತ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ರೈತರ ಸಮಸ್ಯೆಗಳನ್ನು ಆಲಿಸಿದ ಸಚಿವರು, ತ್ವರಿತವಾಗಿ ರೈತರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಕಬ್ಬಿಗೆ ಬೆಂಬಲ ಬೆಲೆ, ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ ಬಾಕಿ ಹಣದ ಬಿಡುಗಡೆ, ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಪೂರೈಕೆ, ಬೆಳೆ ವಿಮಾ ಪರಿಹಾರ ಸೇರಿದಂತೆ ರೈತರು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಬಗೆಹರಿಸುವ ಜೊತೆಗೆ ಗೊಂದಲ ಸೃಷ್ಟಿಸಿರುವ ಕಾನೂನು, ಕಾಯ್ದೆಗಳ ಬಗ್ಗೆಯೂ ರೈತರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುವುದು ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, 2022–23ನೇ ಸಾಲಿನಲ್ಲಿ 150 ರೂ. ಹೆಚ್ಚುವರಿ ಕಬ್ಬು ದರ ನಿಗದಿ ಮಾಡಿದ್ದು, ಇನ್ನೂ ರೈತರ ಕೈ ಸೇರಿಲ್ಲ. ಹಾಗೆಯೇ ಪ್ರಸಕ್ತ ಸಾಲಿನಲ್ಲೂ ಕಬ್ಬಿನ ದರ ಹೆಚ್ಚಳವಾಗಬೇಕು. ಸುಮಾರು 160 ಮಂದಿ ರೈತರಿಗೆ ಹತ್ತಿ ಬೆಳೆಹಾನಿ ವಿಮಾ ಹಣ ಬಂದಿಲ್ಲ. ಬ್ಯಾಂಕ್‌ಗಳು ರೈತರಿಗೆ ಕಿರುಕುಳ ನೀಡುತ್ತಿದ್ದು, ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಪಡೆದ 2 ಲಕ್ಷ ರೂ ಸಾಲಕ್ಕೆ 10 ಲಕ್ಷಕ್ಕೂ ಹೆಚ್ಚು ಹಣ ಕಟ್ಟುವಂತೆ ನೋಟಿಸ್ ಕಳಿಸಿದ್ದಾರೆ ಎಂದು ರೈತರ ಸಮಸ್ಯೆಗಳನ್ನು ಬಿಚ್ಚಿಟ್ಟರು. ಕೂಡಲೇ ಪ್ರತಿಕ್ರಿಯಿಸಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಬಿ.ಎಸ್.ಚಂದ್ರಶೇಖರ್, ಜಿಲ್ಲೆಯಲ್ಲಿ 3600 ಮಂದಿ ರೈತರಲ್ಲಿ 79 ಮಂದಿ ಹೊರತುಪಡಿಸಿ ಉಳಿದೆಲ್ಲಾ ರೈತರಿಗೂ ಬೆಳೆ ವಿಮಾ ಹಣ ಬಿಡುಗಡೆಯಾಗಿದೆ. ಬ್ಯಾಂಕ್ ಅಥವಾ ಆಧಾರ್ ತಪ್ಪಾಗಿದ್ದಲ್ಲಿ ಸ್ವಲ್ಪ ಸಮಸ್ಯೆಗಳಾಗಿದ್ದು, ಸದ್ಯದಲ್ಲಿ ಗಮನಿಸಿ, ಬಗೆಹರಿಸಲಾಗುವುದು ಎಂದರು. ಬಳಿಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, 150 ರೂ. ಹೆಚ್ಚುವರಿ ಕಬ್ಬುದರ ನಿಗದಿ ಸಂಬಂಧ ಕೋರ್ಟ್ ತಡೆಯಾಜ್ಞೆ ನೀಡಿದ್ದು, ಕೋರ್ಟ್ ನಿರ್ದೇಶನದಂತೆಯೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದ ಕೂಡಲೇ ಪ್ರತಿಕ್ರಿಯಿಸಿದ ಉಸ್ತುವಾರಿ ಸಚಿವರು, ಈ ಸಂಬಂಧ ಕಾನೂನು ಸಚಿವರೊಂದಿಗೆ ಸಮಾಲೋಚನೆ ನಡೆಸಿ, ಪ್ರಕರಣ ಇತ್ಯರ್ಥಗೊಳಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ರೈತ ಮುಖಂಡರಿಗೆ ಸದ್ಯದಲ್ಲಿಯೇ ಉನ್ನತ ಮಟ್ಟದ ಸಭೆ ಕರೆದು ಚರ್ಚೆ ನಂತರ ನಿರ್ಧಾರ



ಚಳ್ಳೆಹಣ್ಣು ತಿನ್ನಿಸಿದರು: ಈ ಹಿಂದಿನ ಬಿಜೆಪಿ ಸರ್ಕಾರ ಕಬಿನ ದರವನ್ನು 150 ರೂ.ಹೆಚ್ಚಳ ಮಾಡಿ, ನಂತರ ರೈತರಿಗೆ ನೀಡದೆ ಚಳ್ಳೆಹಣ್ಣು ತಿನ್ನಿಸಿತು. ಆದೇಶ ಮಾಡಿದರೆ ಹೊರತು ಜಾರಿಗೆ ತರುವ ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ಈಗಿನ ಕಾಂಗ್ರೆಸ್ ಸರ್ಕಾರವಾದರೂ ಈ ಬಗ್ಗೆ ಗಮನ ಹರಿಸಬೇಕು. ಹಾಗೆಯೇ ರಂಗರಾಜನ್ ವರದಿ ಪ್ರಕಾರ ಕಬ್ಬಿನ ಬಾಕಿ ಹಣ ಸಂದಾಯ ಮಾಡಬೇಕು. ಸಾಗಣೆ ವೆಚ್ಚದಲ್ಲಿ, ಕಟಾವು ಕೂಲಿ ಹಾಗೂ ಇಳುವರಿಯಲ್ಲಿ ಮೋಸ ಮಾಡಲಾಗುತ್ತಿದ್ದು, ಸರ್ಕಾರ ಕೂಡಲೇ ಗಮನಿಸಬೇಕು ಎಂದು ರೈತರು ಆಗ್ರಹಿಸಿದರು.

ಕಬ್ಬು ಬೆಳೆಗಾರರಿಗೆ ಮೋಸ: ರೈತ ಮುಖಂಡ ಹೊಸಕೋಟೆ ಬಸವರಾಜು ಮಾತನಾಡಿ, ಅಳಗುಂಚಿ ಬಣ್ಣಾರಿ ಸಕ್ಕರೆ ಕಾರ್ಖಾನೆ ಎಫ್‌ಆರ್‌ಪಿ ನಿಯಮದಡಿ ಹೆಚ್ಚುವರಿಯಾಗಿ ಸಕ್ಕರೆ ಉತ್ಪಾದನೆಯಾಗಿದ್ದರೂ ರೈತರಿಗೆ ಹಣ ನೀಡಿದೆ ವಂಚಿಸಿದೆ ಎಂದು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತ ಶಿವಾನಂದ ಕಲಕೇರಿ, ಪರಿಶೀಲನೆ ನಡೆಸಿ ಕಾರ್ಖಾನೆ ಅಧಿಕಾರಿಗಳಿಗೆ ತಿಳಿಸಲಾಗುವುದು ಎಂದರು.

ಹಾಗೆಯೇ ಸಕ್ಕರೆ ಕಾರ್ಖಾನೆಗಳಲ್ಲಿ ತೂಕ ಯಂತ್ರಗಳ ಪರಿಶೀಲನೆ ಮತ್ತು ಸೂಕ್ತ ಸ್ಥಳದಲ್ಲಿ ಅಳವಡಿಕೆಯಾಗಬೇಕು. ಹಗಲು ಸಮಯ ನಿರಂತರವಾಗಿ 12 ಗಂಟೆ ವಿದ್ಯುತ್ ಪೂರೈಕೆಯಾಗಬೇಕು. ಕಾಡಂಚಿನ ಪ್ರದೇಶಗಳಲ್ಲಿ ಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಕಾಡುಪ್ರಾಣಿಗಳಿಂದ ಬೆಳೆ ಹಾನಿಯಾಗುತ್ತಿದ್ದು, ರೈತರಿಗೆ ಪರಿಹಾರ ದೊರಕುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಶೀಘ್ರದಲ್ಲಿಯೇ ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರಲ್ಲದೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗಿಯಾಗುವಂತೆ ಕೋರಿದರು. ರೈತ ಮುಖಂಡರಾದ ಪ್ರಸನ್ನ ಎನ್.ಗೌಡ, ಹೊಸೂರು ಕುಮಾರ್, ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಅತ್ತಳ್ಳಿ ದೇವರಾಜ್, ಮಂಜು ಕಿರಣ್ ಮತ್ತಿತರರಿದ್ದರು.

ಶೀಘ್ರ ಡಾ.ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಿ: ಸಚಿವ

ಮೈಸೂರು,ಆ.14(ಆರ್‌ಕೆ)– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ನಿರ್ಮಾಣ ಹಂತದಲ್ಲಿರುವ ಡಾ. ಅಂಬೇಡ್ಕರ್ ಭವನ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಧಿಕಾರಿಗಳೊಂದಿಗೆ ಕಾಮಗಾರಿ ಪರಿಶೀಲಿಸಿದ ಅವರು, ಬಾಕಿ ಉಳಿದಿರುವ ಕೆಲಸವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು, ಕಟ್ಟಡದ ಸುತ್ತ ಬೆಳೆದಿರುವ ಗಿಡಗಂಟಿಗಳನ್ನು ಸ್ವಚ್ಛಗೊಳಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ ಅವರು, ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಮುಡಾ, ನಗರಪಾಲಿಕೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ನೀಡುವಂತೆಯೂ ತಿಳಿಸಿದರು. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಡಾ.ರಾಕೇಶ್‌ಕುಮಾರ್, ಡಿಸಿ ಡಾ.ಕೆ.ವಿ. ರಾಜೇಂದ್ರ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಮೈಸೂರು ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಪಂ ಉಪ ಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಕಬ್ಬು ಬೆಳೆಗಾರರಿಂದ ಡಿಸಿ ಕಚೇರಿಗೆ ಮುತ್ತಿಗೆ ಯತ್ನ; ಕೆಲಕಾಲ ಪರಿಸ್ಥಿತಿ ಉದ್ವಿಗ್ನ

ಮೈಸೂರು, ಆ.14(ಪಿಎಂ)– ಪ್ರತಿ ಟನ್ ಕಬ್ಬಿನ 150 ರೂ. ಬಾಕಿ ಪಾವತಿಸಬೇಕು ಎಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕಬ್ಬು ಬೆಳೆಗಾರರು ಜಿಲ್ಲಾಧಿಕಾರಿ ಕಚೇರಿಗೆ ಸೋಮವಾರ ಮುತ್ತಿಗೆ ಹಾಕಲು ಯತ್ನಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಪೊಲೀಸರು ಹಾಗೂ ಕಬ್ಬು ಬೆಳೆಗಾರರ ನಡುವೆ ವಾಗ್ವಾದ ನಡೆಯಿತು. ಹೀಗಾಗಿ ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಲಲಿತಮಹಲ್ ಮೈದಾನದ ಬಳಿ ಸಮಾವೇಶಗೊಂಡ ನೂರಾರು ಕಬ್ಬು ಬೆಳೆಗಾರರು, ಪ್ರತಿಭಟನಾ ಮೆರವಣಿಗೆ ಮೂಲಕ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾಯಿಸಿದರು. ಮುತ್ತಿಗೆ ಹಾಕುವ ಮುನ್ಸೂಚನೆ ಇದ್ದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಜಮಾವಣೆಗೊಂಡಿದ್ದ ಪೊಲೀಸರು, ಜಿಲ್ಲಾಧಿಕಾರಿ ಕಚೇರಿ ಗೇಟ್‌ಗಳನ್ನು ಬಂದ್ ಮಾಡಿ ಒಳಪ್ರವೇಶಿಸದಂತೆ ತಡೆಯೊಡ್ಡಿದರು.

ಕೆಲಕಾಲ ಗೇಟ್‌ನಲ್ಲೇ ಕುಳಿತು ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿದ ಕಬ್ಬು ಬೆಳೆಗಾರರು, ಜಿಲ್ಲಾಧಿಕಾರಿ ಕಚೇರಿ ಆವರಣದ ಒಳಗೆ ಬಿಡುವಂತೆ ಪೊಲೀಸರನ್ನು ಒತ್ತಾಯಿಸಿದರು. ಕೊನೆಗೆ ಕೆಲವರು ಗೇಟ್ ಮೇಲೇರಿ ಒಳಪ್ರವೇಶಿಸಲು ಮುಂದಾದರು. ಈ ವೇಳೆ ಪೊಲೀಸರು ಹಾಗೂ ರೈತರ ನಡುವೆ ಮಾತಿನ ಚಕಮಕಿಯೂ ನಡೆಯಿತು.

ಗೇಟ್ ಮೇಲೇರಿದ್ದ ಕೆಲವರನ್ನು ವಶಕ್ಕೆ ಪಡೆಯುವ ವೇಳೆ ಪೊಲೀಸರು ಹಾಗೂ ರೈತರ ನಡುವೆ ತಳ್ಳಾಟ ನೂಕಾಟ ಉಂಟಾಯಿತು. ರೈತರೊಬ್ಬರು ಬಿದ್ದು ಅವರ ಕಾಲಿಗೆ ನೋವಾಗಿದೆ ಎಂದು ಇದೇ ವೇಳೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಪೊಲೀಸ್ ಜೀಪ್‌ನಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲದೆ, ವಶಕ್ಕೆ ಪಡೆದು ವ್ಯಾನ್‌ನಲ್ಲಿ ಕೂರಿಸಿದ್ದವರನ್ನು ಬಿಡಲಾಯಿತು.

ಕೊನೆಗೆ ಪೊಲೀಸರ ಕೋರಿಕೆ ಮೇರೆಗೆ ಸಮಾಧಾನಗೊಂಡ ರೈತರು, ಡಿಸಿ ಕಚೇರಿ ಗೇಟ್‌ನಲ್ಲೇ ಪ್ರತಿಭಟನೆ ಮುಂದುವರೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರಿನ ಬನ್ನೂರು–ತಿ.ನರಸೀಪುರ ರಸ್ತೆಯಲ್ಲಿಯೂ ರೈತರು ಜಮಾಯಿಸಿದ್ದ ಹಿನ್ನೆಲೆಯಲ್ಲಿ 3 ಗಂಟೆಗೂ ಹೆಚ್ಚು ಕಾಲ ಈ ಮಾರ್ಗದಲ್ಲಿ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಹೋರಾಟನಿರತ ರೈತರು ಇದೇ ರಸ್ತೆಯಲ್ಲಿ ಕುಳಿತು ಮಧ್ಯಾಹ್ನದ ಊಟವನ್ನು ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರ ಸಭೆ ನಿಮಿತ್ತ ಕಚೇರಿಯಿಂದ ಹೊರ ಇದ್ದ ಜಿಲ್ಲಾಧಿಕಾರಿಗಳು ಮಧ್ಯಾಹ್ನ 2.30ರ ಸುಮಾರಿಗೆ ಸ್ಥಳಕ್ಕೆ ಭೇಟಿ ನೀಡಿ, ಜಿಪಂ ಸಭಾಂಗಣದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಿಗಳ ಸಭೆ ಏರ್ಪಡಿಸಲಾಗಿದೆ. ಪ್ರತಿಭಟನೆ ಕೈಬಿಟ್ಟು ಸಭೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.



ಜಿಲ್ಲಾಧಿಕಾರಿ ಕಚೇರಿಗೆ ಸೋಮವಾರ ಮುತ್ತಿಗೆ ಹಾಕಿ ಗೇಟ್ ಮೇಲೆರುತ್ತಿರುವ ರೈತ ಹೋರಾಟಗಾರರು.

ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತ ಶಿವಾನಂದ ಹೆಚ್.ಕಲಕೇರಿ ಅವರೂ ಜಿಲ್ಲಾಧಿಕಾರಿಗಳೊಂದಿಗೆ ಸ್ಥಳಕ್ಕೆ ಆಗಮಿಸಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಗೇಟ್ ತೆರೆದು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ರೈತರನ್ನು ಬಿಟ್ಟರೆ ಬಳಿಕ ಸಭೆಯಲ್ಲಿ ಭಾಗವಹಿಸುವ ಬಗ್ಗೆ ನಿರ್ಧರಿಸುತ್ತೇವೆ ಎಂದು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಕೊನೆಗೆ ಎಲ್ಲರನ್ನು ಒಳಬಿಡಲಾಯಿತು. ಒಕ್ಕೂಟ ಹಾಗೂ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸೇರಿದಂತೆ ಕೆಲ ರೈತ ಮುಖಂಡರು ಸಭೆಯಲ್ಲಿ ಭಾಗವಹಿಸಲು ತೆರಳಿದರೆ, ಉಳಿದ ರೈತರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಉಳಿದಿದ್ದರು.

ಪ್ರತಿಭಟನೆ ಅಂತ್ಯ: ಇನ್ನೊಂದು ವಾರದೊಳಗೆ ಬೆಂಗಳೂರಿನಲ್ಲಿ ಸರ್ಕಾರದ ಮಟ್ಟದಲ್ಲಿ ಸಭೆ ನಡೆಸಿ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿ ಹಣವನ್ನು ಪಾವತಿಸಲು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಇಂದು ಜಿಪಂನಲ್ಲಿ ನಡೆದ ಸಭೆಯಲ್ಲಿ ಭರವಸೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಟ್ಟಿದ್ದೇವೆ. ವಾರದೊಳಗೆ ಬೇಡಿಕೆ ಈಡೇರಿಸದಿದ್ದರೆ ಮತ್ತೆ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ಕುರುಬೂರು ಶಾಂತಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

150 ರೂ. ಬಾಕಿಗೆ ಸಂಬಂಧಿಸಿದಂತೆ ಬಣ್ಣಾರಿ ಅಮ್ಮನ್ ಕಾರ್ಖಾನೆಯಿಂದ 22.5 ಕೋಟಿ ಹಾಗೂ ಮಹದೇಶ್ವರ ಸಕ್ಕರೆ ಕಾರ್ಖಾನೆಯಿಂದ 15 ಕೋಟಿ ರೂ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರೈತರಿಗೆ ಪಾವತಿ ಆಗಬೇಕಿದೆ. ಅಂತೆಯೇ ರಾಜ್ಯದಲ್ಲಿ ತೆಗೆದುಕೊಂಡರೆ 950 ಕೋಟಿ ರೂ. ಬಾಕಿ ಇದೆ ಎಂದರು. ಡಿಸಿಪಿ ಮುತ್ತುರಾಜ್, ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಕಬ್ಬು ಬೆಳೆಗಾರರ ಸಂಘದ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಅತ್ತಹಳ್ಳಿ ದೇವರಾಜ್, ಹಾಡ್ಯರವಿ ಸೇರಿದಂತೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಕಬ್ಬು ಬೆಳೆಗಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ಅಭಿನಂದನೆಗಳು
ರಾಷ್ಟ್ರಪತಿ ಪದಕ ವಿಜೇತರು ಹಾಗೂ
ಉಪ ಪೊಲೀಸ್ ಅಧೀಕ್ಷಕರಾದ
ದಕ್ಷ ಪೊಲೀಸ್ ಅಧಿಕಾರಿ
ಎಂ.ಶಿವಶಂಕರ್ ರವರಿಗೆ
ತುಂಬು ಹೃದಯದ
ಅಭಿನಂದನೆಗಳು
ಎಂ.ಶಿವಶಂಕರ್
ಉಪ ಪೊಲೀಸ್ ಅಧೀಕ್ಷಕರು
(ಡಿ.ವೈ.ಎಸ್.ಪಿ)
ಅಭಿನಂದಿಸುವವರು
ಸ್ವೀಟ್ಸ್ ಮಹೇಶ್
ಪ್ರದೀಪ್
ಅಂಬಾರಿ ಅಭ್ಯುದಯ ಪ್ರಾಜೆಕ್ಟ್


VISMAYA COMFORTS
ಆಳಾಗಬಲ್ಲವನು ಅರಸನಾಗಬಲ್ಲ
ಜೀವನ ತತ್ವದ ಸತ್ಯ ಸಂದೇಶದಂತೆ ಬಾಳಿ ಬದುಕಿ ಸಾವಿರಾರು ಜನರ
ಬದುಕಿಗೆ ಬೆಳಕಾದ ನಮ್ಮ ಬಾಳಿನ ಬೆಳಕು; ಪ್ರೀತಿಯ ತಾತನವರಾದ
ಶ್ರೀ ಸಂದೇಶ್ ನಾಗರಾಜ್ ರವರಿಗೆ
ಜನುಮದಿನದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ನಿಮಗೆ
ಆಯುರಾರೋಗ್ಯ ಭಾಗ್ಯ ಕರುಣಿಸಿ,
ಸದಾ ನಿಮ್ಮನ್ನು ಕಾಪಾಡಲಿ
ಎಂದು ಪ್ರಾರ್ಥಿಸುವ
ಹರ್ಷಲ್ ಸಂದೇಶ್
ಸಂದೇಶ್ ನಾಗರಾಜರ ಮೊಮ್ಮಗ
ಸಿಬ್ಬಂದಿವರ್ಗ
ವಿಸ್ಮಯ ಕಂಫರ್ಟ್ಸ್
ಮೈಸೂರು
ಹೃದಯ್ ಮಂಜೇಶ್
ಸಂದೇಶ್ ನಾಗರಾಜರ ಮೊಮ್ಮಗ


ನನ್ನಪ್ಪನಿಗೆ
ಜನುಮದಿನದ
ಶುಭಾಶಯಗಳು
" ಅಪ್ಪ , ಬದುಕಿನ ಹಾದಿಯಲ್ಲಿ ನನ್ನೊಂದಿಗೆ ನೀವಿರಲು ನನ್ನ ಬಳಿ ಸುಳಿಯಲೂ
ಭಯ, ಬೇಸರಕ್ಕೂ ಭೀತಿ: ನಿಮ್ಮ ಮಮತೆಯ ಮಡಿಲಲ್ಲಿ ನಮಗೆಲ್ಲಾ ಸದಾ ಸುಖ :
ಸಂತೋಷದ ಹೊನಲು. ನಿಮ್ಮ ಸಾನ್ನಿಧ್ಯದಲ್ಲೇ ಬಾಳುವ ಭಾಗ್ಯ ತಂದಿತ್ತ ನಾ ಭಗವಂತನಿಗೆ
ಕೋಟಿ ಕೋಟಿ ನಮನಗಳು. ನಿಮ್ಮ ನೆಮ್ಮದಿಯಲ್ಲಿ ನಮ್ಮೆಲ್ಲರ ನಲಿವಿದೆ.
- ಸಂದೇಶ್ .ಎನ್
ಉದ್ಯಮಿಗಳು ಹಾಗೂ ಚಿತ್ರ ನಿರ್ಮಾಪಕರು